CC-O. In Public Domain. Digitized by eGangotri

ವಿ.ವಾ. ಶಿರ್‌ವಾಡ್ಕರ್ ಅವರ

ನಟ ಸಾಮ್ರಾಟ

ಕೆ.ಜೆ.ರಾವ್

Sri Vidyabharatni Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ವಿ. ವಾ. ಶಿರ್‌ವಾಡ್ಕರ್ ಅವರ

ನಟ ಸಾಮ್ರಾಟ

(ನಾಟಕ)

ಭಾವಾನುವಾದ :
ಕೆ. ಜೆ. ರಾವ್

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು 560 009

Sri Vidyabharathi Book Centre, Sringeri

CC-O. In Public Domain. Digitized by eGangotri

NATA SAMRAT—Kannada adaptation of V. V. Shirwadkar's Marathi play of the same title by K. J. Rao, Bombay-400 031 and Published by P. N. Kamat. IBH Prakashana, Fifth Main, Gandhinagar, Bangalore-560 009

ಬೆಲೆ : ರೂ. 10.00

Copyright © 1981 ಅನುವಾದಕರು

Courtesy : Sri V. V. Shirwadkar and Sri Ramdas Bhatkal, M/s Popular Prakashan, Bombay.

ಅನುವಾದದ ಪೂರ್ಣಹಕ್ಕು ಅನುವಾದಕರದು. ಪ್ರದರ್ಶನಕ್ಕೆ ಮೊದಲು ಲಿಖಿತ ಅನುಮತಿ ಪಡೆಯಲೇ ಬೇಕು. ಗೌರವಧನ ನೂರುರೂಪಾಯಿ ಪ್ರದರ್ಶನದ ಮುಂಚಿತವಾಗಿಯೇ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದು :

K. J. Rao,
4/147, Sargam, Scheme No. 57
Road No. 9, Wadala,
BOMBAY-400 031

ಮೊದಲ ಮುದ್ರಣ : 1981 ಪ್ರಕಾಶಕರು : ಪಿ.ಎನ್. ಕಾಮತ್ ಐಬಿಎಚ್ ಪ್ರಕಾಶನ ಐದನೆಯ ಮುಖ್ಯರಸ್ತೆ ಗಾಂಧಿನಗರ ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ, ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು–560 054.

Sri Vidyabharathi Book Centre, Sringeri

CC-O. In Public Domain. Digitized by eGangotri

ಅ ರ್ಪ ಣೆ

ನನ್ನ ಪೂಜ್ಯ
ಮಾತೋಶ್ರೀಯವರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃತಜ್ಞತೆಗಳು

ಈ ನಾಟಕವನ್ನು ಭಾಷಾಂತರಿಸಲು ಅನುಮತಿ ಇತ್ತ ಶ್ರೀ ವಿ. ವಾ ಶಿರ್‌ವಾಡ್‌ಕರ್ ಮತ್ತು ಪಾಪ್ಯುಲರ್ ಪ್ರಕಾಶನದ ಶ್ರೀ ರಾಮದಾಸ್ ಭಟ್ಕಳ್ ರವರಿಗೆ.

ಈ ಸಾಹಸಕ್ಕೆ ಸಹಾಯ ಮತ್ತು ಸ್ಫೂರ್ತಿ ಇತ್ತ ನನ್ನ ಸ್ನೇಹಿತ ಸನ್ಮಾನ್ಯ ಶ್ರೀ ಕೆ. ಜಿ. ಕಾಮತರಿಗೆ.

ಹಸುಳೆ ಹೆಜ್ಜೆ ಇಡುವಾಗ ಹಿಮ್ಮೆಟ್ಟದಂತೆ ಹಸ್ತವನ್ನು ಹಿಡಿದು ಹಾದಿ ತೋರಿಸಿದ ನನ್ನ ಮಿತ್ರರಾದ ಹೆಸರಾಂತ ಸಾಹಿತಿ ಶ್ರೀ ವ್ಯಾಸರಾಯ ಬಲ್ಲಾಳರಿಗೆ ಹಾಗೂ ಕನ್ನಡದ ಕವಿ ಶ್ರೀ ಬಿ. ಎ. ಸನದಿಯವರಿಗೆ.

ಈ ನಾಟಕದಲ್ಲಿ ಸಂದರ್ಭಾನುಸಾರವಾಗಿ ಆಯ್ದುಕೊಂಡ ಕೆಲವು ಕಾವ್ಯ ಭಾಗಗಳನ್ನು ಬಳಸಿಕೊಳ್ಳಲು ತಮ್ಮ ಅನುಮತಿ ಇತ್ತು ಆಶೀರ್ವದಿಸಿದ ಕನ್ನಡ ಕವಿ ಪುಂಗವರಾದ ಕುವೆಂಪು, ಅಂಬಿಕಾತನಯದತ್ತ ಮತ್ತು ಕಡಲ ತೀರದ ಭಾರ್ಗವ ಶಿವರಾಮ ಕಾರಂತರಿಗೆ.

ನನ್ನ ಪ್ರಥಮ ಪ್ರಯತ್ನವನ್ನೇ ಪುಸ್ತಕರೂಪದಲ್ಲಿ ಪ್ರಕಾಶಕ್ಕೆ ತಂದು ಪ್ರೋತ್ಸಾಹಿಸಿದ ಶ್ರೀ ಜಿ. ಕೆ. ಅನಂತರಾಮ್‌ರವರಿಗೆ

—**ಕೆ. ಜೆ. ರಾವ್**

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಟ ಸಾಮ್ರಾಟ

ಪಾತ್ರ ವರ್ಗ

ಕೇಶವರಾವ್ ಜೋಶಿ	ನಟ ಸಾಮ್ರಾಟ
ಮಾಧವರಾವ್ ಜೋಶಿ	ಅವನ ಮಗ
ಶಾರದ ಜೋಶಿ	ಅವನ ಸೊಸೆ
ಮಾಲತಿ ದೇಶ್‌ಪಾಂಡೆ	ಅವನ ಮಗಳು
ಸುಧಾಕರ್ ದೇಶ್‌ಪಾಂಡೆ	ಅವನ ಅಳಿಯ
ಕಾವೇರಿ	ಅವನ ಹೆಂಡತಿ
ಸಖಾರಾಮ	ಮಗನ ಮನೆಯ ಆಳು
ಮೃಣಾಲಿನಿ ಜೋಶಿ	ಅವನ ಮಗನ ಮಗಳು (ಮೊಮ್ಮಗಳು)
ಟಿಕೆಟ್ ಚೆಕ್ಕರ್	ರೈಲ್ವೇ ಟಿಕೇಟ್ ಇನ್ಸ್‌ಪೆಕ್ಟರ್
ರೈಲ್ವೇ ಕೂಲಿ	ಸಾಮಾನು ಹೊರುವವ
ವಿಠಲ	ಮಗಳ ಮನೆಯ ಆಳು
ಕಂಬದ್ಕೋಣೆ	ಅಳಿಯನ ಕಂಪ್ನಿ ಮಾಲೀಕ
ಸರಸ್ವತಿ ಬಾಯಿ	ಕಂಬದ್ಕೋಣೆಯವರ ಹೆಂಡತಿ
ಶಂಕರ (ಡ್ರೈವರ್)	ಸುಧಾಕರನ ಡ್ರೈವರ್
ರಾಜ	ಬೂಟ್ ಪಾಲಿಶ್ ಮಾಡುವವ
ಪ್ರೇಕ್ಷಕ ೧	ನಾಟಕ ನೋಡಲು ಬಂದಿರುವ ಒಬ್ಬ
ಪ್ರೇಕ್ಷಕ ೨	ನಾಟಕ ನೋಡಲು ಬಂದಿರುವ ಇನ್ನೊಬ್ಬ
ಪೋಲೀಸ್ ಇನ್ಸ್‌ಪೆಕ್ಟರ್	ಪೋಲೀಸ್ ಖಾತೆಯ ಆಫೀಸರ್

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಟಸಾಮ್ರಾಟ

ಅಂಕ ೧

ದೃಶ್ಯ ೧

[ಪರದೆ ಮೇಲೇಳುವಾಗ ಮಂದಸ್ವರ ಸಮ್ಮಿಶ್ರ ವಾದ್ಯಸಂಗೀತ ಕೇಳಿ ಬರುತ್ತದೆ. ರಂಗಭೂಮಿಯಲ್ಲಿ ಬರೇ ನೀಲ ಪರದೆ ಇಳಿಯಬಿಟ್ಟಿದೆ. ರಂಗದ ಮಧ್ಯೆ ಕೈಇರುವ ಕುರ್ಚಿಯಲ್ಲಿ ಒಬ್ಬ ಮುದುಕ ಕುಳಿತು ನಿದ್ರಿಸುತ್ತಿದ್ದಾನೆ. ಕಚ್ಚೆಪಂಚೆ ಹಳೇ ಪದ್ಧತಿಯ ಉದ್ದಕೋಟು, ಮಫ್ಲರ್ ತಲೆಗೆ ಸುತ್ತಿಕೊಂಡಿದ್ದಾನೆ. ಕುರ್ಚಿಯಿದ್ದಲ್ಲಿ ಮಾತ್ರ ಪ್ರಕಾಶ. ಒಮ್ಮೆಗೇ ವೀಣೆಯ ತಂತಿ ಕಡಿದಂತೆ ಸಂಗೀತ ನಿಲ್ಲುತ್ತದೆ. ಮುದುಕ ನಿದ್ರೆಯಿಂದ ಎಚ್ಚತ್ತವನಂತೆ ಗಾಬರಿಯಿಂದ ಒಮ್ಮೆಗೇ ಎದ್ದು ಪ್ರೇಕ್ಷಕರ ಸುತ್ತ ನೋಡುತ್ತಾ, ಕೈಮುಗಿದು ಮಾತು ಪ್ರಾರಂಭಿಸುತ್ತಾನೆ.]

ರಸಿಕಮಿತ್ರರೇ ಕ್ಷಮಿಸ್ಬೇಕು. ಕ್ಷಮಿಸೀಂತ ಕೇಳೋದಕ್ಕೂ ನಾಚಿಕೆಯಾಗುತ್ತೆ. ಯಾತಕ್ಕೇಂದ್ರೆ ನಿಮ್ಮ ಅಮೂಲ್ಯ ಸಮಯಕ್ಕೂ ನಾನು ನನ್ನ ನಾಟಕದಷ್ಟೇ ಮಹತ್ವಕೊಡ್ತೇನೆ. ನಮ್ಮ ಕಂಪೆನಿ ಶಿಸ್ತು ಹೇಗಿತ್ತೂಂದ್ರೆ ಒಂಭತ್ತು ಘಂಟೆಗೆ ನಾಟಕ ಶುರುವಾಗ್ಬೇಕಾದ್ರೆ ಸರಿಯಾಗಿ ಎಂಟು ಘಂಟೆಯಾಗಿ ಅರುವತ್ತು ನಿಮಿಷಕ್ಕೇನೇ ಮೂರನೇ ಘಂಟೆ ಬಾರಿಸೋದು. ಈ ಇಪ್ಪತ್ತೈದು ವರ್ಷಗಳಲ್ಲಿ ಒಂದ್ನಿಮಿಷ ತಡವಾದ್ದು ಈ ಅಂಕದ ಪರದೆ ಕಂಡೇ ಇಲ್ಲ. (ಪಕ್ಕನೆ ನೆನಪು ಮಾಡಿಕೊಂಡು) ಅರೇ ನನ್ನ ಗಡಿಯಾರ ಎಲ್ಲಿಹೋಯ್ತು. (ಹಳೇ ಗಡಿಯಾರ ಹುಡುಕಿ ಹೊರತೆಗೆದು) ಸರಿ, ಮೈಸೂರಿನಲ್ಲಿ ನಡೆದಿತ್ತು ನಮ್ಮ ಹ್ಯಾಮ್ಲೆಟ್ ನಾಟಕಕ್ಕಾಗಿ ಸತ್ಕಾರ. ಆಗ ಮಹಾರಾಜರೇ ಪುರಸ್ಕಾರವಾಗಿ ಕೊಟ್ಟಿದ್ರೀ ಗಡಿಯಾರ. ಲಲಿತ ಕಲೋಪಾಸಕರೂಂದ್ರೆ ಅವರಿಗೆಷ್ಟು ಆದರಾಂತೀರಾ. ಆದ್ರಿಂದ್ಲೇ ಯಾವಾಗ್ಲೂ ಇದನ್ನ ಇಟ್ಕೋತೇನೆ ಅವರ ಸವಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನೆನಪಿಗಾಗಿ. ಈ ಗಡಿಯಾರ ಎಷ್ಟುಕಾಲ ನಡೆದುಕೊಂಡಿರುತ್ತೋ ಅಷ್ಟು ಕಾಲ ನಿರಂತರವಾಗಿ ಸಾಗೀತು ನನ್ನ ಜೀವನ ಅನ್ನೋ ಭರವಸೆ, ಯಾಕೋ ಏನೋ ನನ್ನ ಮನಸ್ಸಿನಲ್ಲಿ ಕೂತಿದೆ. ಸರಿ, ಹದಿನೈದು ನಿಮಿಷ ತಾನೆ ನಿಮ್ಮನ್ನು ಕಾಯಿಸಿದ್ದು—ಪರವಾಗಿಲ್ಲ.

(ತುಸು ಗಂಭೀರವಾಗಿ) ರಸಿಕ ಮಿತ್ರರೇ—ಇಲ್ಲ ನಾಟಕ ಶಿರೋಮಣಿ ವರದಾಚಾರ್ಯರಂತೆ ನಿಮ್ಮನ್ನ ಅನ್ನದಾತರೇ ಆಶ್ರಯದಾತರೇಂತ ಕರೆಯೋದೇ ಇಲ್ಲ. ಆ ಮಾತು ಆ ಸೌಜನ್ಯಮೂರ್ತಿ ವರದಾಚಾರ್ಯರಿಗೆ ಮಾತ್ರ ಶೋಭಿಸುತ್ತೆ. ವರದಾಚಾರ್ಯರೂಂದ್ರೆ ಕನ್ನಡ ರಂಗಭೂಮಿಯ ನಟ ನಕ್ಷತ್ರ, ಅಪೂರ್ವ ಆಭರಣ. ಪುಟ್‌ಲ್ಯಾಟಿನ ಪ್ರಕಾಶಕ್ಕೆ ಬೆಳಗಿದ ರಾಗರಂಜಿತ ಕಾಮನ ಬಿಲ್ಲು. ಬೆಳದಿಂಗಳು ಬಿದ್ದಲ್ಲಿ ಸುಗಂಧ ಹರಡಿದಂತೆ, ಸುಗಂಧ ಹರಡಿದಲ್ಲಿ ಇನಿದನಿ ಕೇಳಿದಂತೆ ವರದಾಚಾರ್ಯರ ವ್ಯಕ್ತಿತ್ವದಲ್ಲಿ ಗುಣಗಳೆಲ್ಲ ಒಂದನ್ನೊಂದು ಅರಸಿಕೊಂಡು ಹೋಗುವಂಥವು. ಗಂಭೀರವಾದ ಧ್ವನಿ, ಧ್ವನಿಗೆ ತಕ್ಕಂತೆ ಅಭಿನಯ. ಆದ್ರೆ ನಾವೆಲ್ಲ ಹಾಗಲ್ಲವೇನೋ, ಮಾತು ಒರಟು, ದನಿ ಕರ್ಕಶ. ನಮ್ಮ ನಿರ್ದಾಕ್ಷಿಣ್ಯ ನಡವಳಿಕೆ ನಿಮಗೆ ಹಿಡಿಸದೆ ಹೋದ್ರೆ ಅದರಲ್ಲಿ ಆಶ್ಚರ್ಯವೇನು ? ಕ್ಷಮಿಸಿ, ನಾನಷ್ಟು ನಮ್ರನಾಗಿರೋದಿಕ್ಕೆ ತಯಾರೇ ಇಲ್ಲ. ಅಲ್ಲಾ ಯಾಕೇಂತ ಯಾರಿಗಾದ್ರೂ ತಲೆಬಾಗಬೇಕು? ಈಗ ನೀವೆಲ್ಲಾ ನನ್ನ ಮೇಲೆಷ್ಟು ಪ್ರೀತಿಯಿಟ್ಟು ಸೇರಿದ್ದೀರಿ. ನಾನೇನು ನಿಮ್ಮ ಪ್ರೀತಿ ವಿಶ್ವಾಸಗಳ ಭಿಕ್ಷೆ ಬೇಡಿದ್ದೇನೆಯೇ. ಸರ್ವಥಾ ಇಲ್ಲ. ನಿಮ್ಮ ಪ್ರೀತ್ಯಾದರಗಳನ್ನು ಗೆದ್ದಿದ್ದೀನಿ. ನಲ್ವತ್ತು ವರ್ಷ ರಂಗಭೂಮಿಗಾಗಿ ದುಡಿದು ಈ ಅಭಿಮಾನವನ್ನ ಗಳಿಸಿದ್ದೀನಿ. ಹೀಗೆ ಹೇಳಿದ್ರೆ ಕೇಶವರಾವ್ ಜೋಶಿ ಬಹಳ ಅಹಂಕಾರಿ ಮನುಷ್ಯಾಂತ ಜನ ತಿಳ್ಕೋಬಹುದು. ತಿಳೀಲಿ ಪರವಾಗಿಲ್ಲ. ನನ್ನ ಹದಿನೈದನೇ ವಯಸ್ಸಿನಲ್ಲೇ ಮನೆಯ ನಾಲ್ಕೂ ಗೋಡೆಗಳು ಕುಸಿದಿದ್ದವು. ನನ್ನ ಪಾಲಿಗೆ ಆಕಾಶವೇ ಕಳಚಿಬಿದ್ದಂತಾಗಿತ್ತು. ಯಾರ ಸಹಾಯಾನೂ ಇದ್ದಿರಲಿಲ್ಲ. ಜೀವನದ ಮರಳು ಭೂಮಿಯ ಮೇಲೆ ಬರಿಗಾಲಲ್ಲಿ ನಡೆದಿದ್ದೆ. ಕಾಲ್ಕೆಳಗೆ ಸುಡುವ ನೆಲ, ತಲೆಯ ಮೇಲೆ ಉರಿಬಿಸಿಲು, ಆದರೂ ಎದೆಗುಂದದೆ ಸಾಗಿದ್ದೆ ಯಾವುದೋ ಅದೃಶ್ಯವಾಣಿ ಕರೆದತ್ತ. ಈಸಬೇಕು ಇದ್ದು ಜೈಸಬೇಕು ಎಂಬ ನಂಬಿಕೆಯಲ್ಲೇ ಬದುಕಿನ ದಾರಿಯುದ್ದಕ್ಕೂ ಸಂಗ್ರಹಿಸಿದ ಸ್ನೇಹ, ಅಭಿಮಾನ, ದ್ವೇಷ, ಮಾತ್ಸರ್ಯ, ಒಲವು, ಕರುಣೆ, ಕ್ರೌರ್ಯ ಇವೆಲ್ಲವುಗಳನ್ನು ಜೋಳಿಗೆಯಲ್ಲಿ ತುಂಬಿಕೊಂಡು ಜೀವನದ ದಾರಿ ಸಾಗುತ್ತಿದ್ದಂತೆ ಬಂತೊಂದು ದಿನ, ಮನಸ್ಸಿನ ಆಳದಲ್ಲಿ ನನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಬದುಕಿನ ಸಾಕ್ಷಾತ್ಕಾರದದಿನ. ಬದುಕ ಬೇಕೆನಿಸಿದರೆ ರಂಗಭೂಮಿಯಲ್ಲೇ ಬಾಳು, ರಂಗಭೂಮಿಗಾಗಿ ಬಾಳು ಎಂದು. ನಲ್ವತ್ತು ವರ್ಷಗಳ ಹಿಂದೊಂದು ಶುಭದಿನ ರಾಜಮಕುಟವ ಧರಿಸಿ, ರಂಗದೇವತೆಗೆ ನಮಿಸಿ ಪ್ರವೇಶಿಸಿದೆ ರಂಗಭೂಮಿಗೆ. ಅಂದೇ ಮೆರೆದೆ ಸಮರ್ಥ ನಟನೆಂದು. ಮುಂದಿನದೆಲ್ಲಾ ನಿಮಗೆ ಗೊತ್ತೇ ಇದೆ ಯಲ್ಲಾ. ನಾನು ಹೇಳಬೇಕಾದ್ದೇನಿಲ್ಲ. ಆದರೆ ಮಿತ್ರರೇ ಇಷ್ಟು ಮಾತ್ರ ಸತ್ಯ. ದಾರಿಕಾಣದ ನಾನು ದಡ ಮುಟ್ಟಿದ್ದು ಸತ್ಯ. ಗುಬ್ಬಿವೀರಣ್ಣನಂಥ ಹಿರಿಯರು ಹರಸಿ ಕೊಂಡಾಡಿದರು, ಕಲೋಪಾಸಕರು ಪ್ರೋತ್ಸಾಹಿಸಿದ್ರು, ರಸಿಕಮಿತ್ರರು ಮೆಚ್ಚಿದ್ರು, ಇನ್ನೇನು ಬೇಕು ನನಗೆ ? ಒಬ್ಬ ನಟನ ಜೀವನದಲ್ಲಿ ಏನೆಲ್ಲ ಆಸೆ ಆಕಾಂಕ್ಷೆಗಳಿವೆಯೋ ಅವೆಲ್ಲಾ ನೆರವೇರಿವೆ. ಕೀರ್ತಿ, ಶ್ರೇಯಸ್ಸು, ಪುರಸ್ಕಾರ, ಆದರ ಇವೆಲ್ಲ ನನ್ನ ಪಾಲಿಗೆ ಬೇಕಾದಷ್ಟು ಬಂತು. ಇಂಥ ಸಂತೋಷದ ಭರದಲ್ಲಿ ಒಂದಿಷ್ಟು ಜಂಭ ಮೈ ತುಂಬಿಕೊಂಡ್ರೆ ತಪ್ಪೇನದರಲ್ಲಿ ? ತಪ್ಪಿದ್ರೆ ಕ್ಷಮಿಸ್ಬೇಕು. ನಿಜವಾಗಿ ಹೇಳಲೇ, ಒಬ್ಬ ಮನುಷ್ಯನಿಗೆ ಮುದಿ ವಯಸ್ಸಿನಲ್ಲಿ ಕೊಂಚ ಅಹಂಕಾರಾನೂ ಇರಲೇಬೇಕು. ಜಂಭದ ಹೊದಿಕೆಯ ರಕ್ಷೆ ಕುಗ್ಗಿದ ದೇಹಕ್ಕೆ ಬೇಕೇ ಬೇಕು. ಒಂದು ಸಂಗತಿ ಹೇಳ್ತೀನಿ ಕೇಳಿ,— ಒಂದುದಿನ ಬಸ್ಸಿಗಾಗಿ ನಿಂತಿದ್ದೆ. ಹನುಮಂತನ ಬಾಲದ ಹಾಗೆ ಅಷ್ಟುದ್ದ ಕ್ಯೂ ಇತ್ತು. ಕಾದುಕಾದು ಕಾಲುಗಳಲ್ಲಿ ಶಕ್ತೀನೇ ಉಡುಗಿಹೋಗಿತ್ತು. ಅಷ್ಟರಲ್ಲಿ ಬಸ್ಸು ಬಂತು. ಆದ್ರೆ ಕುಂಟಿಕೊಂಡು ಮುಂದುವರಿಯುವಷ್ಟರಲ್ಲಿ ಬಸ್ಸು ಹೊರಟೇ ಹೋಯ್ತು. Time and Tide waits for no man, you see. ಆಗ ಒಂದಾಶ್ಚರ್ಯ ಏನಾಯ್ತು ಗೊತ್ತೇ ? ಮುಂದಕ್ಹೋದ ಬಸ್ಸಿಗೆ ಬ್ರೇಕ್ ಬಿತ್ತು. ಬಸ್ಸು ಅಲ್ಲೇ ನಿಂತುಬಿಡ್ತು. ನನ್ನನ್ನೇ ನೋಡ್ತಿದ್ದ ಕಂಡಕ್ಟರ್ ಓಡಿಬಂದ. ನನ್ನ ಕೈಲಿರೋ ಚೀಲ ಹಿಡಿದುಕೊಂಡ. ನನ್ನನ್ನು ಕೈಹಿಡಿದು ಬಸ್ಸಿನಲ್ಲಿ ಕರೆದುಕೊಂಡು ಹೋದ. ಜತೆಯಲ್ಲಿ ಹೋಗ್ತಾ ತಾವೇ ಅಲ್ವೇ ಕೇಶವರಾವ್ ಜೋಶಿ ? "ಕ್ಷಮಿಸಿ ನನಗೆ ಗುರುತೇ ಸಿಕ್ಕಲಿಲ್ಲ" ಅಂತ ಬಾರಿ ಬಾರಿ ಕ್ಷಮೆ ಬೇಡಿದ, ಕಾಲು ಹಿಡಿದು ನಮಸ್ಕಾರ ಮಾಡಿದ. ಅಲ್ಲಾ, ನೋಡಿದ್ರಾ ನಮ್ಮಂಥಾ ಮನುಷ್ಯರಿಗೂ ಇಂಥವರು ಒಮ್ಮೊಮ್ಮೆ ಸಿಗ್ತಾರೆ. ಆಗ ಈ ಮುಪ್ಪಿನ ಶರೀರಕ್ಕೂ ಅಹಂಕಾರದ ಮುದ್ರೆ ಎದ್ದು ತೋರಿಸುತ್ತೆ— ಜಗತ್ತಿನಲ್ಲಿ ಮಗನೇ ನಿನಗೂ ಒಂದು ಸ್ಥಾನ ಇದೇಂತ. ಆದ್ರೆ ರಸಿಕ ಬಂಧು ಭಗಿನಿಯರೇ, ನಿಜವಾಗಿ ಹೇಳ್ಬೋದಾದ್ರೆ ಇಂಥಾ ಸ್ವಾಭಿಮಾನಕ್ಕೆ ಕಾರಣರಾದ ನಿಮ್ಮ ಚರಣಗಳಿಗೆ ಮಾತ್ರ ನಾನು ಸದಾ ನಮ್ರನಾಗಿದ್ದೀನಿ. ನಿರ್ಗತಿಕ ಅಂತಲ್ಲ,

Sri Vidyabharathi Book Centre, Sringeri

CC-O. In Public Domain. Digitized by eGangotri

ಕೇವಲ ನಮ್ರತೆಯಿಂದ. ನಿಮ್ಮ ಪ್ರೀತಿ ವಿಶ್ವಾಸಗಳಲ್ಲೇ ನಾನು ಕಂಡಿದ್ದೀನಿ ನನ್ನ ಕಾಶಿ ರಾಮೇಶ್ವರವನ್ನ. ಜೀವನವಿಡೀ ಇಂಥಾ ಪುಣ್ಯಕ್ಷೇತ್ರದಲ್ಲೇ ಕಾಲ ಕಳೆದ ನನ್ನನ್ನು ನೀವೇ ಪ್ರೀತಿಯ ನೀರೆರೆದು ಪೋಷಿಸಿದ್ದೀರಿ, ಪ್ರೇಮದಿಂದ ಗುಣಗಾನ ಮಾಡಿದ್ದೀರಿ, ಸತ್ಕಾರದ ನೆಪದಲ್ಲಿ ಮತ್ತೆ ನಿಮ್ಮೆದುರಿಗೆ ಈಗ ನಿಲ್ಲಿಸಿದ್ದೀರಿ. ನಿಮ್ಮ ಅಭಿಮಾನದ ದ್ಯೋತಕವಾಗಿ ಈ ಹಾರ ಹಾಕಿ ಗೌರವಿಸಿದ್ದೀರಿ. ನಟ ಸಂಮ್ರಾಟನೆಂಬ ಬಿರುದಿನ ಪದಕವನ್ನೂ ಒಪ್ಪಿಸಿದ್ದೀರಿ. ಸಾಲದ್ದಕ್ಕೆ ಈ ಐವತ್ತು ಸಾವಿರ ರೂಪಾಯಿ ನಗದು ಹಣವುಳ್ಳ ಉಡುಗೊರೆಯಿತ್ತು ನನ್ನ ಜೀವನ ಸಂತೋಷಕರವಾಗ್ಲೀಂತೂ ಹಾರೈಸಿದ್ದೀರಿ. ಇದಕ್ಕೆ ಪ್ರತಿಯಾಗಿ ಕೃತಜ್ಞತೆಯನ್ನರ್ಪಿಸಲು ನನಗೆ ಮಾತುಗಳೇ ಬರೋದಿಲ್ಲ. ತಕ್ಕ ಶಬ್ದಗಳೇ ಹೊರಡೋದಿಲ್ಲ. ಯಾವ ಶಬ್ದಗಳನ್ನುಪಯೋಗಿಸಿದ್ರೂ ಅವು ಬರೇ ಶಬ್ದಗಳಾಗಿಯೇ ಉಳಿದಾವು. ನಟವರೇಣ್ಯನೊಬ್ಬನ ಭಾಷಾಶೈಲಿಯಲ್ಲಿ ಶಬ್ದಗಳಿಗೇನು ಕೊರತೆಯೇ ಎಂದು ನೀವು ಕೇಳಬಹುದು. ಆದರೆ ಈ ಕ್ಷಣ ಮಾತ್ರ ಹೃದಯ ತುಂಬಿ ಎಲ್ಲವೂ ಮರೆತಂತಾಗಿದೆ. ನೀವಿದನ್ನು ನಂಬಬೇಕು. ನಂಬಿ ನನ್ನನ್ನು ಮನ್ನಿಸಬೇಕು. ಒಬ್ಬ ಮನುಷ್ಯನ ಜೀವನದಲ್ಲಿ ಶಾಂತಿ ಸಂತೃಪ್ತಿಗಳೇ ಅವನ ವೃದ್ಧಾಪ್ಯದ ಬಯಕೇಂತಾದ್ರೆ ಇವೆರಡೂ ನನಗೆ ಸಿಕ್ಕಿವೆ. Shakespeare ನ King Lear ನಾಟಕ ನೆನಪಿಗೆ ಬಂತು. ಅದರಲ್ಲಿ ತನ್ನ ಸ್ವಂತ ಎರಡು ಮಕ್ಕಳೇ ಸರ್ಪದಂತೆ ಹೆಡೆಯೆತ್ತಿ ನಿಂತಾಗ ಲೀಯರ್ ಮಹಾರಾಜ ಹೇಳಿದ ಮಾತುಗಳೇನು ಗೊತ್ತೇ.

[ದುರಂತವನ್ನು ಸೂಚಿಸುವ ವಾದ್ಯ ಸಂಗೀತ]

(ಎದ್ದು ನಿಂತು ಅಭಿನಯ ಪೂರ್ವಕವಾಗಿ)

Flash Back

ಓ ಸ್ವರ್ಗೀಯ ಶಕ್ತಿಗಳೇ
ನೀಡಿರೆನ್ನಯ ಮನಕೆ ಶಿಲಾಕಾಠಿಣ್ಯತೆಯ.
ಬೇಕೆನಗೆ ಸಾಮರ್ಥ್ಯ, ಸಹನೆಗೈಯುವ ಶಕ್ತಿ ;
ವಯದಿಂದ, ವ್ಯಥೆಯಿಂದ ಜರ್ಝರಿತನಾಗಿಹೆನು
ಈ ವೃದ್ಧ, ಅಂಗಣದ ಬಾಗಿಲೊಳು
ಬೇಡುತ್ತ ನಿಂದಿಹೆನು ! ಓ ದೇವದೇವತೆಗಳೇ
ಕರುಣೆಸಿರಿ ವರದಾನ, ಸ್ಥೈರಣೆಯ ವರದಾನ,

Sri Vidyabharathi Book Centre, Sringeri

CC-O. In Public Domain. Digitized by eGangotri

ಎನ್ನ ಕುವರಿಯೀರ್ವರ ಹೃದಯದಲಿ
ನೀವೆ ತುಂಬಿರಬಹುದು, ಕೃತಘ್ನತೆಯ ವಿಷವ
ಆದರೂ ನೀವೆನ್ನ ಅಪಹಾಸ್ಯಗೈಯದಿರಿ
ಅವರೆದುರು ಕೈಚಾಚಿ ಬೇಡುವಂತೆಸಗದಿರಿ
ನನ್ನೀ ಅಂತಃಕರಣವೆ ಸಿಡಿದೆದ್ದು ಉರಿದರೂ
ಈ ವನಿತೆಯರ ವಂಚನೆಗೆ ನಾ ಬಾಗಲಾರೆ.
ಓ ನಿರ್ಲಜ್ಜ ಕಾಮಿನಿಯರೇ ! ಸೇಡು ತೀರಿಸುವೆ ನಾ
ಎಚ್ಚರಿಕೆ ! ನನ್ನ ರೋಷದಾವೇಶದಲಿ ನಿಂತ
ನೆಲವೆ ನಡುಗೀತು ! ಹಾಹಾಕಾರವೆದ್ದೀತು ! ಎಚ್ಚರಿಕೆ
ಏಂಗೈವೆ ನಾನೆಂದು ತಿಳಿಯಲೊಲ್ಲದು ನನಗೆ,
ತಾಳ್ಮೆ ತಪ್ಪಿಹುದು ದಿಟ, ಆದರೂ ಅಳಲಾರೆ !
ಅಳುವಿನಾ ಮಹಾಪೂರವಿದೆ ಸಹಜ, ಆದರೂ ಅಳಲಾರೆ !
ಏನಾದರಾಗಲಿ ! ಎಂತಾದರಾಗಲಿ !
ನನ್ನೆದೆಯೆ ನುಚ್ಚುನೂರಾಗಿ ಬೀಳಲಿ !
ಕಂಬನಿಯ ಬಿಂದು ಕಣ್ಣೆವೆಯ ಅಂಚಿನಲಿ
ಮಡುವುಗಟ್ಟುವ ಮೊದಲೆ, ಹುಚ್ಚನಾದೇನು
ಮತಿಹೀನನಾದೇನು, ಆದರೂ ಅಳಲಾರೆ !
ಅಳುತ ಬದುಕಿರಲಾರೆ !

[ಲೀಯರ್‌ನ ಮಾತುಗಳನ್ನು ಅಭಿನಯ ಪೂರ್ವಕವಾಗಿ ಉಲ್ಲೇಖಿಸಿ ಕುರ್ಚಿಮೇಲೆ ಕುಳಿತುಕೊಂಡು ತನ್ನಷ್ಟಕ್ಕೇ ನಸುನಕ್ಕು]

ಒಂದೊಮ್ಮೆ ಕವಿಶ್ರೇಷ್ಠ ಡಿ.ವಿ.ಜಿ.ಯವರ ಹತ್ತಿರ ಮಾತಾಡ್ತಿದ್ದೆ. ಡಿ.ವಿ.ಜಿ. ಯವರೂಂದ್ರೆ ಶೇಕ್ಸ್‌ಪಿಯರ್‌ನ ಅಭಿಮಾನಿ. ನಾನವರಿಗೆ ಹೇಳಿದೆ, ನೋಡಿ ಗುಂಡಪ್ಪನವರೇ ಈ ನಿಮ್ಮ ಶೇಕ್ಸ್‌ಪಿಯರ್ ನಾಟಕ್ಕಾರ್ನೇ ಅಲ್ಲ. ಅವನೊಬ್ಬ ಸೈತಾನ, ದುರಂತವನ್ನೇ ಚಿತ್ರಿಸುವ ಪಾಷಂಡೀಂತ. ಅವರು ಆಗ ಮಾತಾಡ್ಲಿಲ್ಲ–ಸುಮ್ಮನಿದ್ರು. ಇರಲಿ ಮುಂದಕ್ಕೆ ನಿಮಗೇ ತಿಳಿದೀತರೂಂತಷ್ಟೇ ಹೇಳಿದ್ರು. ಅವರು ಹೇಳಿದ ಅರ್ಥ ನನಗಾಮೇಲೆ ತಿಳೀತು. ಲೀಯರ್ ರಾಜನ ಪಾತ್ರವನ್ನು ನಾನು ಅಭಿನಯಿಸುತ್ತಿದ್ದಾಗ ಮುದುಕರ ಕಣ್ಣುಗಳಲ್ಲಿ ನೀರು ತುಂಬಿರಲಿಲ್ಲ. ಕಣ್ಣೊರಸಿಕೊಂಡವರೂಂದ್ರೆ ತರುಣ ಪೀಳಿಗೆಯವರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ರೆ ಈ ವಯೋವೃದ್ಧರು ಮಾತ್ರ ಒಳಗಿಂದೊಳಗೇ ಸಂಕಟಪಡ್ತಿರೋದು ಅವರ ಭಯಾನಕ ಮುಖ ಮುದ್ರೆಯಿಂದ್ಲೇ ಗುರುತಿಸಬಹುದಾಗಿತ್ತು. ಅವರ ಅಂತಃಕರಣದಲ್ಲಾಗ್ತಿರೋ ವೇದನೆಯನ್ನು ನಾನು ನನ್ನ ಹೃದಯದಲ್ಲಿ ಅನುಭವಿಸ್ತಾ ಇದ್ದೆ. ನಾನೆಷ್ಟು ಆ ಪಾತ್ರದಲ್ಲಿ ತಲ್ಲೀನನಾಗಿದ್ದೇಂದ್ರೆ ಪ್ರೇಕ್ಷಕರು ನನ್ನ ಅಭಿನಯದಲ್ಲಿ ಲೀನರಾದಂತೆ ನಾನೂ ಅವರನ್ನ ಮಾಟಗಾರನಂತೆ ಮಂತ್ರಿಸಿದ್ದೆ. ಆಗ ತಿಳೀತು ಈ ಮಾಟ ಸೈತಾನಂದೂ ಅಲ್ಲ ದೇವರದ್ದೂ ಅಲ್ಲ ಕೇವಲ ನಾಟಕಕಾರನದ್ದೂಂತ (ನಗುತ್ತಾ) ಶೇಕ್ಸ್‌ಪಿಯರ್ ದುರಂತವನ್ನೇ ಬಯಸ್ತಿದ್ದ ಯಾಕೆ? ಅವನಿಗೆ ಚೆನ್ನಾಗಿ ಮನವರಿಕೆಯಾಗಿದ್ದಿರಬೇಕು ದುಃಖದ ಭಾರವನ್ನಾದ್ರೂ ಮುದುಕರು ಸಹಿಸಬಹುದು, ಸುಖದ ಭಾರವನ್ನು ಹೊರಲು ಅಶಕ್ತರೂಂತ. ಆದ್ರಿಂದ್ಲೇ ನಾನಿವತ್ತು ನನ್ನ ಸುಖ–ಸಂತೋಷವನ್ನೆಲ್ಲಾ ನನ್ನೆರಡು ಮಕ್ಕಳಿಗೆ ಹಂಚಿಬಿಡಬೇಕೂಂತಿದ್ದೀನಿ. ನನ್ನ ಆಸ್ತಿ ಹಾಗೂ ನೀವಿಂದು ಕೊಟ್ಟಿರುವ ಈ ಗೌರವ ನಿಧಿ ಈ ಎಲ್ಲವನ್ನೂ ಅವರಿಗೊಪ್ಪಿಸಬೇಕೂಂತಿದ್ದೀನಿ. ನನ್ನ ಮಕ್ಕಳನ್ನು ಹೂವಿನ ಹಾಗೆ ಬೆಳೆಸಿದ್ದೀನಿ. ಯಾವುದಕ್ಕೂ ಕಡಿಮೆ ಮಾಡ್ಲಿಲ್ಲ. ಈ ಮಾತನ್ನು ತಂದೆಯಾಗಿ ನಾನೇ ಹೇಳಿ ಹೊಗಳಿಕೊಳ್ಳಬಾರದಷ್ಟೇ. ಅವ್ರೂ ಹಾಗೇ ನನ್ನ ಮನೆಯನ್ನ ನಂದನವನವನ್ನಾಗಿ ಮಾಡಿದ್ದಾರೆ. ಇನ್ನು ನನ್ನ ಹೆಂಡ್ತಿ. ಒಂದು ವಿಚಿತ್ರ ರೀತಿಯಲ್ಲಿ ನಾನವಳನ್ನ ಕರೆಯೋದು "ಸರಕಾರ್‌ಂತ". ಅವಳದ್ದೊಂದು ರೀತೀನೇ ಬೇರೆ. ನಾಟಕ ಮುಗಿದು ಬಳಸಿದ ಬಣ್ಣ ಒರಸಿಕೊಳ್ಳೋ ಮೊದಲೇ ನನ್ನ ದೃಷ್ಟಿ ತೆಗೆಯೋ ಪರಿಪಾಠ ಅವಳದ್ದು. ವಯಸ್ಸು ನನಗೆ ಅರುವತ್ತು ದಾಟಿದ್ರೂ ಅವಳ ಈ ದೃಷ್ಟಿ ನಿವಾಳಿಸೋ ಕ್ರಮ ಇನ್ನೂ ತಪ್ಪಿಲ್ಲ. ರಾತ್ರಿ ನಾಟ್ಕಾ ಮುಗಿದು ನನ್ನೂಟ ಬೆಳಗಿನ ಜಾವಕ್ಕಾದ್ರೂ ಅವಳುಣ್ಣೋದು ಮಾತ್ರ ನನ್ನೂಟ ಮುಗಿದ್ಮೇಲೇನೇ. ಇದು ಅವಳ ಸತೀಧರ್ಮ. ನಾಟಕದ ಜೀವನದಲ್ಲಿ ಸಹಭಾಗಿಗಳಾಗಿ ನಾವೆಷ್ಟೋ ಕಷ್ಟ–ನಿಷ್ಠುರ ಅನುಭವಿಸಿದ್ದುಂಟು. ಆದ್ರೆ ನಮ್ಮ ಮಕ್ಕಳಿಗೆ ಮಾತ್ರ ಏನೇನೂ ಕಡಿಮೆ ಮಾಡ್ಲಿಲ್ಲ. ಇಲ್ಲದಿದ್ರೆ ನಾಟಕ ಕಂಪೆನಿಯಲ್ಲಿ ಬೆಳೆದ ಮಕ್ಕಳು ಕಂಪೆನಿಯ ಹಾರ್ಮೋನಿಯಂ ಇದ್ದ ಹಾಗೆ ಯಾರ ಕೈಲೋ ಆಡಿಸಿಕೊಂಡು ಎಲ್ಲೋ ರಸ್ತೇಲಿ ಬಿದ್ದೋಗ್ತಿದ್ರೇನೋ. ನೋಡಿ ಪಾಪ, ಆ ನಮ್ಮ ನಂಜುಂಡಯ್ಯನವರ ಸ್ಥಿತಿ. ನಾಲ್ಕು ಮಕ್ಕಳು. ತಂದೆ–ತಾಯಿ ಮಾತು ಕೇಳದೆ ಎಲ್ಲೆಲ್ಲೋ ಹೊರಟು ಹೋದ್ರು. ಸಾಯೋ ಕಾಲಕ್ಕೆ ಪಾಪ ಯಾರಿಲ್ಲ. ಆದ್ರೆ ನಮ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಧು ಮತ್ತು ಮಾಲತಿ ಹಾಗಲ್ಲ. (ಒಳಗಡೆ ನೋಡಿ ಕರೆಯುವನು) ಮಾಧೂ ......ಓ ಮಾಧೂ...(ಒಳಗಿನಿಂದ ಮಾಧವರಾವ್ 'ಬಂದೆ, ಅಪ್ಪಾ' ಅನ್ನುತ್ತಾ ರಂಗ ಪ್ರವೇಶಿಸಿ ಸುಮ್ಮನೆ ನಿಲ್ಲುವನು.) ಇವನೇ ನನ್ನ ಮಾಧು. ಮಾಧವ ರಾವ್ ಜೋಶಿ M. A. ನನ್ನ ಕುಮಾರ ಕಂಠೀರವ.

ಮಾಧು : M.A. ಅಲ್ಲಪ್ಪಯ್ಯ, M.Com.

ಅಪ್ಪಾ : ಅಲ್ಲಾ, ನಿಮ್ಮ ಈ ಡಿಗ್ರಿ ಮುದುಕನಿಗೆ, ನನಗೆ ಹ್ಯಾಗೋ ಗೊತ್ತಾಗ್ಬೇಕು ? ಆದ್ರೆ ಈಗ ಏನೇ ಪಾಸು ಮಾಡಿದ್ರೂ, ನಮ್ಮ ನಾಟಕ ಕಂಪೆನಿ ಮಾಸ್ತರರಿಂದ ಶ್ರೀ ಗಣೇಶ ಕಲೀತಿದ್ದಾಗ ಮಾತ್ರ ಉಟ್ಟ ಅಂಗಿಯಿಂದ್ಲೇ ಸ್ಲೇಟು ಒರಸ್ತಿದ್ದ ಈ ಮಗ. ಈಗ ಯಾವುದೋ ಕಂಪೆನಿಯಲ್ಲಿ ಸಾಹೇಬನಾಗಿದ್ದಾನಂತೆ. ಏನೋ ಆ ಕಂಪೆನಿ ಹೆಸ್ರು ನೀನು ಹೇಳಿದ್ದೂ ?

ಮಾಧು : Field Walter–Kisnauski–Tejpal & Company.

ಅಪ್ಪಾ : ಸರಿ ಅದನ್ನ ಕಂಠಪಾಠ ಮಾಡೋ ವಯಸ್ಸು ನನ್ಗೀಗ ಮೀರಿ ಹೋಗಿದೆ. ಅಂತೂ ಯಾವುದೋ ಒಂದು ಕಂಪೆನಿಯಲ್ಲಿ ಮೆನೇಜರ್ ತಾನೆ! ಈ ಮಧ್ಯೆ ಚೈನಾ ದೇಶಕ್ಕೂ ಹೋಗಿ ಬಂದ.

ಮಾಧು : ಅಲ್ಲಪ್ಪಾ Indo–China.

ಅಪ್ಪಾ : ಹೌದೋ ಅದೂ ಒಂದು ಚೈನಾ ಬಿಡು. ಭೂಗೋಲ ನನಗ್ಗೊತ್ತಿಲ್ಲ. ಆದ್ರೆ ಬಂಗಾಲ್ದಾಚೆಗಿರೋದೆಲ್ಲಾ ಹಳದಿ ಬಣ್ಣ, ಚಪ್ಪಟೆ ಮೂಗು, ಎಲ್ಲರೂ ಒಂದೇ ರೀತಿ ಕಾಣ್ತಾರೆ ಬಿಡು. ಅಲ್ಲಿಗೆ ಹೋಗಿ ಇವನೇನು ಕಂಪೆನಿ ಉದ್ಧಾರ ಮಾಡಿದ್ನೋ ದೇವರೇ ಬಲ್ಲ. ಅಂತೂ ಸಂಬಳ ಬಡ್ತಿಯಾಗಿ ಮೂರು ಸಾವಿರದ ಮೇಲಾಗಿದೇಂತ ಅವನೇ ಹೇಳ್ಕೋತಿದ್ದಾನೆ.

ಮಾಧು : ಎಲ್ಲಾ ನಿಮ್ಮ ಆಶೀರ್ವಾದ ಅಪ್ಪಾ (ಬಗ್ಗಿ ನಮಸ್ಕರಿಸುವನು).

ಅಪ್ಪಾ : ಸರಿ, ಸಾಕುಮಾಡೋ. ಪಂಢ್ರಾಪುರದ ವಿಠೋಬನಿಗಾದ ಹಾಗೆ, ಪಾದಗಳ ಮೇಲೆ ತಲೆ ಜಜ್ಜಿ ಜಜ್ಜಿ ನನ್ನ ಕಾಲುಗಳೂ ಸವೆದು ಹೋದಾವು. ಆದ್ರೆ ನೋಡು ಮಾಧೂ ಒಂದು ಮಾತು ಹೇಳ್ತೀನಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಮನುಷ್ಯ ಶಾಶ್ವತವಲ್ಲ. ಇವತ್ತಿದ್ರೆ ನಾಳೆ ಇಲ್ಲ. ಆದ್ರೀ ನಮಸ್ಕಾರ ಮಾಡೋ ಅಭ್ಯಾಸ ಮಾತ್ರ ಶಾಶ್ವತವಾಗಿಟ್ಕೋಬೇಕು. ನಮಸ್ಕಾರ ಮಾಡೋದಿಕ್ಕೆ ಸಮಯ ಸ್ಥಳ ನೋಡ್ಬೇಕಾದ್ದಿಲ್ಲ. ಹಿರಿಯರು, ಯೋಗ್ಯರಾದವ್ರು ಯಾರೇ ಇರ್ಲಿ, ಎಲ್ಲೇ ಆಗ್ಲಿ ನಮಸ್ಕಾರ ಮಾಡ್ಬೇಕು. ಅಂಥವ್ರ ಆಶೀರ್ವಾದದ ಬಲ ಇದ್ರೆ ಹಿಮಾಚಲವನ್ನೇ ಏರಬಹುದು. ಇದನ್ನ ಯಾತಕ್ಹೇಳಿದೇಂತಂದ್ರೆ ಧಾರವಾಡದಲ್ಲಿ ನಡೆದ ಒಂದು ಸಂಗ್ತಿ ಜ್ಞಾಪಕಕ್ಕೆ ಬಂತು. ವಿಗಡ ವಿಕ್ರಮರಾಯ ನಾಟಕದ ಪ್ರಥಮ ಪ್ರಯೋಗ. ಕಿಕ್ಕಿರಿದು ಸಭೆ ತುಂಬಿತ್ತು. ಧಾರವಾಡದ ಕಲಾಭಿಮಾನಿಗಳೂಂತಂದ್ರೆ ಗೊತ್ತಲ್ಲ ಎಷ್ಟು ರಸಿಕರೋ ಅಷ್ಟೇ ಸೂಕ್ಷ್ಮ ವಿಮರ್ಶಕರು. ಕಾಲಿಗೆ ತೊಟ್ಟ ಪಾದರಕ್ಷೆಗಳ ಸದ್ದು ಒಂದಿಷ್ಟು ಹೆಚ್ಚು ಕಡಿಮೆ ಆದ್ರೂ ಕುಂದು ಎತ್ತಿ ತೋರಿಸೋ ಜನ. ಅಂಥಾ ಸಭೆಯ ಮುಂದೆ ಅಭಿನಯಿಸುವ ಹೊರೆ ಹೊತ್ತಿದ್ದೆ. ನಾಟಕ ಶುರುವಾಗೋಕೆ ಮುಂಚೇನೇ ಮೈಯೆಲ್ಲಾ ಬೆವರಿತ್ತು. ಯಾಕೋ ಏನೋ ಮನಸ್ಸಿನಲ್ಲಿ ಒಂದು ಹೆದರಿಕೆ. ಎದೆ ಢಬ ಢಭಂತ ಹೊಡೀತಿತ್ತು. ಅಷ್ಟರಲ್ಲಿ ಗರುಡ ಸದಾಶಿವರಾಯರ ಆಗಮನ green-roomಗೆ. ಬಂದು ನನ್ನನ್ನು ಪ್ರೇಮದಿಂದ ವಿಚಾರಿಸಿದರು. ಮೌನದಿಂದ ರಂಗಭೂಮಿಗೆ ಹಿರಿಯರಾದ ಅವರಿಗೆ ಹೋಗಿ ನಮಸ್ಕಾರ ಮಾಡ್ದೆ. ಆಲಂಗಿಸಿ ಆಶೀರ್ವದಿಸಿದ್ರು. ಆ ಕ್ಷಣ ನನ್ನ ದೇಹದಲ್ಲಿ ಒಂದು ತರಹದ ವಿದ್ಯುತ್ ಸಂಚಾರವಾಗಿ ಏನೊಂದು ಆವೇಶ ತುಂಬಿತೂಂತೀರಾ, ಚೆನ್ನಾಗಿ ಅಭಿನಯಿಸಿದೆ, ಜನ ಮೆಚ್ಚಿ ಕೊಂಡಾಡಿದರು. ತಿಳ್ಕೊಳ್ಳೊ ಮಗನೆ ಇದೂ ಅವರ ಆಶೀರ್ವಾದದ ಫಲ.

ಮಾಧು : (ಪುನಃ ಕಾಲು ಮುಟ್ಟಿ ನಮಸ್ಕಾರ ಮಾಡುವನು.)

ಅಪ್ಪಾ : ಛೆ, ನಮಸ್ಕಾರ ಮಾಡೂಂತಂದ್ರೆ ಹೀಗೆ ಪುನಃ ಪುನಃ ಕಾಲಿಗೆ ಬೀಳ್ಬೇಕೂಂತ ನಾನು ಹೇಳಿದ್ದಲ್ಲ. ಯೋಗ್ಯರಿಗೆ ಗುರು ಹಿರಿಯರಿಗೆ ತಲೆ ಬಗ್ಗಿಸೋದಿಕ್ಕೆ ನಾಚ್ಕೊ ಬೇಡಾಂತಂದೆ. ಅಹಂಕಾರ ಪಡ್ಬೇಡಾನ್ನೋದೇ ನನ್ನ ಉದ್ದೇಶ. ನಮಗೀ ನಾಟಕದವರಿಗಂತೂ ಬಿಡು, ನಮಸ್ಕಾರ ಮಾಡೋದೇ ಒಂದು ನಾಟಕ. ಬಣ್ಣ ಹಚ್ಕೋದ ಕ್ಕೊದಲು ಗಣಪತಿಗೆ, ಹಚ್ಚಿದ ಮೇಲೆ ರಂಗದೇವತೆಗೆ, ಆಮೇಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುಗಳಿಗೆ ಹೀಗೆ ನಮಸ್ಕಾರ ಮಾಡದೆ ನಾಟಕ ಶುರುವಾಗೋದೇ ಇಲ್ಲ. ಈ ಭಾವನೆ ಕಲಾವಿದರಿಗೆಲ್ಲ ಇರಲೇಬೇಕೂಂತ ಅದಿಕ್ಕೆ ಹೇಳಿದೆ. ಅಂದಹಾಗೆ ರಸಿಕ ಮಿತ್ರರೇ, ಇವನೇ ನಮ್ಮ ಮಾಧು; ಎಲ್ಲೋ ನಿನ್ನ ಹೆಂಡ್ತಿ ? (ಶಾರದೆ ಬರುವಳು) ಇವಳು ನಮ್ಮ ಸೊಸೆ...ಶಾರದೆ. (ನಮಸ್ಕಾರ ಮಾಡುವಳು) 'ದೀರ್ಘ ಸುಮಂಗಲೀ ಭವ'. ಇವಳಿಗೆ ಶಾರದೇಂತ ಹೆಸರಿಟ್ಟದ್ದು ಇವಳತ್ತೆ. ಹಳೇ ಹೆಸರೂಂತ ಅವಳಿಗೆ ಅನ್ಸುತ್ತೋ ಏನೋ.

ಶಾರದ : ಇಲ್ಲಾ ಮಾವ. ನಿಮಗೆಲ್ರಿಗೂ ಹಿತವಾದದ್ದು ನನಗೂ ಸಂತೋಷ ಅಲ್ವಾ ?

ಅಪ್ಪಾ : ಆಯ್ತಲ್ಲಾ? ನೋಡಿ, ಅತ್ತೆ ಮಾತು ಮೀರೋದೇ ಇಲ್ಲ. ಇದಕ್ಕೂ ನಾವೆಷ್ಟು ಪುಣ್ಯ ಪಡೆದಿರ್ಬೇಕು ? ಇನ್ನು......ನಮ್ಮ ಮಾಲತಿ. ಏ ಮಾಲತಿ ಬಾರೇ ಇತ್ತ ನಾಚಿಕೊಳ್ತಿಯೇನೇ.

ಮಾಲತಿ : ಬಂದೇ......(ಹೇಳುತ್ತಾ ಬರುವಳು)

ಅಪ್ಪಾ : ಏನೇ ಅದು ಗಂಡನ ಜತೆ ಕುಸು ಕುಸು......

ಮಾಲತಿ : ಸುಮ್ಮ್‌ಸುಮ್ಮನೆ ಏನು ಹೇಳ್ತೀರಪ್ಪಾ. ಅಮ್ಮನಿಗೆ ಸಹಾಯ ಮಾಡ್ತಿದ್ದೆ.

ಅಪ್ಪಾ : ಇವಳು ನನ್ನ ಕನ್ಯಾರತ್ನ. ನಮ್ಮನೆಗೆ ಬಂದ್ರೆ ಮಾಲ್ತಿ. ಗಂಡನ ಮನೆಗೆ ಹೋದ್ರೆ ಸೌಭಾಗ್ಯವತಿ ಮಾಲತಿ ದೇಶ್‌ಪಾಂಡೆ, Care of Sudhakar Deshpande, Deputy Engineer, Hubli.

ಮಾಲತಿ: ನಮಸ್ಕಾರ ಮಾಡ್ತಿದ್ದೀನಿ ಅಪ್ಪಾ. (ನಮಸ್ಕಾರ ಮಾಡುವಳು.)

ಅಪ್ಪಾ : ಅಷ್ಟಪುತ್ರ ಸೌಭಾಗ್ಯವತೀ ಭವ.

ಮಾಲತಿ: (ಏಳುತ್ತಾ) ಏನಪ್ಪಾ ಎಂಟು ಮಕ್ಕಳು ಸಾಕೇ.

ಅಪ್ಪಾ : ಮರೆತೇ ಬಿಟ್ಟಿದ್ದೆ. ಸ್ವರ್ಗದಿಂದ ನಡೆಸುತ್ತಿದ್ದ ಕಾರುಬಾರು ಡೆಲ್ಲಿ ಯಿಂದ್ಲೇ ಚಲಾಯಿಸ್ತಾರಲ್ಲಾ. ಎರಡು ಬೇಕು. ಮೂರು ಸಾಕೂಂತ, ಶಾಸನ ಮಾಡಿರುವಾಗ ನಮ್ಮ ಆಶೀರ್ವಾದ ಪುಕ್ಸಟೆ ಹೋದೀತು. ಸರಿ ನಿನಗೆಷ್ಟು ಬೇಕೋ ಅಷ್ಟು. (ಪ್ರೇಕ್ಷಕರಿಗೆ) ಇವಳು upto B.A.

*

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂದ್ರೆ ಗೊತ್ತಾಯ್ತಲ್ಲಾ. ಪರೀಕ್ಷೆಗೆ ಕೂಡ್ರೋ ಮೊದಲೇ ಕನ್ಯಾ ಪರೀಕ್ಷೆ ಪಾಸಾದ್ಮ್ಯ, ಮುಂದಕ್ಕೆ ಓದೋದು ಬಿಟ್ಟೇ ಬಿಟ್ಟ್ಯ. (ಸುಧಾಕರನ ಪ್ರವೇಶ) ಇವ್ರು ನಮ್ಮ ಅಳಿಯದೇವ್ರು. **Shri Sudhakar Deshpande.**

ಸುಧಾಕರ: ಮಾವಯ್ಯನವರಿಗೆ ನಮಸ್ಕಾರ.

ಅಪ್ಪಾ : ದೀರ್ಘಾಯುಷ್ಯವಂತನಾಗು. ನಿನ್ನ ಇಂಗ್ಲೆಂಡಿಗೆ ಹೋಗೋ ಆಸೆ ಪರಿಪೂರ್ಣವಾಗ್ಲಿ.

ಸುಧಾಕರ: ಆಸೆಯೇನೋ ಇದೆ. ಆದ್ರೆ ಅನುಕೂಲ ಬೇಕಲ್ಲ ಮಾವ.

ಅಪ್ಪಾ : ಆಗುತ್ತೆ, ಆದೀತು. ನಿನ್ನಾಸೆ ಪೂರೈಸೀತು ! ಸಂತೋಷವಾಯ್ತು. ಇವತ್ತು ನನ್ನ ಜೀವನದ ಅತೀ ಆನಂದದ ಘಳಿಗೆ. ಈ ಹೊತ್ತು ನನ್ನ ಆಪ್ತ ಬಂಧುಗಳೆಲ್ಲಾ ನನ್ನ ಬಳೀನೇ ಇರಬೇಕೆನ್ನೋ ಮಹ ದಾಸೆ. ಅರೆ ಎಲ್ಲಿ ನನ್ನ ಕಾವೇರಿ. ನನ್ನ ಸರಕಾರ್ ಎಲ್ಲಿ.

ಮಾಧು : ಅಮ್ಮಾ......ಏ ಅಮ್ಮಾ......

ಅಪ್ಪಾ : ಮನೆಯಲ್ಲಿ ಅವಳನ್ನ "ಸರಕಾರ್"ಂತ ಕರೆಯೋದಿಕ್ಕೆ ಅಧಿಕಾರ ನನಗೆ ಮಾತ್ರ. ಉಳಿದದ್ದಕ್ಕೆಲ್ಲಾ ಅವಳದ್ದೇ ಅಧಿಕಾರ. ಕಾವೇರೀಂತ ಅವಳ ಹೆಸರು. ಸರಕಾ...ರ್...ಅಲ್ವೇ ಸೂತ್ರಧಾರನ ಹೆಂಡ್ತಿ ಯೇನೇ ನೀನು ರಂಗಭೂಮಿಗೆ ಬರಲು ಇಷ್ಟೊತ್ತು ಮಾಡ್ಲಿಕ್ಕೆ.

[ಕೈಯಲ್ಲಿ ಸಟ್ಟುಗ ಹಿಡಿದುಕೊಂಡು ಪ್ರವೇಶಿಸುತ್ತ]

ಕಾವೇರಿ : ಯಾಕೆ ಕರೆದದ್ದು ? ಒಲೇಲಿ ಬೇಳೆ ಬೇಯ್ತಾ ಇದೆ.

ಅಪ್ಪಾ : ಅದು ಅದೃಷ್ಟಕ್ಕೆ ಬೇಯ್ತಾ ಇರ್ಲಿ. 50 ವರ್ಷ ಹೀಗೆ ಒಲೆ ಮುಂದೇನೆ ದಿವ್ಸ ದೂಡಿದಿ. ಈಗ ನನ್ನ ಸಂತೋಷದ ಒಂದು ಘಳಿಗೆಯಲ್ಲಿ ನಿನ್ನ ಗಂಡನ ಹತ್ರ ನಿಂತ್ಕೋಂತಂದ್ರೆ ಆ ಸೌಟನ್ನೂ ನಿನ್ನ ಜತೆ ಹಿಡ್ಕೊಂಡು ಬಂದಿದ್ದೀಯಲ್ಲೇ.

ಕಾವೇರಿ : ಶಿ......ನನ್ಗೆ ತುಂಬಾ ಕೆಲ್ಸ ಇದೆ ಅಂದ್ರೆ. ನಾನು ಹೋಗ್ತೀನಿ.

ಮಾಧು : ಕೆಲ್ಸಕ್ಕೆ ಅಡಿಗೆಯವನಿರುವಾಗ ನಿನಗ್ಯಾಕಮ್ಮ ಅದರ ಚಿಂತೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಹಾಗಲ್ಲ ಮಾಧು. ನಿನ್ನ ಅಮ್ಮನಿಗೆ ಸ್ವತಃ ಮಾಡದೆ ಸಮಾಧಾನವೇ ಇಲ್ಲ. ಅಡಿಗೆಯವ ಅಂದ್ರೆ ನಾಟಕದಲ್ಲಿ prompter ಇದ್ದ ಹಾಗೆ ನೋಡು. ಮಾತು ಮರೆತಾಗ ಮಾತ್ರ ಸುಧಾರಿಸಿಕೊಂಡು ಹೋಗ್ತಾನೆ ಅಷ್ಟೆ. ನೋಡು ಸರಕಾರ್ ಈ ತನಕ ಯಾವುದೇ ವ್ಯವಹಾರದ ವಿಷಯದಲ್ಲಿ ನಿನ್ನನ್ನ ನಾನು ವಿಚಾರಿಸಲಿಲ್ಲ. ಆದ್ರೆ ಇವತ್ತಿನ ದಿನ ನಿನ್ನ ಹತ್ತಿರ ಒಂದು ಮಾತು ಕೇಳಲೇಬೇಕು. ನನ್ನ ಕಷ್ಟ-ನಿಷ್ಠುರಗಳನ್ನು ನನ್ನ ಜತೇಲೇ ನೀನೂ ಅನುಭವಿಸಿದ್ರೂ ನನಗೆ ದೊರೆತ ಸನ್ಮಾನದಲ್ಲಿ ಸರಿಪಾಲು ನೀನು ಯಾವತ್ತೂ ಬಯಸಿಲ್ಲ.

ಕಾವೇರಿ : ಹೌದು, ನನಗ್ಯಾಕೆ ನಿಮ್ಮ ವ್ಯವಹಾರ. ಗಂಡನ ಸೇವೆ ಮಾಡೋ ಹೆಂಗ್ಸಿಗ್ಯಾಕೆ ಬೇರೆ ವಿಚಾರ. ನಿಮ್ಮಿಂತ್ರ ನನಗ್ಯಾವುದಾದ್ರೂ ಕಡಿಮೆ ಆಯ್ತೂಂತ ಹೇಳಿದ್ದೀನಾ.

ಅಪ್ಪಾ : ಶಾಭಾಸ್. ನಿನ್ನ ಜೀವನದಲ್ಲಿ ನೀನಿಷ್ಟೊಂದು ದೊಡ್ಡ ಲೆಕ್ಚರ್ ಕೊಟ್ಟದ್ದೂಂದ್ರೆ ಇದೇ ಮೊದಲು ನೋಡು. ವಯಸ್ಸಾದಂತೆ ಗಂಡಸರ ಹೊಟ್ಟೆ ಹೆಂಗಸರ ಬಾಯಿ ಸಡಿಲಾಗುತ್ತೇಂತ ಒಬ್ಬ ನಾಟಕಕಾರ ಹೇಳಿದ್ದ. ಸರಿಹೋಯ್ತು ಬಿಡು. (Pause) ನೋಡಿ, ಮಕ್ಕಳೇ ನನ್ನ ಜೀವನ ನಾಟಕದ ಒಂದು ಅಂಕ ಮುಗಿದು ಇನ್ನೊಂದು ಅಂಕ ಪ್ರಾರಂಭವಾಗಿದೆ. ಅದೂ ಒಂದಿನ ಮುಗೀಲೇ ಬೇಕಲ್ಲಾ.

ಮಾಲತಿ: ಅಪ್ಪಾ.

ಅಪ್ಪಾ : ಜೀವನ ನಾಟಕ ಸೂತ್ರಧಾರಿಯಾದ ಆ ಪರಮೇಶ್ವರನಿಗೇ ಗೊತ್ತು ನನ್ನೀ ನಾಟಕ ಹೇಗೆ ಕೊನೆಗೊಳ್ಳುತ್ತೇಂತ. ಆದ್ರೆ ಅವನ ಕೃಪಾ ಕಟಾಕ್ಷ ನನ್ನ ಮೇಲೆ ಖಂಡಿತ ಇದೆ. ಸಾವಿರಾರು ರಸಿಕ ಪ್ರೇಕ್ಷಕರ ಮೂಲಕ ನನ್ಮೇಲೆ ಇದುವರೆಗೆ ಅದನ್ನು ಇಟ್ಟಿದ್ದಾನೆ. ಇದರಿಂದ ನಾನು ನಿಜವಾಗ಼್ೂ ಕೃತಾರ್ಥನಾಗಿದ್ದೀನಿ. ದುಃಖ ನಾವೇ ಅನುಭವಿಸ್ಬೇಕು. ಸುಖವನ್ನು ಮಾತ್ರ ಹಂಚಿಕೊಡಬೇಕೂಂತ ಓದಿದ್ದೇನೆ. ಇದುವರೆಗೆ ಹಂಚಿಕೊಡೋದಕ್ಕೇನೂ ಇರಲಿಲ್ಲ. ಆದರೆ ಈ ಸತ್ಕಾರ ನಿಧಿಯಿಂದಾಗಿ ನಾನೀಗ ಶ್ರೀಮಂತನಾಗಿದ್ದೀನಿ. ಇದರ ಭಾರವನ್ನು ಆದಷ್ಟು ಬೇಗ ಇಳಿಸಬೇಕು. ನೋಡು ಸರಕಾರ್ ನನಗೆ ಬಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಹಣ ಉಳಿದಿರೋ ನಮ್ಮ ಆಸ್ತಿ ಇದನ್ನೆಲ್ಲಾ ಈ ಮಕ್ಕಳಿಗೆ ಪಾಲು ಮಾಡ್ಬೇಕೂಂತ ಇವತ್ತು ನಿರ್ಧರಿಸಿದ್ದೀನಿ ಏನಂತೀಯಾ.

ಕಾವೇರಿ : ನೀವೇನು ಮಾಡ್ತೀರೋ ಅದಿಕ್ಕೆ ನನ್ನ ಸಮ್ಮತಿ ಇಲ್ಲದೆ ಇರುತ್ಯೇ. ಉಣ್ಣುವ ಅನ್ನ ಎಲೆಯಲ್ಲಿದ್ರೇನು ದೊನ್ನೆಯಲ್ಲಿದ್ರೇನು. ಎಲ್ಲಾ ಊಟಕ್ಕಲ್ವೇ ಇಟ್ಟಿದ್ದು.

ಮಾಲತಿ: ಅಪ್ಪಾ ಇದೇನು ಇಷ್ಟು ಆವಸರ ನಿಮಗೆ. ನಿಮ್ಮ ಆಶೀರ್ವಾದವೇ ಮುಖ್ಯ.

ಮಾಧು : ನನಗೇನೂ ಬೇಡಪ್ಪಾ. ನಿಮ್ಮ ಆಶೀರ್ವಾದವೇ ದೊಡ್ಡ ಸಂಪತ್ತು ನಮಗೆ.

ಅಪ್ಪಾ : (ದೃಢ ಮನಸ್ಸಿನಿಂದ) ನನ್ನ ನಿರ್ಧಾರಾಂದ್ರೆ ಶಿಲಾಶಾಸನ ! ನಿಮ್ಮ ಸಮ್ಮತಿ ಕೇಳಿದ್ದೇನೆಯೇ. ಸಮ್ಮತಿ ನಿಮ್ಮ ಅಮ್ಮಂದು. ಸ್ವೀಕಾರ ಮಾಡೋ ಅಧಿಕಾರ ಮಾತ್ರ ನಿಮ್ದು. ಚರ್ಚಿಸಲಿಕ್ಕೇನಿಲ್ಲ ಇದರಲ್ಲಿ. ಹ್ವಾ ಅನ್ನ ಎಲೆಯಲ್ಲಿದ್ರೇನು ದೊನ್ನೆಯಲ್ಲಿದ್ರೇನು ? ನಿಜ...ನಿಜ ... ಈಗ ಕೊಡೋದೇನು ಮತ್ತೆ ಕೊಡೋದೇನು. ನೋಡು ಮಾಧೂ ನಿನಗೆಲ್ಲಿ ಬೇಕೋ ಒಂದು ಒಳ್ಳೇ ಜಾಗ ನೋಡಿ ಸ್ವಂತ ಮನೆ ಮಾಡ್ಕೋ. ಸುಧಾಕರ್ ನೀನೂ pass-port ವ್ಯವಸ್ಥೆ ಬೇಗನೆ ಮಾಡು. ನಿನ್ನ ವ್ಯಾಸಂಗ ಮುಂದುವರಿಸೋದಾದ್ರೆ ನನಗೂ ಸಂತೋಷ. ನೀವಿಬ್ರೂ ಜತೆ ಹೋಗ್ಬನ್ನಿ. ಇಗೋ ಈ ಚೆಕ್ಕು. ಇಬ್ಬರೂ ಈಗ ಹಂಚಿಕೊಳ್ಳಿ. ಇನ್ನುಳಿದ ಆಸ್ತಿ ಎಲ್ಲಾ ನಮ್ಮ ವಕೀಲ ಶಾಮರಾಯರೇ ಪಾಲು ಮಾಡೋ ವ್ಯವಸ್ಥೆ ಮಾಡ್ತಾರೆ. (ತುಸು ಭಾವನಾ ಪರನಾಗಿ) ನೋಡಿ ಮಕ್ಕಳೇ ನಮ್ಮದೂಂತ ಇದ್ದ ದ್ದೆಲ್ಲಾ ಈಗ ನನ್ನ ವಂಶವನ್ನು ಬೆಳಗಿಸಬೇಕಾದ ನನ್ನ ಮಕ್ಕಳಾದ ನಿಮಗೇ ಹಂಚಿದ್ದೀನಿ. ಈಗ ನಮ್ಮ ಸೊತ್ತೆಲ್ಲ ನಿಮ್ಮ ಸೊತ್ತು. ಆ ಕಾರಣ ಇನ್ನು ಉಳಿದಿರುವ ಆಯುಷ್ಯದ ತನಕ ನಾವೂ ನಿಮ್ಮ ಸೊತ್ತು. ನಾವೂ ನಿಮ್ಮ ಭಾಗದ ಆಸ್ತೀನೇ.

ಮಾಲತಿ: (ಗದ್ಗದ ಕಂಠದಿಂದ) ನೀವಿಬ್ರೂ ನಮ್ಮಲ್ಲೇ ಇರಬೇಕಪ್ಪ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಧು : ಶಾಭಾಸ್ ! ಅಂದ್ರೆ ನಾನು ಅವ್ರ ಮಗ ಅಲ್ವೇ ? ನಿಮ್ಮಲ್ಲಿಗೆ ವರ್ಷ ಕ್ಕೊಮ್ಮೆ ಹೋಗಿ ಬಂದ್ರೆ ಸಾಕು ಅಷ್ಟೆ.

ಅಪ್ಪಾ : ನೋಡಿ ಮಕ್ಕಳೇ ನೀವು ಹೀಗೆ ಜಗಳಾಡಬೇಡಿ. ನನಗೆ ಮಗಳೂ ಒಂದೇ ಮಗನೂ ಒಂದೇ. ಎಲ್ಲಾದ್ರೇನು ಒಂದು ಮುಷ್ಟಿ ಅನ್ನ ಬಿದ್ರೆ ಸರಿ. ಬರೇ ನಿಮ್ಮ ಪ್ರೀತಿ ಮುಖ್ಯ.

ಕಾವೇರಿ : ನಾನು ಹೋಗ್ಲೇನು ?

ಅಪ್ಪಾ : ಅರೆ ನಿಲ್ಲೇ. ಸುಧಾಕರ್ ನಿವೀನ್ನು ಹೋಗಿ. ನನಗೆ ನನ್ನ ಸರಕಾರ್ ಜತೆ ಸ್ವಲ್ಪ private ಮಾತಾಡೋದಿದೆ. ನಿಧಾನ ಬರ್ತೀನಿ.

ಕಾವೇರಿ : ಏನು ತಮಾಷೆ ಅಂದ್ರೆ ? ಈ ಮುದಿ ವಯಸ್ಸಿನಲ್ಲಿ ಯಾರಾದ್ರೂ ನಕ್ಕಾರು.

ಅಪ್ಪಾ : ನಗಲಿ ಬಿಡು. ಪ್ರೇಮವೆಂಬುವಾ ಸಿರಿ ಬರಿ ಯೌವನದ ಸೊತ್ತಲ್ಲ. ನಮಗೂ ಪ್ರೀತಿಸೋಕೆ ಬರುತ್ತೇಂತ ಈ ತರುಣರಿಗೂ ಗೊತ್ತಾಗ್ಲಿ.

[ನಾಲ್ವರೂ ನಗುತ್ತಾ ಹೋಗುವರು]

ಕಾವೇರಿ : ಇದೇನು ನಾಟಕ ನಿಮ್ದು. ಈ ಪ್ರಾಯಕ್ಕಿದು ಸರಿಹೋಗುತ್ತಾ.

ಅಪ್ಪಾ : ನೋಡು ಕಾವೂ ಸ್ವಲ್ಪ ಈ ಕಡೆ ಬಾ ಅಂದ್ರೆ ಬರ್ಬೇಕು.

ಕಾವೇರಿ : (ಹತ್ತಿರ ಬಂದು) ಏನಿದು ಒಂದು ತರ ಆಗ್ಬಿಟ್ಟಿದ್ದೀರಿ.

ಅಪ್ಪಾ : (ಕಿಸೆಯಿಂದ ಒಂದು ಪೆಟ್ಟಿಗೆ ತೆಗೆದು) ತಗೋ......

ಕಾವೇರಿ : ಏನೂಂದ್ರೆ ಇದು.

ಅಪ್ಪಾ : ಮುತ್ತಿನ ಹಾರ. ನಿನಗೇಂತ ತಂದಿದ್ದೀನಿ.

ಕಾವೇರಿ : ನನಗೇಕೆ ಈ ವಯಸ್ಸಿನಲ್ಲಿ. ಇದನ್ನೂ ಆ ಮಕ್ಕಳಿಗೆ ಕೊಡಬಹು ದಿತ್ತಲ್ಲ.

ಅಪ್ಪಾ : ಮಕ್ಕಳಿಗೆ ಕೊಡೋದೆಲ್ಲಾ ಕೊಟ್ಟಾಯ್ತು.

ಕಾವೇರಿ : ಮತ್ತೆ ನನಗ್ಯಾಕೆ ? ನನಗೇನಾದ್ರೂ ಬೇಕೂಂತ ಕೇಳಿದ್ದೀನಾ ಎಂದಾದ್ರೂ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ನೀನು ಕೇಳಲಿಲ್ಲ, ನಾನು ಕೊಡಲಿಲ್ಲ. ನನ್ನ ಸ್ವಂತ ಹಣದಿಂದ ನಿನಗೇಂತ ತಂದಿರೋ ಹಾರ ಇದು.

ಕಾವೇರಿ : ತುಂಬಾ ಹಣ ಕೊಟ್ಟಿರಬೇಕಲ್ಲಾ ?

ಅಪ್ಪಾ : ಕೇವಲ ನಾಲ್ಕೇ ಸಾವಿರ ರೂಪ್ಯಾ.

ಕಾವೇರಿ : ಪರಮೇಶ್ವರಾ ಇಷ್ಟೊಂದು ಬೆಲೆ ಬಾಳೋ ಸರವನ್ನ ಕುತ್ತಿಗೆಗೆ ಕಟ್ಟಿ ಮೆರದ್ರೆ ನನಗೆ ಮುದಿಭ್ರಾಂತೀಂತ ಜನ ಹೇಳಲಿಕ್ಕಿಲ್ವಾ ?

ಅಪ್ಪಾ : ಹೇಳುವವರ ಬಾಯಿ ಮುಚ್ಚೋದಿಕ್ಕೆ ಸಾಧ್ಯವಾ. ಬಾ ನಾನೇ ನಿನ್ನ ಕುತ್ತಿಗೆಗೆ ಕಟ್ತೇನಿ.

ಕಾವೇರಿ : ಛೆ ಮಕ್ಕಳು ನೋಡಿಯಾರೂಂದ್ರೆ.

ಅಪ್ಪಾ : ನೋಡ್ಲಿ ಬಿಡು. ನಾವು ಮಾಡೋದನ್ನೇ ಅವ್ರೂ ಮಾಡೋದು. ವಾರೆವ್ಹಾ ಕಾವೇರಿ, ನೀನು ನಿಜವಾಗಿ ಎಷ್ಟು ಚಂದ ಕಾಣ್ತಾ ಇದ್ದೀಯಾ.

ಕಾವೇರಿ : ಶೀ......ಸಾಕು ಮಾಡೀಂದ್ರೆ.

ಅಪ್ಪಾ : ಸಂತೋಷವಾಯ್ತೋ ಇಲ್ವೋ ? ನಿಜ ಹೇಳು ನೋಡೋಣ.

ಕಾವೇರಿ : ಮನಸ್ಸಿನಲ್ಲಿರೋದನ್ನೆಲ್ಲಾ ಮಾತಿನಲ್ಲಿ ಹೇಳ್ಬಾರ್ದು.

ಅಪ್ಪಾ : ನೋಡು ಇನ್ನೊಂದು ವಿಚಾರ. ನನ್ನ ಆಸ್ತಿ ಪಾಲು ಮಾಡಿದ ಬಗ್ಗೆ ನಿನ್ನ ಮನಃಪೂರ್ವಕ ಸಮ್ಮತಿ ಇದೆ ತಾನೆ !

ಕಾವೇರಿ : ನೀವು ಯಾವಾಗ್ಲಾದ್ರೂ ನನ್ನನ್ನ ಕೇಳಿ ಮಾಡ್ತೀರಾ. ಅಥವಾ ನೀವೇನಾದ್ರೂ ಮಾಡಿದ್ರೆ ನಾನು ಬೇಡ ಅಂತೀನಾ. ಆದ್ರೆ......

ಅಪ್ಪಾ : ಆದರೆ......ಏನು ಆದರೆ......ಅದನ್ನೇ ಮನಸ್ಸು ಬಿಚ್ಚಿ ಹೇಳು.

ಕಾವೇರಿ : ಇನ್ನೇನಿಲ್ಲ, ಯಾಕೆ ಇಷ್ಟು ಅವಸರ ಅಂತ. ಅಲ್ಲದೆ ಮನುಷ್ಯರೆಲ್ಲಾ ಕೆಟ್ಟವರಲ್ಲದೆ ಇದ್ರೂ ಮುದಿ ಪ್ರಾಯ ಅನ್ನೋದು ಮಾತ್ರ ಬಹಳ ಕಷ್ಟ. ಎಲ್ರಿಗೂ ತೊಂದರೆ. ಊಟಕ್ಕೂತಾಗ ಅನ್ನ ಹಾಕಿದ ತಟ್ಟೆ ದಾನ ಮಾಡಿದ್ರೂ ಕೂತ ಮಣೆ ಬಿಡಬಾರ್ದೂಂತ ಹೇಳ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಅಯ್ಯೋ ಹುಚ್ಚಿ ನೀನೇನು ತಿಳ್ಕೊಂಡಿ. ನಮ್ಮೇ ಮಕ್ಕಳು ನಮ್ಮನ್ನ ದಾರಿಗೆ ಹಾಕ್ತಾರಂತೇನು ? (ನಗುತ್ತಾ) ಒಂದು ಪಕ್ಷ ಹಾಗೆ ಮಾಡಿದ್ರೂ ಅಂತಾದ್ರೆ ನಮ್ಮೀ ದೇಶದ ಕಾಶಿ ರಾಮೇಶ್ವರಗಳಲ್ಲಿ ಧರ್ಮ ಛತ್ರಗಳಿಗೇನು ಕೊರತೆ ಇಲ್ಲ ಬಿಡು.

ಕಾವೇರಿ : ಸರಿ. ಇನ್ನಾದ್ರೂ ಹೋಗ್ಲಾ. ನಿಮ್ಮ ಟಾನಿಕ್ ಆದ್ರೂ ತರ್ಲಾ.

ಅಪ್ಪಾ : ನೋಡೂ, ಮನುಷ್ಯನ ಪ್ರೀತಿ ಅಮೃತಕ್ಕಿಂತಲೂ ದೊಡ್ಡ ಸಂಜೀವಿನಿ. ಇವತ್ತಿನ ದಿನ ನಾನು ಪ್ರೇಮಾಮೃತ ಸಾಗರದಲ್ಲಿ ತೇಲಾಡ್ತಾ ಇರುವಾಗ ನಿನ್ನ ಟಾನಿಕ್ ಔಷಧಿ ಗಿವ್‌ಷಧಿ ಏನೂ ಬೇಡ. ಅದರ ಬದಲು ನೀನೇ ಸ್ವತಃ ಮಾಡಿದ ಬಿಸಿ ಬಿಸಿ ಚಹ ಬೇಗ ತಾ. ಆದಷ್ಟು ಬೇಗ ತಾ.

[ಪೂರ್ಣ ಕತ್ತಲು. ತುಸು ವೇಳೆ ಶಾಂತತೆ. ನಂತರ]

Flash Back

(ಜೋರಾಗಿ ಬೊಬ್ಬಿಟ್ಟು) ಏ ಸರಕಾರ್......ಶಾರದಾ...... ಸಖಾರಾಮ್......ಮನೇಲಿ ಯಾರೂ ಇಲ್ವೇ ? ನನಗೆ ಒಂದು ಕಪ್ ಚಾ ಕೊಡೋರು ಈ ಮನೇಲಿ ಯಾರು ಇಲ್ವೇ ? ಸರಕಾ...ರ್...

[ಬೆಳಕು ಬೀಳುವಾಗ ಅಪ್ಪಾ ಅದೇ ಕುರ್ಚಿಯಲ್ಲಿದ್ದಾರೆ. ನೀಲ ಪರದೆ ಇಲ್ಲ. ಮಾಧೂನ ಮನೆಯ ದಿವಾನಖಾನೆ]

ಸಖಾರಾಮ: ತಗೊಳ್ಳಿ ಚಾ. ಆದ್ರೆ ಈ ರೀತಿ ಕಿರಿಚಬೇಕಾದ ಅವಶ್ಯಕತೆ ಇಲ್ಲಾಂತ ಅಮ್ಮಾ ಸಾಹೇಬ್ರು ತಿಳಿಸಿದ್ದಾರೆ.

ಅಪ್ಪಾ : ಸರಿ......ಆದ್ರೆ ನನ್ನ ಸರಕಾರ್ ಎಲ್ಲಿ.

ಸಖಾರಾಮ: ತರಕಾರಿ ತರೋದಿಕ್ಕೆ ಹೋಗಿದ್ದಾರೆ. (ತನ್ನಷ್ಟಕ್ಕೆ) ಅಲ್ಲಾ ಈ ಮುದಿ ವಯಸ್ಸಿನಲ್ಲೂ ಹೆಂಡ್ತಿ ಹತ್ತಿರಾನೇ ಇರ್ಬೇಕು. ಏನು ಹುಚ್ಚು ಅಂತೀನಿ ಈ ಮುದಿಗೂಬೆಗೆ.

ಅಪ್ಪಾ : ಏನಂದೆ......

Sri Vidyabharathi Book Centre, Sringeri

CC-O. In Public Domain. Digitized by eGangotri

ಸಖಾರಾಮ: ಏನಿಲ್ಲ ಚಾ ಕುಡಿದು ಬೇಗ ಕಪ್ ಬಸಿ ಕೊಟ್ಟುಬಿಟ್ರೆ ರಾಯರು ಬರೋ ಹೊತ್ತಿಗೆ ಕೆಲ್ಸ ಎಲ್ಲಾ ಮುಗಿಸಿ ತಯಾರಾಗಿರಬಹು ದೂಂತಂದೆ.

ಅಪ್ಪಾ : ಸರಿ. ಮಾಧು ಬರೋ ಹೊತ್ತಾಯ್ತು ತಾನೆ! ಈ ಮನೇಲೇ ಇದ್ರೂ ಎಷ್ಟೋ ದಿನದಿಂದ ಅವನ ಮುಖಾನೇ ಕಂಡಿಲ್ಲ. ಯಾವಾಗ ಬರ್ತ್ತಾನೆ ಯಾವಾಗ ಹೋಗ್ತಾನೆ ನೀವ್ಯಾರೂ ಹೇಳೋದೂ ಇಲ್ಲ. ಅವನ ಆರೋಗ್ಯ ಚೆನ್ನಾಗಿದೆ ತಾನೆ!

ಸಖಾರಾಮ: Top class. ಕಪ್-ಬಸಿ ಕೊಡಿ ಇತ್ತ.

ಅಪ್ಪಾ : ಮುನ್ನಿ ಬಂದ್ಳೇನು ?

ಸಖಾರಾಮ: ಈಗ ತಾನೇ ಬಂದ್ಳು.

ಅಪ್ಪಾ : ಬೇಗ ಹೋಗಿ ಮುನ್ನಿಗೆ ಹೇಳು.

ಸಖಾರಾಮ: ತಿಳೀತು. ಮುಂದಕ್ಕೇಳೋ ಅಗತ್ಯವಿಲ್ಲ. ಎಲ್ಲ ಕಂಠಪಾಠ ಆಗಿದೆ. (ಹೋಗುವನು)

ಅಪ್ಪಾ : ಕಿವಿಗಳಿನ್ನೂ ಕೇಳಿಸ್ತಾ ಇವೆ. ಕಣ್ಣುಗಳು ಮಸಕಾದಂತೆ ಕಿವಿಗಳೂ ಕೇಳಿಸದೆ ಇದ್ದಿದ್ರೆ ಎಷ್ಟು ಚೆನ್ನಾಗಿತ್ತು. ಈ ನಿಂದೆ, ತಿರಸ್ಕಾರದ ಮಾತುಗಳು, ಯಾವುದೋ ಶಾಪದಂತೆ ಬೆನ್ನು ಬಿಡೋದಿಲ್ಲ. [ಒಳಗಿನಿಂದ ಅಜ್ಜಾ ಅಜ್ಜಾ ಎಂದು ಮಗುವಿನ ಕರೆ ಕೇಳಿಸುತ್ತದೆ.] ಉಳಿದಿರೋದು ಇದೊಂದೇ ಕೋಮಲ ಸ್ವರ, ಅಂತಃಕರಣವನ್ನೇ ಕರಗಿಸುತ್ತೆ. ನನ್ನ ಮುದ್ದು ಮುನ್ನೀ ಬಾ ಮಗೂ...ಬಾ ಕಂದಾ...

ಮುನ್ನಿ : (ಬಾಗಿಲ ಬಳಿಯೇ ನಿಂತು) ಬರೋದಿಲ್ಲ. ನಂಗೆ ಕೋಪ ನಿನ್ನತ್ರ. ನಾನು ಬರೋದೇ ಇಲ್ಲ.

ಅಪ್ಪಾ : ಹಾಗ್ಯಾಕಮ್ಮ ಸಿಟ್ಟು ಮಾಡ್ಕೋತಿ. ನನ್ನ ಮೇಲೆ ಕೋಪ ಯಾಕಮ್ಮಾ ?

ಮುನ್ನಿ : ಸುಮ್‌ಸುಮ್ನನೆ ಅಜ್ಜಾ.

ಅಪ್ಪಾ : ಸುಮ್‌ಸುಮ್ನನೆ ತಾನೆ, ಸರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನಿ : ಹೌದಜ್ಜಾ......(ಓಡಿ ಬಂದು ಅಜ್ಜನ ಕೊರಳು ಹಿಡಿಯುತ್ತಾಳೆ) ಅಜ್ಜಾ ಇವತ್ತು ನಮ್ಮ ಶಾಲೆಯಲ್ಲಿ ಏನು ತಮಾಷೆ ಆಯ್ತು ಗೊತ್ತಾ?

ಅಪ್ಪಾ : ಏನಾಯ್ತು ಮಗೂ. ಶಾಲಾ ಮಾಸ್ತರಿಣಿ ಜಾರಿ ಬಿದ್ದಳೇ.

ಮುನ್ನಿ : ಶೀ ಹಾಗ್ಯಾಕೆ ಹೇಳ್ತೀಯ. ನಮ್ಮ ಟೀಚರನ್ನ ಮಾಸ್ತರಿಣಿ ಅಂತ ಬೈಬೇಡ, ಅಜ್ಜಾ. ಅವರು ತುಂಬಾ ಒಳ್ಳೆಯವರು.

ಅಪ್ಪಾ : ಸರಿ ಮುನ್ನಿ. ಹೇಳು ಏನದು ತಮಾಷೆ ನಡೆದದ್ದು ?

ಮುನ್ನಿ : (ಸಿಟ್ಟಿನಿಂದ) ನನ್ನ ಹೆಸರು ಮುನ್ನಿ ಅಲ್ಲ.

ಅಪ್ಪಾ : ಮುನ್ನಿ ಅಲ್ಲ, ಮುದ್ದೂಂತ ಕರೀಲಾ.

ಮುನ್ನಿ : ಬೇಡ. ನನ್ನ ಹೆಸರು ಮುದ್ದುವಾ ? ಎಷ್ಟು ಸಲ ಹೇಳಿದ್ರೂ ನಿನ್ಗೆ ಮರತೇ ಹೋಗುತ್ತೆ. ಹಾಗೆ ಕರೆದರೆ ನಾನಿನ್ನು ಬರೋದೇ ಇಲ್ಲ.

ಅಪ್ಪಾ : ಸರಿ. ಮೃಣಾಲಿನಿ ಬಾಯಿ ಜೋಶಿಯವರೇಂತ ಕರೀತೀನಿ. ಆಯ್ತಲ್ಲಾ.

ಮುನ್ನಿ : (ಮತ್ತೆ ಕುತ್ತಿಗೆಯನ್ನು ಹಿಡಿದು ಅಪ್ಪಿ) ಪರವಾಗಿಲ್ಲ ಅಜ್ಜಾ, ನೀನು ಮುನ್ನೀಂತ್ಲೇ ಕರಿ. ಆದ್ರೆ ಬೇರೆಯವರಿಗೆ ಯಾರಿಗೂ ಈ ಹೆಸರು ಹೇಳ್ಬೇಡ.

ಅಪ್ಪಾ : ಆಯ್ತು ಗೊತ್ತಾಯ್ತು. ಆದ್ರೆ ಶಾಲೆಯಲ್ಲಿ ತಮಾಷೆ ಏನದು ನಡೆ ದದ್ದು ಅದನ್ನು ನೀನಿನ್ನೂ ಹೇಳ್ಳಿಲ್ಲ.

ಮುನ್ನಿ : ನೀನು ಗಟ್ಟಿಯಾಗಿ ಆ ನಾಟಕದ ಮಾತಾಡ್ತಿಯಲ್ಲ ಅದನ್ನು ಮೊದಲು ಹೇಳಿದ್ರೇನೇ ನಾನೂ ಹೇಳ್ತೀನಿ.

ಅಪ್ಪಾ : ಹಾಗೆಲ್ಲ ಮಾಡ್ಬಾರ್ದು. ನಾನೀಗ ಮುದುಕ ಆಗಿದ್ದೀನೋ ಇಲ್ವೋ? ನನಗೆಲ್ಲಾ ಮರೆತು ಹೋಗ್ತಾ ಇದೆ ಮಗೂ.

ಮುನ್ನಿ : ಹಾಗಾದ್ರೆ ನಾನೂ ಹೇಳೋದಿಲ್ಲ.

ಅಪ್ಪಾ : ಮಕ್ಳು ಹಠ ಮಾಡ್ಬಾರ್ದು. ಹೇಳು ಮಗೂ.

ಮುನ್ನಿ : ಅಜ್ಜಾ ಯಾರೋ ದೊಡ್ಡವ್ರು ಶಾಲೆಗೆ ಬಂದಿದ್ರು. ಬಹಳ ದೊಡ್ಡವ್ರು.

*

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಯಾರಾದ್ರೂ ಮಂತ್ರಿಯವರೇ.

ಮುನ್ನಿ : ಅವ್ರಲ್ಲಜ್ಜಾ. ಇಷ್ಟಿಷ್ಟು ದಪ್ಪ ದಪ್ಪ ಪುಸ್ತಕ ಬರೆದವರಂತೆ. ಅವ ರೆದುರು ಒಂದು ಪದ್ಯ ಹೇಳೋದಿಕ್ಕೆ ನನ್ಗೆ ಹೇಳಿದ್ರು. ನಾನು ಹೇಳಿದಾಗ ಅವರಿಗೆ ತುಂಬ ಖುಷಿಯಾಯ್ತು. ಅವರು ನನ್ನನ್ನೆತ್ತಿ ನಿನ್ನ ಹೆಸ್ರೇನಮ್ಮಾಂತ ಕೇಳಿದ್ರು ನಾನು ಹೇಳಿದೆ......

ಅಪ್ಪಾ : ಮುನ್ನೀಂತ.

ಮುನ್ನಿ : ಶೀ ಮಾತಾಡ್ಬಾರ್ದೂಂತ ಹೇಳಿದ್ನಲ್ಲ. ನಾ ಹಾಗೆ ಹೇಳ್ಳಿಲ್ಲ.

ಅಪ್ಪಾ : ಮತ್ತೇನು ಹೇಳಿದಿ.

ಮುನ್ನಿ : ಮೃಣಾಲಿನಿ ಮಾಧವರಾವ್ ಜೋಶೀಂತ. ಆಗವ್ರು ನಟ ಸಂಮ್ರಾಟ್ ಕೇಶವರಾವ್ ಜೋಶಿಯವರ ಮೊಮ್ಮಗಳೋಂತ ಕೇಳಿದ್ರು. ನಾನು ಹೌದೂಂತ ಹೇಳಿದಾಗ ನನ್ನನ್ನಪ್ಪಿ ಹಿಡಿದು ನಿನ್ನ ಅಜ್ಜ ನನ್ನ ಗುರು ಗಳಾಗಿದ್ರು, ಅವರಿಗೆ ನನ್ನ ನಮಸ್ಕಾರ ಹೇಳೂಂತ ಹೇಳಿದ್ರು.

ಅಪ್ಪಾ : ಅವ್ರ ಹೆಸರೇನಮ್ಮಾ.

ಮುನ್ನಿ : ಅದೇ ಗೊತ್ತಿಲ್ಲಜ್ಜಾ. ಆದ್ರೆ ದೊಡ್ಡವ್ರು. ನಿನಗಿಂತಲೂ ಉದ್ದಕ್ಕಿ ದ್ದಾರೆ, ದಪ್ಪಗಿದ್ದಾರೆ.

ಅಪ್ಪಾ : ಥೂ. ಇಷ್ಟಕ್ಕೇನೇ ನೀನು ತಮಾಷೇಂತ ಅಂದದ್ದು.

ಮುನ್ನಿ : ಯಾಕಜ್ಜಾ ನಿನ್ನ ವಿಚಾರ ದೊಡ್ಡವ್ರು ಕೇಳಿದ್ರೆ ನಿಂಗೆ ಖುಷಿಯಾಗೋ ದಿಲ್ವಾ ?

ಅಪ್ಪಾ : ನಿನ್ಗೆ ಖುಷಿಯಾದ್ರೆ ನನಗೂ ಖುಷಿ ಮಗೂ.

ಮುನ್ನಿ : ಅಜ್ಜಾ ಈಗ ನಾನ್ಹೇಳಿದ್ದು ನೀನು ಮಾಡ್ತಿಯಾ.

ಅಪ್ಪಾ : ಏನದು ನೀನು ಹೇಳಿದ್ದು.

ಮುನ್ನಿ : ಹಾಂ ಅಷ್ಟು ಬೇಗನೆ ಮರೆತು ಹೋಯ್ತೋ, ನಿನ್ನ ನಾಟಕದ ಭಾಷಣ.

ಅಪ್ಪಾ : ಓ ಅದೇ ಹೋಗಲಿ ಬಿಡು. ನಾಟಕದ ಸಂಭಾಷಣೆ ಎಂದೋ ಮರೆತು ಬಿಟ್ಟಿದ್ದೀನಿ. ಅದರ ಬದಲು ನಿನಗೊಂದು ಪದ್ಯ ಹೇಳ್ತಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನಿ : ಹೇಳು.

ಅಪ್ಪಾ : ಆಮೇಲೆ ನನಗೇನು ಬೇಕೋ ಅದು ನೀನು ಕೊಡ್ತಿ, ತಾನೆ !

ಮುನ್ನಿ : ಆಯ್ತು.

ಅಪ್ಪಾ : ಕೇಳು ಹಾಗಾದ್ರೆ.

ಪದ್ಯವ ಹೇಳಲು ಸಂಗೀತ ಬೇಕು.
ಸಂಗೀತವಾಗಲು ಶ್ರುತಿ ಇರಬೇಕು.
ಸಂಗೀತ ಕೇಳಲು ಕಿವಿಯಿರಬೇಕು.
ಕಿವಿ ಇದ್ದರೂ ಸಾಕೆ ! ಮನವಿರಬೇಕು.
ದೀಪಕ್ಕೆ ಉರಿಯಲು ಎಣ್ಣೆಯೆ ಬೇಕು.
ಬಿಸಿಲಿಗೆ ಆಶ್ರಯು ನೆರಳೇ ಬೇಕು.
ಬಾಯಾರೆ ಕುಡಿಯಲು ನೀರೇ ಬೇಕು.
[ನನ್ನ] ಬೇಸರ ಕಳೆಯೋಕೆ ನೀನೇಬೇಕು.
ಹಕ್ಕಿಗೆ ಹಾರಲು ರೆಕ್ಕೆಯೆ ಬೇಕು.
ದೋಣಿಗೆ ಚಲಿಸಲು ಚುಕ್ಕಿಯೆ ಬೇಕು.
ಮನೆಗೊಂದು ನಿನ್ನಂಥ ಮಗು ಇರಬೇಕು.
[ಆ] ಮಗುವಿಗೆ ನಾನೊಂದು ಮುತ್ತ ಕೊಡ್ಬೇಕು.
ಮುತ್ತ ಕೊಡ್ಬೇಕು......ಮುತ್ತ ಕೊಡ್ಬೇಕು.

ಮುನ್ನಿ : (ದೂರ ಸರಿಯುತ್ತ) ಇಲ್ಲ......ಇಲ್ಲ......ಕೊಡೋದಿಲ್ಲ.

ಅಪ್ಪಾ : ಏ ಢೋಂಗೀ ಎಲ್ಲಿ ಹೋಗ್ತಿ ನೋಡ್ತೀನಿ. ಸುಳ್ಳು ಹೇಳ್ತೀಯಾ.

ಮುನ್ನಿ : ಇಲ್ಲ......ಇಲ್ಲ......ಇಲ್ಲ......ನಾನು ಖಂಡಿತ ಕೊಡೋದಿಲ್ಲ. ನೀನು ಗಟ್ಟಿಯಾಗಿ ನಾಟಕದ ಮಾತಾಡಿದ್ರೆ ಮಾತ್ರ ಕೊಡ್ತೀನಿ.

ಅಪ್ಪಾ : ಓ...ಹೋ ಮೋಸ ಮಾಡ್ತೀಯಾ. ನಿಲ್ಲು ನಾನೀಗ ಓಡಿಬಂದು ನಿನ್ನನ್ನು ಹಿಡಿದು, ಅಪ್ಪಿ, ಮೂರು ಮುತ್ತ ಕೊಡ್ತೀನಿ.
[ಮುನ್ನಿ ಓಡುವಳು. ಅವಳ ಹಿಂದೆ ಅಪ್ಪನೂ ತಿರುಗುವನು.]
ಏ ಕಳ್ಳೀ ಏ ಢೋಂಗೀ......ಬಾ ಬೇಗ.

[ಶಾರದೆಯ ಪ್ರವೇಶ]

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾರದ : ಸಾಕು ಬಾಯಿಗೆ ಬಂದ ಹಾಗೆ ಬೈ ಬೇಕಾಗಿಲ್ಲ. ಯಾವುದಕ್ಕೂ ಒಂದು ಮಿತಿ ಇರ್ಬೇಕು.

ಅಪ್ಪಾ : ಛೆ ಇಲ್ಲವ್ಮಾ. ನನ್ನ ಮುದ್ದು ಮುನ್ನಿಗೆ ನಾನು ಬಯ್ತೀನೆಯೆ. ತಮಾಷೆಗೆ ಹೇಳಿದೆ ಅಷ್ಟೆ.

ಶಾರದ : ತಮಾಷೆ ಸಾಕಾಯ್ತು, ಬೊಬ್ಬೆ, ಬೈಗಳು, ಹಾರಾಟ ಎಲ್ಲಾ ಸಹಿಸಿ ಕೊಂಡಾಯ್ತು. ಈಗ ಆ ಮಗುವಿಗೆ ಬೈಯೋದಕ್ಕೂ ಹೇಸೋದಿಲ್ಲ ಮುದಿಗೂಬೆ.

ಮುನ್ನಿ : ನಾನೇ ಸುಳ್ಳು ಹೇಳಿದ್ದಮ್ಮಾ. ಅಜ್ಜ ತಮಾಷೆ ಮಾಡ್ತಿದ್ರು.

ಶಾರದ : ಸಾಕು. ಇಲ್ಲಿ ಜೀವನವೇ ಒಂದು ತಮಾಷೆ ಆಗಿದೆ. ನೀನೂ ಈ ಮುದಿಗೂಬೆಯ ಸಹವಾಸ ಮಾಡಿ ಸೊಕ್ಕಿದ್ದಿ. ಇಲ್ಲಿಗೆ ಬರ್ಬಾರ್ದೂಂತ ಹೇಳಿದ್ದಲ್ಲ ನಿನ್ಗೆ ? (ಹೊಡೆಯುತ್ತ) ಯಾಕಿಲ್ಲಿ ಬಂದದ್ದು ?

ಮುನ್ನಿ : (ಕೋಪದಿಂದ ಅಳುತ್ತಾ) ನಾನು ಯಾಕಿಲ್ಲಿ ಬರಬಾರ್ದು ?

ಶಾರದ : ಯಾಕೇಂತ ಕೇಳ್ತೀಯಾ. (ಪುನಃ ಹೊಡೆಯುವಳು) ಬೆನ್ನು ಮುರಿದು ಹಾಕಿ ಬಿಡ್ತೀನಷ್ಟೇ. ಯಾಕೆ ಬೊಬ್ಬೆ ಹೊಡೆಯೋದು ? ನನ್ನ ಕಿವಿಗಳು ಒಡೆದು ಹೋಗ್ಲೀಂತ್ಲೇ ? ಮೊದಲೇ ಈ ಮನೇಲಿ ಶಾಂತಿಯಿಲ್ಲ. ಆರೋಗ್ಯ ಚೆನ್ನಾಗಿಲ್ಲ. ವಿಶ್ರಾಂತಿ ಪಡೀಬೇಕೂಂತ doctor ಹೇಳಿದ್ದಾರೆ ಇಲ್ಲೆಲ್ಲಿ ಶಾಂತಿ. ಇಷ್ಟೊಂದು ದೊಡ್ಡ ಮನೆಯಿದ್ರೂ ಕಾಡಿನಲ್ಲಿದ್ದಂತಾಗಿದೆ ಜೀವನ. ಏನು ಗಲಾಟೆ, ಏನು ಘರ್ಜನೆ, ಚಾ ಸ್ವಲ್ಪ ತಡವಾದರೆ ಬೊಬ್ಬೆ, ಸ್ನಾನಕ್ಕೆ ನೀರು ಬೇಕಾದ್ರೆ ಬೊಬ್ಬೆ. ಇನ್ನಾ ನಾಟಕ ಸಂಗೀತದ ಕಿರಿಚಾಟ. ಇದೇನು ಇದು ನಾಟಕ ಕಂಪೆನೀಂತ ತಿಳ್ಕೊಂಡ್ರೋ ಏನೋ. ಮರ್ಯಾದಸ್ತರ ಮನೇಲಿ ಹೀಗೆಲ್ಲ ರಸ್ತೆಗೆ ಕೇಳೋ ಹಾಗೆ ಬೊಬ್ಬೆ ಹಾಕಿದ್ರೆ ಸರಿ ಕಾಣುತ್ತಾ. ನಮಗೇನು ಮರ್ಯಾದೆ ಇಲ್ವೇ ? ಇವತ್ತೇನಾದ್ರೊಂದು ನಿರ್ಣಯ ಆಗ್ಲೇಬೇಕು. ಅವರು ಬರ್ಲಿ. ಒಂದೋ ನಾನಿಲ್ಲಿರ್ಬೇಕು. ಇಲ್ಲಾ ಇವ್ರೇ ಇಲ್ಲಿರ್ಲಿ. ನಡೀ ಒಳಗೆ.

[ಮುನ್ನಿಯನ್ನು ಸರಸರನೆ ಎಳದುಕೊಂಡು ಹೋಗುವಳು]

Sri Vidyabharathi Book Centre, Sringeri

CC-O. In Public Domain. Digitized by eGangotri

[ಮೃಣಾಲಿನಿಯ ಅಜ್ಜಾ ಅಜ್ಜಾ ಎಂಬ ಅಳುವ ದನಿ ಕೇಳಿ ಸಹಿಸ ಲಾಗದೆ ಕಿವಿ ಮುಚ್ಚಿಕೊಂಡು ಅಜ್ಜ ಕುಳಿತುಕೊಂಡಿರುತ್ತಾನೆ.]

ಅಪ್ಪಾ : (ಸ್ವಲ್ಪ ಸಮಯದ ನಂತರ) ಈ ಮುದಿಗೂಬೆ ಇನ್ನೂ ಬದುಕಿದೆ. ನಟ ಸಂಮ್ರಾಟ್ ಕೇಶವರಾವ್ ಜೋಶಿ ಬದುಕಿದ್ದೂ ಸತ್ತಹಾಗಿರೋ ದಕ್ಕಿಂತ ಸತ್ತೇ ಹೋದ್ರೂಂತ ಡಂಗುರ ಸಾರಿದ್ರೂ ಚೆನ್ನಾಗಿತ್ತು. ಪಾಪ ಆ ಮುದ್ದು ಮಗುವನ್ನು ಎಳೆದುಕೊಂಡು ಹೋದ್ಳು. ನನ್ನ ಮೇಲಿನ ಸೇಡನ್ನು ಆ ಮಗುವಿನ ಮೇಲೆ ತೀರಿಸಿಕೊಂಡ್ಳು. "ಕರುಣೆ ಎಂಬುದೇ ತಾಯಿ" ಅನ್ನೋ ಕವಿವಾಕ್ಯ ಸುಳ್ಳಾಯ್ತಲ್ಲಾ. ಒಂದಿಷ್ಟೂ ಕರುಣೆ ಇಲ್ಲದೆ ಸತ್ತ ನಾಯಿಯನ್ನು ಎಳ್ಕೊಂಡು ಹೋಗು ವಂತೆ ಹೋದ್ಳಲ್ಲಾ. ಅಜ್ಜಾ, ಅಜ್ಜಾಂತ ಕೂಗುವ ಆ ಕೂಸಿನ ಕೋಮಲ ಕಂಠದಲ್ಲಿ ಅಳುವಿನ ಧ್ವನಿ. ಇದನ್ನೂ ಸಹಿಸಿಕೊಂಡು ಹೇಗಿರ್ಲಿ. ಆದ್ರೂ ಬದುಕಿದ್ದೀನಿ.

[ತಲೆ ತಗ್ಗಿಸಿ ಕುರ್ಚಿಮೇಲೆ ಒರಗುವನು. ರಂಗಭೂಮಿಯ ಮೇಲಿನ ಪ್ರಕಾಶ ಒಮ್ಮೆಗೇ ಹೋಗಿ ಪುನಃ ನಿಧಾನವಾಗಿ ಕುರ್ಚಿಯ ಸುತ್ತ ಬೀಳುತ್ತದೆ. ಆಗ ಹಿಂದಿನಿಂದ ಮಾಧು ನಿಂತುಕೊಂಡಿರುತ್ತಾನೆ. ಕಾವೇರಿ ಗೋಡೆಗೆ ಒರಗಿ ನಿಂತಿರುತ್ತಾಳೆ. ದೂರದಲ್ಲಿ ಶಾರದ ಸಿಟ್ಟಿನಲ್ಲಿದ್ದಾಳೆ.]

ಮಾಧು : ಅಪ್ಪಾ ನಾನು ಹೇಳೋದನ್ನಿಷ್ಟು ಕೇಳ್ತೀರಾ.

ಅಪ್ಪಾ : ಕೇಳ್ತಾ ಇದ್ದೇನೆ ಮಾಧೂ......

ಶಾರದ : ಐದು ನಿಮಿಷಗಳ ಹಿಂದೆ ಬಾಯಿಗೆ ಬಂದ ಹಾಗೆ ಬೈದು ಬೊಬ್ಬೆ ಹೊಡೆದವರು ಈಗ ಕಣ್ಣುಮುಚ್ಚಿ ಬೆಕ್ಕಿನ ಹಾಗಿದ್ದಾರೆ ನೋಡಿ. ದಿನಾ ಇದೇ ರೀತಿ......

ಅಪ್ಪಾ : ನಾನು ಕಣ್ಣು ಮುಚ್ಚಿಕೊಂಡಿದ್ರೂ ಕಿವಿ ಸರಿಯಾಗಿ ಕೇಳ್ತಾ ಇವೆ ಮಾಧೂ. ಏನು ಹೇಳ್ಬೇಕಾಗಿದೆ ಸೀದಾ ಹೇಳ್ಬಿಡಿ.

ಮಾಧು : ಅಪ್ಪಾ ನಾನು ಹೇಳೋದಿಷ್ಟೇ. ಯಾರಿಗಾದ್ರೂ ಸಹನೆಗೂ ಒಂದು ಮಿತಿ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ನಿಜ ಮಾಧೂ.

ಮಾಧು : ನಿಮಗೆ ನಾನೇನಾದ್ರೂ ಹೇಳ್ಬೇಕಾಗಿದ್ರೆ ನನ್ನ ಮನಸ್ಸಿಗೆಷ್ಟು ನೋವಾಗುತ್ತೆ ಅನ್ನೋ ಕಲ್ಪನೆ ನಿಮಗಿಲ್ಲಪ್ಪಾ.

ಅಪ್ಪಾ : ಚೆನ್ನಾಗಿದೆ ಮಾಧೂ. ಹೇಳು ಪರ್ವಾಗಿಲ್ಲ.

ಮಾಧು : ಹನ್ನೆರಡು ವರ್ಷಗಳಿಂದ ನೀವು ಈ ಮನೇಲಿ ನಮ್ಮೊಟ್ಟಿಗಿದ್ದೀರಿ. ಇಷ್ಟೊಂದು ಕಾಲ ನಿಮ್ಮ ಬಗ್ಗೆ ನಾವೆಷ್ಟು ಪ್ರೀತಿಯಿಂದ, ಗೌರವದಿಂದ ನಡೆದಿದ್ದೇವೆ ಅನ್ನೋದಕ್ಕೆ ಈ ಹನ್ನೆರಡು ವರ್ಷಗಳೇ ಸಾಕ್ಷಿ. ಕೆಲವೊಂದು ವೇಳೆ ತಿಳಿದೋ ತಿಳಿಯದೆಯೋ ನಾವು ತಪ್ಪು ಮಾಡಿರಬಹುದು. ಇಲ್ಲ ಅನ್ನೋದಿಲ್ಲ. ಆದ್ರೆ ನಿಮ್ಮ ಈ ವಿಚಿತ್ರ ವರ್ತನೆ ಈ ಕೋಪ, ಈ ಬೊಬ್ಬೆ ಬೈಗಳು ಇದನ್ನೆಲ್ಲಾ ಸಹಿಸಿಕೊಂಡೂ ನಾವಿಷ್ಟು ಕಾಲ ಕಳೆದದ್ದು ಒಂದು ದೊಡ್ಡ ಸಾಹಸಾನೇ. ಆದರೂ ಇವತ್ತಲ್ಲ ನಾಳೆ ಸುಧಾರಿಸಬಹುದು ಅನ್ನೋ ಆಸೆಯಿಂದ ಈ ಎಲ್ಲಾ ಕಷ್ಟ–ನಿಷ್ಠುರ ಸಹಿಸಿಕೊಂಡಾಯ್ತು. ಆದ್ರೆ ನಾಯಿಬಾಲ ಡೊಂಕಾಗಿಯೇ ಉಳಿದಂತೆ ಆಸೆ ಆಸೆಯಾಗಿಯೇ ಉಳಿದುಹೋಯ್ತು. ಅಪ್ಪಾ ಆಸೆ ಆಸೆಯಾಗಿಯೇ ಉಳಿದುಹೋಯ್ತು.

ಅಪ್ಪಾ : ತಿಳೀತು. ನೀರು, ಸರಕಾರ್ ಒಂದಿಷ್ಟು ನೀರು ತಾ.

ಮಾಧು : ನಾನು ತರ್ತೇನೆ.

ಅಪ್ಪಾ : ಬೇಡ. ಸರಕಾರ್ ನೀನೇ ತಾ.

[ಕಾವೇರಿ ನೀರು ತರುವಳು]

ಶಾರದ : ನೋಡಿದ್ರಾ ಇದೇ ರೀತಿ ಮಾಡಿ ನಾವ್ಯಾರೂ ಇವರನ್ನ ಸರಿಯಾಗಿ ನೋಡಿಕೊಳ್ಳೋದಿಲ್ಲಾಂತ ಹೊರಗಿನ ಜನ ಹೇಳಿಕೊಳ್ಳೋ ಹಾಗೆ ಮಾಡಿದ್ದಾರೆ.

ಅಪ್ಪಾ : (ಸಮಾಧಾನದಲ್ಲಿ) ಹಾಗಲ್ಲಮ್ಮಾ, ನನ್ನ ಮತ್ತು ಕಾವೇರಿಯ ಸಂಬಂಧ ನಿನಗೀ ಪ್ರಾಯದಲ್ಲಿ ಅರ್ಥವಾಗ್ಲಿಕ್ಕಿಲ್ಲ. ಮಾಧೂ ನೀನು ಹೇಳಿದ ಹಾಗೆ ನಾಯಿಬಾಲ ಸೀದಾಮಾಡೋ ಪ್ರಯತ್ನಬಿಟ್ಟು ಬೇರೇನಾದ್ರೂ ಉಪಾಯ ಇದ್ರೆ ಹೇಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಧು : ನೀವು ಸುಮ್ಮನೇ ಅಪಾರ್ಥ ಮಾಡಿಕೊಳ್ತೀರಾ. ನಾನು ಹೇಳಿದ್ದು...

ಅಪ್ಪಾ : (ತಡೆಯಲಿಕ್ಕಾಗದೆ) ಕ್ಲೋರೋಫಾರಂ ಜಾಸ್ತಿಯಾಯ್ತು. ಅಪರೇಶನ್ ಶುರುವಾಗ್ಲಿ......ನಿಮಗೇನು ಹೇಳ್ಬೇಕೋ ನೇರವಾಗಿ ಹೇಳಿ ಬಿಡಿ.

ಮಾಧು : ಮಾತೆತ್ತಿದರೆ ಈ ರೀತಿ ಹಂಗಿಸೋದಕ್ಕೆ ನಾವೇನು ಮಾಡಿದ್ದೇವೆ. ಸರಳವಾಗಿ ಏನಾದ್ರೂ ಹೇಳೋಣಾಂದ್ರೆ ನೀವು ತಪ್ಪು ತಿಳೀತೀರಾ. ಇದಕ್ಕೆ ನಾವೇನು ಮಾಡೋದು. ನನ್ನ ಹೆಂಡತಿ ಏನಾದ್ರೂ ಅಪ್ಪಿ ತಪ್ಪಿ ಮಾತಾಡಿದ್ರೆ ಹಿರಿಯರಾದ ನೀವು ಸುಧಾರಿಸದೇ ಇದ್ರೆ ನನ್ನಿಂದೇನು ಮಾಡೋದಿಕ್ಕೆ ಸಾಧ್ಯ.

ಅಪ್ಪಾ : ಏನೂ ಮಾಡೋಕಾಗಲ್ಲ. M. Com. ಪಾಸು ಮಾಡಿ ಕಂಪೆನಿ ಮೇನೇಜರ್‌ನಾದ ನಿನ್ನಂಥಾ ಅಮ್ಮಾವ್ರ ಗಂಡನಿಗೆ ಏನೂ ಮಾಡೋಕ್ಕಾಗಲ್ಲ.

ಕಾವೇರಿ : ಹೋಗಲಿ ಬಿಡು. ತಪ್ಪು ನಿನ್ನದೂ ಅಲ್ಲ, ಅವಳದ್ದೂ ಅಲ್ಲ. ತಪ್ಪು ನಮ್ದೇ. ಮುದುಕರಾದದ್ದೇ ನಮ್ಮ ತಪ್ಪು.

ಮಾಧು : ಅಮ್ಮಾ, ಅಪ್ಪನ ಕಡೆಗೇ ನೀನೂ ಇದ್ದೀಯಾ. ಆದ್ರೆ ನ್ಯಾಯ ಏನೂಂತ ನೀನೂ ಸ್ವಲ್ಪ ಯೋಚಿಸು. ಅವಳೇನಾದ್ರೂ ತಪ್ಪು ಮಾಡಿರಬಹುದು, ಇಲ್ಲಾ ಅನ್ನೋದಿಲ್ಲ. ಆದ್ರೆ ಅವಳಿಗೂ ಸ್ವಾಭಿಮಾನ ಇಲ್ವೇ ? ಈ ಮನೆಯ ಮರ್ಯಾದೆ ಹೋಗೋ ಪ್ರಸಂಗ ಬಂದಾಗ್ಲೂ ಅವಳು ಸುಮ್ಮನಿರಬೇಕೂಂತೀಯಾ ?

ಅಪ್ಪಾ : ಮನೆಯ ಮರ್ಯಾದೆ. ಹ ಹ......

ಮಾಧು : ಅಲ್ಲ ಇಷ್ಟೊಂದು ಹಿರಿಯರಾದ ನೀವು ನಿಮ್ಮ ಹಿರಿತನಕ್ಕೆ ಒಪ್ಪೋ ಘನತೆಗೆ ಸರಿಯಾಗಿ ನಡಿಬೇಡ್ವೇ ? ಇದನ್ನೂ ನಾವು ಹೇಳ್ಬೇಕೇ ?

ಅಪ್ಪಾ : ನಿಮ್ಮ ಘನತೆಗೆ ಕುಂದು ತರುವಂಥಾದ್ದೇನು ಮಾಡಿದ್ದೇವೆ ನಾವು ?

ಶಾರದ : ಇನ್ನೇನು ಮಾಡದಿರೋದು ? ಅಮ್ಮಾವ್ರಗಂಡ ಅಂತ ಈಗ ಹೀಯಾಳಿಸಿದ್ದು ಸಾಲದೇ ? ನಿಮ್ಮ ಹಳೆಯ ಪರಿಚಯದವರೂಂತ ಹೇಳಿ ಯಾರ್ಯಾರ ಹತ್ರ ಹಣ ಸಾಲ ತಗೋಳ್ಳೋದು ಮರ್ಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ದೆಯೇ ? ರಸ್ತೆಯಲ್ಲಿ ಬೆಳೆದ ಮಕ್ಕಳ ಜತೆ ಕಾಲ ಕಳೆಯೋದು, ರಾತ್ರಿ ಹಗಲೆನ್ನದೆ ನಾಟಕದ ಗತ ವೈಭವದ ಜಂಭ ಕೊಚ್ಚಿ ಕೊಳ್ಳೋದು ಶೋಭೆಯೇ ? ಯಾರಿದ್ದಾರೆ ಯಾರಿಲ್ಲಾಂತ ನೋಡದೆ ಮನೆಯೊಳಗೇ ನಾಟಕದ ಪಾತ್ರಾಭಿನಯ ಮಾಡಿ ಅರ್ಭಟ ಹೊಡೆಯೋದು ಈ ಮನೆಗೆ ಲಕ್ಷಣವೇ ?

ಮಾಧು : ಶಾರದಾ ನೀನು ಸ್ವಲ್ಪ ಸುಮ್ಮನಿರ್ತೀಯಾ ?

ಶಾರದ : ಸುಮ್ಮನಿರಬೇಕೇ ? ನಿಮಗೆ ಅವಮಾನವಾದದ್ದನ್ನು ನೋಡಿಯೂ ನಾನು ಸುಮ್ಮನಿರಬೇಕೆ ? ಯಾಕೆ ಅವರ ಇಪ್ಪತ್ತು ಸಾವಿರವನ್ನು ಸೇರಿಸಿ ಈ ಮನೆ ಕೊಂಡುಕೊಂಡಿದ್ದೇವೇಂತ ಬಾಯಿ ಮುಚ್ಚೋದಿಕ್ಕೆ ನಾನು ತಯಾರಿಲ್ಲ. ಇದಕ್ಕಿಂತ ನಮ್ಮದೇ ಆದ ಒಂದು ಗುಡಿಸಲಲ್ಲಿ ಸಂತೋಷವಾಗಿರಬಹುದಿತ್ತು.

ಮಾಧು : ಶಾರದಾ ನಿನ್ನ ಪೈ ಚೆನ್ನಾಗಿಲ್ಲ. ಈ ರೀತಿ ಮನಸ್ಸು ನೋಯಿಸಿ ಕೊಂಡ್ರೆ ಇನ್ನೂ ಕೆಟ್ಟೀತು.

ಶಾರದ : ಇದಕ್ಕಿಂತ ಸತ್ತರೇನೇ ವಾಸಿ. ಎಲ್ಲವೂ ಮುಗಿದುಹೋಗುತ್ತೆ.

ಮಾಧು : ಅಪ್ಪಾ ಸುಮ್ಮನೆ ಮಾತು ಬೆಳಸಿ ಚರ್ಚೆ ಮಾಡೋ ಉದ್ದೇಶ ನನಗಿಲ್ಲ. ನೀವಿಬ್ರೂ ಸುಖದಿಂದ ಶಾಂತಿಯಿಂದ ಈ ಮನೇಲಿರ್ಬೇಕೂಂತ ನನ್ನಾಸೆ. ಅವಳು ಸಿಟ್ಟಿನಿಂದ ಏನೋ ಹೇಳಿದ್ದಕ್ಕೆ ನಾನು ಕ್ಷಮೆ ಕೇಳ್ತೀನೆ. ಆದ್ರೆ ಇಷ್ಟುಮಾತ್ರ ಸ್ಪಷ್ಟವಾಗಿ ಹೇಳ್ಬೇಕಾಗಿದೆ : ಎಷ್ಟೆಂದರೂ ಅವಳೇ ಈ ಮನೆ ಯಜಮಾನಿ. ಈ ಮನೆ ಹೇಗಿರ್ಬೇಕು ಯಾವ್ದು ಎಲ್ಲಿರ್ಬೇಕು ಅನ್ನೋದಕ್ಕೆಲ್ಲಾ ಒಂದು ಆದರ್ಶದ ಕನಸು ಕಟ್ಟಿದ ಅವಳು ಹೀಗೆಲ್ಲ ಮನೆ ವಿಚಾರದಲ್ಲಿ ದುಃಖ ಪಡೋದು ನನಗೆ ಸರಿ ಕಾಣೋದಿಲ್ಲ. ಸಾರಿ ಸಾರಿ ನಿಮ್ಮ ಕಾಲು ಹಿಡಿದು ಕೇಳಿಕೊಳ್ತೀನಿ ಹಾಲಿನಂಥಾ ನಮ್ಮ ಸಂಸಾರದಲ್ಲಿ ಬೇಡವಾದ ಕಹಿ ಬರೋಹಾಗೆ ಮಾಡಬೇಡಿ. ನಾವಿನ್ನೂ ಎಳೇ ಪ್ರಾಯದವರು. ನಿಮಗೆ ವಯಸ್ಸಾಗಿದೆ ; ಇಬ್ಬರ ದೃಷ್ಟಿಕೋನವೂ ಬೇರೆ ಬೇರೆ. ಆದ್ದರಿಂದ ಇನ್ನು ಮುಂದಾದ್ರೂ ತಿಳುವಳಿಕೆಯಿಂದ ನಮ್ಮೊಡನೆ ಸಹಕರಿಸಿದ್ರೇನೇ ಚೆನ್ನ. ಇಂಥ ಶಬ್ದ [illegible] ನನ್ನ ಕಿವಿಗೆ ಇನ್ನೆಂದೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೀಳಲೇಬಾರ್ದು. (ತುಸು ತಡೆದು ಗಡಿಯಾರ ನೋಡಿ) ಓ ಆಗ್ಲೇ ಹೊತ್ತಾಯ್ತು. ನಮ್ಮ ಕಂಪೆನಿ Director ಮನೇಲಿ ಊಟಕ್ಕೆ ಕರೆದಿದ್ದಾರೆ. ಶಾರದಾ ಬೇಗ dress ಮಾಡಿಕೋ. ಸಖಾರಾಮ್ ಗಾಡಿ ಗೇರೇಜಿನಿಂದ ಹೊರಗೆ ತಂದಿಡು.

[ಮಾಧು ಒಳಗೆ ಹೋಗುವನು]

[ಅವರಿಬ್ಬರೂ ಹೋದ ಬಳಿಕ ತುಸು ಪ್ರಕಾಶ ಕಡಿಮೆಯಾಗಿ ಅಪ್ಪಾ ಕುಳಿತ ಸ್ಥಳದಲ್ಲಿ ಮಾತ್ರ spot light ಇರುತ್ತದೆ. ಅಪ್ಪಾ ಶೂನ್ಯ ಮನಸ್ಸಿನಿಂದ ತನ್ನಷ್ಟಕ್ಕೆ ತಾನೇ ಏನೋ ಗೊಣಗುಟ್ಟು ತ್ತಿದ್ದಾನೆ.]

Flash Back

ಓಹೋ ಸರಿ ಸರಿ ತರುಣರೆ ನೀವು
ನಿಮಗೆಲ್ಲರಿಗಿದೆ ಆ ಮಾನವ ರೋಗ
ಮೈಗೆ ಮೈನೀಡುವ ಸಂಭೋಗ
ಯೌವನವಿದೆ ಆ ಕಾಗೆಗೂ ಕೂಡಾ
ಹೆಣಕ್ಕೆ ಕಾಯುವ ಗಿಡುಗನೂ ತರುಣ
ದಾರಿ ಸುತ್ತುವ ಕತ್ತೆಗೂ ನಾಯಿಗೂ
ಹುಟ್ಟಿ ಸಾಯುವ ಸಾವಿರಗಟ್ಟಲೆ
ಕ್ರಿಮಿಕೀಟಕು ಬೇಕಾಮೈಥುನ
ದೇಹಭೋಗದ ಲಾಲಸೆಯಿಂದ
ಹುಟ್ಟಿ ಸಾಯುತಿದೆ ಕ್ಷಣ ಕ್ಷಣ
ಈ ಮಧ್ಯದಿ ಜನಿಸಿದ ಮಾನವ ಜೀವಿ
ಆ ವಂಶಕೇ ಹುಟ್ಟಿದ ನಮ್ಮೆಲ್ಲರ ತಾತ
ಅವನೇ ಆದಿಯ ವಿಚಾರವಂತ
ಲೋಕದ ಮೌನವ ಭೇದಿಸಿ ಕರೆದ
ನಾನಾರು ? ಎಲ್ಲಿಗೆ ಹೋಗುವೆ
ಎಲ್ಲಿಂದ ಬಂದೆ ?
ಉತ್ತರ ಬಂತು ದಶ ದಿಕ್ಕುಗಳಿಂದ
ನಾನೇ ನೀನು ನೀನೇ ನಾನು
Sri Vidyabharathi Book Centre, Sringeri

CC-O. In Public Domain. Digitized by eGangotri

ಅಹಂ ಬ್ರಹ್ಮಾಸ್ಮಿ !
ಈ ಆಶ್ವಾಸನೆಯೆ ಕಾರಣವಾಯ್ತು
ಹೊಸ ಹೊಸ ಸೃಷ್ಟಿಗೆ ಅಡಿಗಲ್ಲಾಯ್ತು.
ಆ ಮಂಗವೆ ಈಗ ಮಾನವನಾದ
ಭವ್ಯ ಮಂದಿರವನ್ನೆ ಸೃಷ್ಟಿಸಿದ
ಉದಿಸಿದನಲ್ಲೇ ಲೋಕೇಶ
ಅಕ್ಷರವೆಲ್ಲಾ ಆಯಿತು ಮಂತ್ರ
ಸಪ್ತಸ್ವರವೇ ಸಂಗೀತ
ಮಾನವ ಜೀವನ ನಿರ್ಮಿತವಾಯ್ತು
ಬದುಕೆಲ್ಲ ಸಾರ್ಥಕವಾಯ್ತು
ಸೃಷ್ಟಿಯ ತಂದೆಯೆ ಗುರಿಯಾಯ್ತು
ಈ ತಂದೆಯ ಮರೆತರು ಸರಿಯೆ
ಆ ತಂದೆಯ ಮರೆತರೆ ಜೋಕೆ
ಕಾದು ಕುಳಿತಿದೆ ಗಿಡುಗನ ಕೊಕ್ಕು
ತಿವಿಯದೆ ಬಿಡದು ನಿಮ್ಮಯ ಸೊಕ್ಕು
ಸಜೀವ ಶರೀರವನೆ ಕೊಚ್ಚಿ ತಿಂದಾವು
ತರುಣರು ನಿಮ್ಮದು ಮಾತ್ರವೆ ಅಲ್ಲದೆ
ನಿರ್ಮೂಲವಾದೀತು ಮಾನವ ಕುಲವೆ.

[ಕಾವೇರಿಯ ಪ್ರವೇಶ ಗಂಟು ಮೂಟೆ ಕಟ್ಟಿಕೊಂಡು]

ಕಾವೇರಿ : ನಡೀರಿ ಹೋಗೋಣ.

ಅಪ್ಪಾ : ಎಲ್ಲಿಗೆ ಹೋಗೋದು.

ಕಾವೇರಿ : ಈ ಮನೆಯಿಂದ ಹೊರಗೆ ಎಲ್ಲಿಗಾದ್ರೂ ಹೋಗೋದು.

ಅಪ್ಪಾ : ಈಗೆಲ್ಲಿ ಹೋಗೋದಿಕ್ಕೆ ಸಾಧ್ಯ ಸರಕಾರ್. ನನ್ನ ಪ್ರಾಯ ಗೊತ್ತಾ ನಿನಗೆ.

ಕಾವೇರಿ : ನನ್ಮೇಲೆ ಭರವಸೆ ಇಲ್ವೇ ನಿಮಗೆ ?

ಅಪ್ಪಾ : ಅದೊಂದೇ ಆಶ್ರಯ ಇನ್ನುಳಿದಿರೋದು ನನ್ಗೆ. ಆದರೆ...ಸರಕಾರ್ ...ನನ್ನನ್ನೆಲ್ಲಿ ಕರಕೊಂಡು ಹೋಗ್ತೀಯಾ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾವೇರಿ : ಮಾಲತಿ ಮನೆಗೆ ಹೋಗೋಣ. ಬೆಳಗ್ಗೆ 5–30ಕ್ಕೆ ಗಾಡಿ ಇದೆ, ಹುಬ್ಬಳ್ಳಿಗೆ.

ಅಪ್ಪಾ : ಬೆಳಗ್ಗೆ ಐದೂವರೆ ತನಕ ರಾತ್ರಿ ಕಳೆಯೋದೆಲ್ಲಿ ?

ಕಾವೇರಿ : ರೈಲ್ವೇ ಸ್ಟೇಶನ್‌ನಲ್ಲಿ......ಅಥವಾ ಯಾವುದಾದರೊಂದು ಮರ ದಡಿಯಲ್ಲಿ. ಆದ್ರೆ ನಾವು ಮಾತ್ರ ಇನ್ನೊಂದು ಘಳಿಗೆ ಕೂಡಾ ಇಲ್ಲಿರಕೂಡದು. ನಿಮಗಾದ ಅವಮಾನ ನಾನೆಂದೂ ಸಹಿಸಲಾರೆ.

ಅಪ್ಪಾ : ನನಗಾದ್ರೂ ಹಾಗೇನೇ ಸರಕಾರ್. ಆದ್ರೆ ಹೊರಡೂದಂದ್ರೆ ಹೇಗೆ. ನನ್ನ ಕೈಲಿ ಹಣ ಕೂಡಾ ಇಲ್ಲ.

ಕಾವೇರಿ : ಅದ್ರ ಚಿಂತೆ ನಿಮಗೆ ಈಗ ಬೇಡ. ಆದಿನ ನೀವು ಐದು ರೂಪ್ಯಾ ಕೇಳಿದಾಗ ಮಾಧು ಕೊಡಲಿಲ್ಲ ತಾನೆ ? ಅಂದೇ ನಾನು ನನ್ನ ಮುತ್ತಿನ ಹಾರ ಮಾರಿಬಿಟ್ಟು ಹಣ ತರಿಸಿಟ್ಟುಕೊಂಡಿದ್ದೀನಿ.

ಅಪ್ಪಾ : ಮುತ್ತಿನ ಹಾರ ? ಯಾವ ಮುತ್ತಿನ ಹಾರ ?

ಕಾವೇರಿ : ಹಾಗೆ ಯಾಕೆ ಕೇಳ್ತೀರಾ. ನಿಮ್ಮ ಸತ್ಕಾರ ಸಮಾರಂಭದ ದಿನ ನೀವು ಮನೆಗೆ ಬರುವಾಗ ನನಗೇಂತ ಮುತ್ತಿನ ಹಾರ 4000 ರೂಪ್ಯಾ ಕೊಟ್ಟು ತರಲಿಲ್ವೆ.

ಅಪ್ಪಾ : ಸರಿ, ಸರಿ. ಅದನ್ನು ಮಾರಿದ್ಯಾ. ನೋಡು ಸರಕಾರ್ ಅವತ್ತು ಇದನ್ನೂ ಮಕ್ಕಳಿಗೇ ಕೊಡೀಂತ ಹೇಳಿದೆಯಲ್ಲ. ನೋಡೀಗ ಉಪ ಕಾರಕ್ಕೆ ಬಿತ್ತೋ ಇಲ್ವೋ ?

ಕಾವೇರಿ : ಹೋಗಲಿ ಆ ಮಾತು. ಆದದ್ದೆಲ್ಲ ಒಳಿತೇ ಆಯಿತು. ಇನ್ನು ಹೊರಡೋ ತಯಾರಿ ಮಾಡೋಣ.

ಅಪ್ಪಾ : ನನ್ನದೇನು ತಯಾರಿ...ನನ್ನ ಕೋಟು, ಕೋಲು...ಮತ್ತು ನೀನು. ಇದೇ ನನ್ನ ಆಸ್ತಿ, ಆಧಾರ ಮತ್ತು ಆಶ್ರಯ.

ಕಾವೇರಿ : (ಅವನ ಕೋಟು, ಕೋಲು ಕೊಡುತ್ತಾ) ಮಾಲತಿ ಮೊನ್ನೆ ಬರೆದ ಕಾಗದದಲ್ಲಿ ಯಾವಾಗ ಬರ್ತೀರೀಂತ ಬರೆದಿದ್ದಳಲ್ಲ......ಈಗ ನಾವು ಸೀದಾ ಅಲ್ಲಿಗೇ ಹೋದೇವೂಂದ್ರೆ ಸಂತೋಷದಿಂದ ಕುಣಿದಾಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ದೂರದಲ್ಲಿರುವಾಗ ಹಾಗೇ. ಮನಸ್ಸು ಎಳೆಯೋದು ಸ್ವಾಭಾವಿಕ. ಆದ್ರೆ……

ಕಾವೇರಿ : ಆದ್ರೆ ಗೀದ್ರೆ ಏನಿಲ್ಲ. ನಮ್ಮ ಮಾಲತಿ ಇವನ ಹಾಗಲ್ಲ. ಪ್ರೇಮದ ಸಾಗರ ಅದು.

ಅಪ್ಪಾ : ನೋಡೂ ನಮ್ಮ ಮಕ್ಕಳು ಯಾರೂ ಕೆಟ್ಟವರಲ್ಲ. ಆದ್ರೆ ಮುದಿತನ ಅನ್ನೋದು ತುಂಬಾ ಕೆಟ್ಟದು……ಅದೊಂದು ಮನುಷ್ಯನಿಗೆ ಶಾಪ ದಂತೆ……ತಾಳು ಮುನ್ನೀನ ಒಂದ್ನಿಮಿಷ ನೋಡಿ ಬರ್ತೀನಿ.

ಕಾವೇರಿ : ಮಗು ನಿಮ್ಮ ಹತ್ರ ಬರಬಾರದೂಂತ ಕೋಣೆಗೆ ಬೀಗ ಹಾಕಿದ್ದಾಳೆ ಮನೇ ಯಜಮಾನಿ.

ಅಪ್ಪಾ : ಅಯ್ಯೋ ಪಾಪ, ಆ ಮಗುವಿಗ್ಯಾಕೇ ಶಿಕ್ಷೆ. ಯಾರ ತಪ್ಪಿಗೆ ಯಾರಿಗೆ ಶಿಕ್ಷೆ. ಮುನ್ನೀ ನನ್ನ ಮುದ್ದು ಮರೀ ಇಲ್ಲಿಂದ್ಲೇ ನಿನಗೆ ಆಶೀರ್ವಾದ ಮಾಡ್ತೀನಮ್ಮಾ…ದೊಡ್ಡವಳಾಗಿ ಒಳ್ಳೇ ಸುಖವಾಗಿ ಬಾಳು ಕಂದಾ. (ತನ್ನಷ್ಟಕ್ಕೇ ಎಲ್ಲರೂ ಕೇಳುವಂತೆ) ಮಾಧೂ……ಶಾರದಾ…… ಇನ್ನಾದ್ರೂ ಸುಖವಾಗಿರೀಪ್ಪ ನೀವು. ನಮ್ಮಿಂದ ಯಾವ ತೊಂದ ರೇನೂ ಬರೋದಿಲ್ಲ, ಸಂತೋಷದಿಂದ ಇದ್ಕೊಳ್ಳಿ.

[ಆಷ್ಟರಲ್ಲಿ ಕೋಣೆ ಒಳಗಿನಿಂದ ಅಜ್ಜಾ ಅಜ್ಜಾ ಎಂದು ಮಗುವಿನ ಧ್ವನಿ ಕೇಳಿಸುತ್ತದೆ. ಮುಖ ಮುಚ್ಚಿಕೊಂಡು ಪುನಃ ಹಿಂದೆ ಹಿಂದೆ ನೋಡ್ತಾ ಅಪ್ಪಾ, ಕಾವೇರಿಯರ ನಿರ್ಗಮನ.]

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಕ ೨

ದೃಶ್ಯ ೧

[ರೈಲ್ವೇ ನಿಲ್ದಾಣ. ಮಧ್ಯಾಹ್ನದ ವೇಳೆ. ಎರಡನೆಯ ದರ್ಜೆಯ Waiting room. ಅಲ್ಲಿಯ ಒಂದು ಬೆಂಚಿನ ಮೇಲೆ ಕಾವೇರಿ ಕುಳಿತಿದ್ದಾಳೆ. ಅಪ್ಪಾ ಅತ್ತಿತ್ತ ಹೆಜ್ಜೆ ಹಾಕುತ್ತಾ ಯಾರನ್ನೋ ನಿರೀಕ್ಷಿಸುವಂತೆ ಕಿಟಕಿ ಹೊರಗೆ ನೋಡುತ್ತಿರುತ್ತಾನೆ. Plat-form ನತ್ತ ನೋಡಿ ಬಂದು]

ಅಪ್ಪಾ : ಮತ್ತೊಂದು ಗಾಡಿ ಹೋಯ್ತು.

ಕಾವೇರಿ : ಅದು ಯಾವ ಗಾಡಿ ಹೋದದ್ದು ?

ಅಪ್ಪಾ : ಅರಸೀಕೆರೆ ಪ್ಯಾಸೆಂಜರ್. ಒಂದೂವರೆ ಘಂಟೆಗೆ ಬರಬೇಕಾಗಿತ್ತು.

ಕಾವೇರಿ : ಈಗೆಷ್ಟಾಯ್ತು.

ಅಪ್ಪಾ : 4½ ಘಂಟೆ. ಅಂದ್ರೆ ಮೂರು ಘಂಟೆ ಲೇಟು. ಈ ರೈಲ್ವೇ Time-Table ನಮ್ಮ ಕಥೆ, ಕಾದಂಬರಿ ಇದ್ದಾಗೆ. ಅದರಲ್ಲಿ ಬರೆದಿರೋದಕ್ಕೂ ನಿಜ ಜೀವನಕ್ಕೂ ಅಜ-ಗಜಾಂತರ. ಅಲ್ಲಾ ಇವರಿನ್ನೂ ಯಾಕೆ ಬಂದಿಲ್ಲ. ನಮ್ಮ ಕಾಗದ ಸಕಾಲಕ್ಕೆ ತಲಪದೆ ಹೋದ್ರೆ ತೊಂದರೆಯಾದೀತೂಂತ Telegram ಕೂಡಾ ಕೊಟ್ಟಿದ್ದೆ.

ಕಾವೇರಿ : ಅದೂ ಮನೆ ತನಕ ಮುಟ್ಟಿರಬೇಕಲ್ಲಾ.

ಅಪ್ಪಾ : ಸರಕಾರ್, ಮನೆ ತನಕ ಖಂಡಿತ ಮುಟ್ಟಿರುತ್ತೆ. ಆದ್ರೆ ಮನಸ್ಸಿನ ತನಕ ಮುಟ್ಟಿರುತ್ತೋಂತ ಅನುಮಾನ. ಮನೆ ಬಾಗಿಲು ತೆರೆದಿದ್ರೂ ಮನಸ್ಸಿನ ಬಾಗಿಲು ಮುಚ್ಚಿದ್ರೆ ನೂರು ಸಲ ತಂತಿ ಕೊಟ್ರೂ ವ್ಯರ್ಥ ತಾನೆ !

ಕಾವೇರಿ : ಯಾಕಂತೀರಿ ಹಾಗೆ. ತಂತಿ ವೇಳೆಗೆ ಸರಿಯಾಗಿ ಮುಟ್ಟಿರಲಿಕ್ಕಿಲ್ಲ. ನೀವು ಯಾಕೆ ಹಾಗೆ ಸುಮ್ಮನೆ ನಿಂತೇ ಇದ್ದೀರಾ. ನೋಡೀ ಆಮೇಲೆ ರಾತ್ರಿ ಕಾಲು ನೋಯುತ್ತೆ, ತಲೆ ನೋಯುತ್ತೇಂತ ಅಂದ್ರೆ......

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಕಾಲುಗಳನ್ನ ಒತ್ತೋದಿಲ್ಲ, ಬೆನ್ನು ತಿಕ್ಕೋದಿಲ್ಲಾಂತ ತಾನೆ! ತಿಳೀತು ನನಗ್ಗೊತ್ತು ಬಾಯಲ್ಲಿ ಹಾಗೆ ಹೇಳಿದ್ರೂ ಕಾರ್ಯದಲ್ಲಿ ನೀನು ಮಾಡದೆ ಇರೋದಿಲ್ಲಾಂತ. ಹೆಂಗಸರ ಸ್ವಭಾವನೇ ಹಾಗೆ. ಹೇಳೋದೊಂದು ಮಾಡೋದಿನ್ನೊಂದು. ಹೋಗಲಿ, ನಿನ್ನ ಸಂತೋಷಕ್ಕೆ ಕುಳಿತುಬಿಡ್ತೇನೆ. ಆದ್ರೆ ಸರಕಾರ್ ಎಷ್ಟು ಹೊತ್ತೂಂತ ಕುಳಿತುಕೊಳ್ಳೋದು ?

ಕಾವೇರಿ : ಇನ್ನೇನು ಮಾಡೋದು ? ನಮ್ಮ ಹಣೇಲಿ ಕಾಯೋದೇ ಆದ್ರೆ ಕುಳಿತುಕೊಂಡೇ ಕಾಯೋದು. ತಂತೀನೇ ತಲಪಿರಲಿಕ್ಕಿಲ್ಲಾಂತ ನನಗನ್ನಿಸುತ್ತೆ. ಇಲ್ಲವಾದ್ರೆ ನಮ್ಮ ಮಾಲತಿನೇ ಬಾರದಿರೋಳು ! ಯಾವಾಗ ಬರ್ತೀರಿಂತ ಬರೀತಾನೇ ಇದ್ಯಲ್ಲ ಪ್ರತಿಯೊಂದು ಕಾಗದ ದಲ್ಲೂ.

ಅಪ್ಪಾ : ಅದೂ ಈ Railway Time-Table ಇದ್ದಂತೆ ಸರಕಾರ್. ಬರೀ ಬೇಕೂಂತ ಬರೆಯೋದಷ್ಟೇ ಹೊರತು ಬರೆದಹಾಗೆ ನಡೀಬೇಕೂಂತಲ್ಲ.

ಕಾವೇರಿ : ಛೆ. ನಮ್ಮ ಮಾಲತಿ ಅಂಥವಳಲ್ಲಾಂದ್ರೆ.

ಅಪ್ಪಾ : ಸರಿ ! ಅವಳು ಅಂಥವಳೂಂತ ಹೇಳಿದ್ದಲ್ಲ. ಪ್ರಪಂಚದ ರೀತೀನೇ ಹಾಗಿರುತ್ತೇಂತ. ಅಪರೂಪಕ್ಕೊಮ್ಮೆ ಅತಿಥಿಯಾಗಿ ಹೋದ್ರೆ ಬನ್ನಿ, ಬನ್ನೀಂತ ಬಹಳ ಉಪಚಾರ ಮಾಡೋದು. ಹಾಗೇಂತ ಅಲ್ಲಿಗೆ ಹೋಗ್ತಾ ಇದ್ರೆ ಇವ್ರು ಯಾಕಪ್ಪಾ ಬರ್ತಿದಾರೇಂತ ಅವ್ರಿಗೆ ಅನ್ನಿ ಸೋದು.

ಕಾವೇರಿ : ನೀವ್ಯಾಕೆ ಈ ರೀತಿ ಯೋಚಿಸ್ತೀರಿ. ಸ್ವಲ್ಪ ಹೊತ್ತು ತಾಳಿ. ಯಾರಾದ್ರೂ ಬಾರದೆ ಇರಲಿಕ್ಕಿಲ್ಲ. ನೀವು ಇಲ್ಲಿ ಸಾಮಾನು ನೋಡ್ತಿರಿ. ನಾನು ಸ್ವಲ್ಪ ಹೊರಗೆ ಸುತ್ತಾಡಿ ಯಾರಾದ್ರೂ ಕಾಣಿಸ್ತಾ ರೋಂತ ನೋಡಿಬರ್ತೀನಿ.

ಅಪ್ಪಾ : ಸರಿ ! ಆದ್ರೆ ಬಿಸಿಲಿಗೆ ದೂರ ಹೋಗ್ಬೇಡ...ಬೇಗ ಬಂದ್ಬಿಡು. ನೀನು ಬರೋತನಕ ನಾನೊಂದು ಸಿಗರೇಟ್ ಸೇದ್ತೇ.

ಕಾವೇರಿ : ಪುನಃ ಶುರುಮಾಡಿದ್ರಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಅಲ್ಲಾ...ನಿನ್ನ ಒಪ್ಪಿಗೆ ಇದ್ರೆ ಮಾತ್ರ.

ಕಾವೇರಿ : ಹುಂ, ಸರಿ. ಬರೇ ಒಂದು. ಮತ್ತೆ ಎಳೆಯೋದಿಕ್ಕೆ ಶುರುಮಾಡಿದ್ರೆ ಇತಿಮಿತಿಯೇ ಇರೋದಿಲ್ಲ.

[ಹೋಗುವಳು]

ಅಪ್ಪಾ : ಒಂದೇ. ಒಮ್ಮೆ ಸೇದುವಾಗ ಒಂದೇ ಸೇದೋದು. (ಹೊಗೆಯನ್ನೇ ನೋಡುತ್ತಾ) ಜಗತ್ತೆಂಬ ಸಾಗರದ ಸುಳಿಯಲ್ಲಿ ಸಿಕ್ಕಿ ಸುತ್ತುವಂತಿದೆ ಈ ಜೀವನದ ನೌಕೆ. ಅತ್ತ ದಡವೂ ಇಲ್ಲ, ಇತ್ತ ಬುಡವೂ ಇಲ್ಲ. ಸುಳಿಯಲ್ಲೇ ಸುತ್ತುತ್ತಾ ಇದೆ. ಗಾಳಿಯಲ್ಲಿ ಹೊಗೆ ಸೇರಿದಂತೆ, ಭೂಮಿಯಲ್ಲಿ ಬೂದಿ ಬೆರೆತಂತೆ ಈ ನಶ್ವರ ಶರೀರ ಜೀವಂತವಿರುವ ತನಕ ಬದುಕಲೇಬೇಕಲ್ಲ. ಅರೇ ಮುನ್ನೀ ಪುನಃ ನನ್ನ ಜತೆ ಮೋಸದ ಆಟ ಆಡ್ತಿದಿಯಾ. ಈ ಮುದುಕನಿಗೆ ಮೋಸ ಮಾಡೋದಿಕ್ಕೆ ನಿನಗೆ ನಾಚಿಕೆಯಾಗೋದಿಲ್ವೇ ? ಆಗ ಅರಸೀಕೆರೆ ಪ್ಯಾಸೆಂಜರ್‌ನ ಕಿಟಿಕಿ ಬದೀಲಿ ಕೂತ್ಕೊಂಡು ಕರೀತಾ ಇದ್ದಿ. ನಿನ್ನನ್ನು ಹಿಡಿಯೋದಿಕ್ಕೆ ತಾನು ಬರ್‍ತಾ ಇದ್ರೆ ಗಾಡಿ ಅಡಿ ಬೀಳ್ತಾ ಇದ್ದೆ. ಈ ಮುದುಕನ ಜೀವದ ಮೇಲೆ ನಿನಗೆ ಪ್ರೀತಿ ಇಲ್ವೇ ? ಸರಿ ಮತ್ತೀಗ ಇಲ್ಲಿ ಬಂದಿದ್ದೀಯಾ. ನಾನಿಲ್ಲಿಂದ ಏಳೋಲ್ಲ. ನಿಂಗೆ ಬೇಕಿದ್ರೆ ನೀನೇ ಬಂದು ಚಾಕ್ಲೇಟ್ ತೆಗೆದುಕೊಂಡು ಹೋಗು. ತಗೋ ನಾನು ನಿನ್ನನ್ನು ಇನ್ನೂ ಮರ್‍ತಿಲ್ಲ. ನಿಂಗೇನು ಬೇಕೂಂತ ನನಗ್ಗೊತ್ತು.

[ಪ್ರಕಾಶ ಕಡಿಮೆಯಾಗುತ್ತಾ ಮುನ್ನಿ ನಿಂತ ಜಾಗದಲ್ಲಿ T.C. ಟಿಕೇಟು ವಿಚಾರಿಸುವಂತೆ ಸೂಚನೆ ಮಾಡ್ತಾನೆ. ಅಪ್ಪಾ ಅವನ ಕೈಗೆ Chocolate ಕೊಡುವನು]

T.C : ನಂಗೆ ಬರೇ Ticket ಬೇಕು.

ಅಪ್ಪಾ : Chocolate ನಡೆಯೋದಿಲ್ವೇ ?

T.C : Ticket ಬಿಟ್ಟು ಏನೂ ನಡೆಯೋದಿಲ್ಲ.

ಅಪ್ಪಾ : ಓ...ನೀವಾ, ನಾವು Ticket ತಗೊಂಡೇ ಬಂದವ್ರು. ಜೀವಮಾನದಲ್ಲಿ ಟಿಕೇಟಿಲ್ದೆ ಪ್ರಯಾಣ ಮಾಡಿದ್ದೊಂದ್ರೆ ಒಂದೇ ಸಲ, ಅದು

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಜನ್ಮಕ್ಕೆ ಬಂದಾಗ, ಇನ್ನೊಮ್ಮೆ ಮಾಡೋದಿದೆ—ಅದು ಈ ಜಗತ್ತನ್ನೇ ಬಿಟ್ಟು ಹೋಗುವಾಗ. ಆಗ ಬೇಕಿದ್ರೆ ಟಿಕೇಟಿಲ್ದೆ ಪ್ರಯಾಣ ಮಾಡಿದ್ದಕ್ಕೆ ನೀವು fine ಹಾಕ್ಬಬಹುದು. ಆದ್ರೆ ನಮ್ಮ ಜತೆ ನೀವೂ ಬರಬೇಕಾದೀತು.

T.C : ಬಹಳ ಸ್ವಾರಸ್ಯವಾಗಿದೇರಿ ನಿಮ್ಮ ಮಾತು.

ಅಪ್ಪಾ : ಮಾತೊಂದೇ ನಮ್ಮ ಬಂಡವಾಳ. ಅದೊಂದೇ ಈಗ ಗತ ಕಾಲ ವೈಭವದ ಅವಶೇಷ. ನನ್ನ ಟಿಕೇಟು (ಹುಡುಕುತ್ತಾ) ಅರೆ ಪಾಕೀಟು ಎಲ್ಹೋಯ್ತು ?

T.C. : ಪಾಕೀಟಲ್ಲಾರೀ...ಟಿಕೇಟು.

ಅಪ್ಪಾ : ಅದೇ ಟಿಕೇಟು ಪಾಕೀಟಿನಲ್ಲಿಟ್ಟಿದ್ದೀನಯ್ಯಾ. ಈಗ ಪಾಕೀಟೇ ಸಿಕ್ತಾ ಇಲ್ಲ. (ಹುಡುಕಿ) ಹಾಂ...ಸಿಗ್ತು ತಗೋ...

T.C : (Ticket ನೋಡ್ತಾ) ಅಂದ್ರೆ ನೀವು ಬಂದೋರು ತಾನೆ! ನಾನಂದ್ಕೊಂಡಿದ್ದೆ ನೀವು ಎಲ್ಲೋ ಹೋಗುವವರೂಂತ.

ಅಪ್ಪಾ : ಹೋಗೋರೇ ಕಣಯ್ಯ. ಕರೆದುಕೊಂಡು ಹೋಗೋರು ಬರ ಲಿಲ್ಲಾಂತ ಇಲ್ಲೇ ಇದ್ದೇವೆ.

ಕೂಲಿ : (ಓಡಿಬಂದು) ಇವ್ರೇ ಸ್ವಾಮಿ, ಆ ಅರಸೀಕೆರೆ ಪ್ಯಾಸೆಂಜರ್ ಹೊರ ಟಿತ್ತು. ಗಾಡಿಯ ಕಿಟಕಿಯಲ್ಲಿ ಕೈ ಬೀಸ್ತಾ ಇರೋ ಸಣ್ಣ ಹುಡುಗಿಯ ಕಡೆ ನೋಡ್ತಾ ಓಡ್ತಾ ಇದ್ರು. ಕೆಳಗೆ ಬಿದ್ದು ಸಾಯ್ತಿದ್ರು. ನಾನೇ ಅವ್ರನ್ನು ಎಳೆದು ಈಚೆಗೆ ದೂಡಿದ್ದು. ಸ್ವಲ್ಪ ಬುದ್ಧಿ ಹೇಳಿ ಸ್ವಾಮಿ ಈ ಮುದುಕನಿಗೆ.

T.C : ಅಜ್ಜಾ ನಿನಗೆ ಬೇಕಾದೋರು ಯಾರೂ ಇಲ್ವಾ ?

ಅಪ್ಪಾ : ಎಲ್ರೂ ಇದ್ದಾರಯ್ಯಾ.

T.C : ಮತ್ತ್ಯಾಕೆ ನಿನಗೆ ಜೀವ ಭಾರ ಆಗಿದೆ, ಹಾಗೆ ಓಡೋದಿಕ್ಕೆ.

ಅಪ್ಪಾ : ಓ ಅದೇ. ನನ್ನ ಮುನ್ನಿಯಯ್ಯಾ. ಮಾಧು ಮಗಳು. ಹೋಗಲಿ ಬಿಡು. ಮಾಧು ಯಾರೂಂತ ನಿನ್ಗೇನು ಗೊತ್ತು ? ಗಾಂಧೀನಗರಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಷ್ಟು ದೂರ ಇದೆ ಇಲ್ಲಿಂದ? ಅಲ್ಲಿ ನನ್ನಳಿಯ ಡೆಪ್ಯೂಟಿ ಇಂಜಿನಿಯರಿಂಗ್ ಸುಪರಿಂಟೆಂಡೆಂಟ್.

T.C : ಯಾರು ಸುಧಾಕರ್ ದೇಶ್‌ಪಾಂಡೇನೇ.

ಅಪ್ಪಾ : ಅವನೇ ನನ್ನ ಅಳಿಯ.

T.C : ಅವ್ರು ಬಹಳ ದೊಡ್ಡ ಮನುಷ್ಯರು. ಕ್ಷಮಿಸಿ ಅಜ್ಜಾ. ಅವರ್‍ಯಾಕೆ ನಿಮಗೆ ಗಾಡಿ ಕಳಿಸ್ಲಿಲ್ಲ ? ಇಲ್ಲಿಂದ ಆರೇಳು ಮೈಲು ಆಗ್ಬಹುದು. ಬಸ್‌ಗಿಸ್ನಲ್ಲಿ ಹೋಗೋದೂಂದ್ರೆ ತುಂಬಾ ತೊಂದ್ರೆ. ನೀವಿಲ್ಲೇ ಸ್ವಲ್ಪ ಕೂತಿರಿ. ನಾನೇ ನಿಮ್ಮಳಿಯನಿಗೆ Telephone ಮಾಡ್ತೇನೆ. ಅವರೇನೋ ಗಡಿಬಿಡಿಯಲ್ಲಿದ್ದಿರ್ಬೇಕು.

[T.C ಹೋಗುತ್ತಾನೆ : ವಿಠಲ ಬರುತ್ತಾನೆ.]

ವಿಠಲ : ಗಡಿಬಡೀಂದ್ರೇನು ಸ್ವಾಮಿಾ, ಭಯಂಕರವಾದ ಗಡಿಬಿಡಿ. ಪ್ರಚಂಡ ಗಡಿಬಿಡಿ. ಅಲ್ಲೋಲ ಕಲ್ಲೋಲ. Office director ಮನೇಲಿ party ಗೇಂತ ನಮ್ಮಮ್ಮಾವ್ರೂ ಯಜಮಾನ್ರೂ ಹೊರಡ್ತಾ ಇದ್ರೆ ಢಂ ಅಂತ ಬಂತು ನೋಡಿ ನಿಮ್ಮ Telegram. ಪಾರ್ಟಿಯಿಂದ ಬರುವಾಗ ತಡವಾಗಬಹುದೂ ಹೊರಡು ಮಗನೇ Station ಗೇಂತಂದ್ರು-ನನ್ಗೆ. ಕಂಪ್ನೀ ಜೀಪಲ್ಲಿ ಕೂತು ಝುಂ ಅಂತ ಹೊರಟ್ರೆ ಗಜಕ್ಕಂತ ನಿಂತ್ಹೋಯ್ತು, ನೋಡಿ ಗಾಡಿ, ಅರ್ಧ ದಾರೀಲೇ. ಯಾಕೆ Pssss.. ... Tyre puncture. ಹೊತ್ತಾಗುತ್ತೇಂತ ಕುದ್ರೆ ಗಾಡೀಲಿ ಡಗ್ ಡಗ್ ಡಗ್ ಡಗ್‌ಂತ ಬರ್‍ತಾ ಇದ್ರೆ, ಹುಚ್ಚು ಹಿಡೀತು ಸ್ವಾಮಿಾ ಕುದುರೆಗೆ. ಗಾಬರಿಯಲ್ಲಿ ಗಾಡಿಬಿಟ್ಟು ಬರೇ ಕಾಲಲ್ಲಿ ಓಡ್ತಾ ಬಂದ್ರೆ, ಕಣ್ಣಿಗೆ ಕಾಣ್ತಾ ಇತ್ತು–ಜುಗ್ ಜುಗ್ ಜುಗ್ ಜುಗ್‌ಂತ ನಿಮ್ಮ ರೈಲು, Station ಬಿಟ್ಟು ಹೋದದ್ದು. ಅಯ್ಯೋ ತಡ ವಾಯ್ತಲ್ಲಾಂತ ಚಾ ಕುಡೀತಾ ಇದ್ರೆ ಕಣ್ಣಿಗೆ ಬಿದ್ರು ದೊಡ್ಡಮ್ಮ.

ಅಪ್ಪಾ : ಶತಾಯುಷ್ಯವಂತನಾಗು ಮಗನೆ !

ವಿಠಲ : ನನಗ್ಯಾಕೆ ಸ್ವಾಮಿ ನೂರು ವರ್ಷ ಆಯುಸ್ಸು.

ಅಪ್ಪಾ : ಯಾರಯ್ಯಾ ನೀನು ?

*

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಠಲ : ವಿಠಲಾ ಅಂತ ಅಂದ್ನಲ್ಲ.

ಕಾವೇರಿ : ನಮ್ಮ ಮಾಲತಿ ಮನೆ ಆಳು. ನಮ್ಮನ್ನು ಕರೆದುಕೊಂಡು ಹೋಗ್ಗೋದಕ್ಕೆ ಬಂದಿದ್ದಾನೆ.

ಅಪ್ಪಾ : ಓಹೋ ಹಾಗೋ. ನಿನಗೆಲ್ಲಿ ಪ್ರತ್ಯಕ್ಷನಾದ ಈ ಪುರಂದರ ವಿಠಲ.

ಕಾವೇರಿ : ಅವನೇ ವಿಚಾರಿಸಿದ ಮಾಲತೀಯಮ್ಮನವರ ಅಮ್ಮ ದೊಡ್ಡಮ್ಮ ನೀವೇಂತ.

ಅಪ್ಪಾ : ಸರಿ, ಸರಿ. ಮಾಲತಿಗೆ ಚಿಕ್ಕಮ್ಮ ಬೇರೆ ಇದ್ದಾಳೇನಯ್ಯಾ.

ವಿಠಲ : ಕ್ಷಮಿಸಿ ಸಾಹೇಬ್ರೆ. ಇವೊತ್ತು ನನ್ನಮ್ಮ ಬರೋವ್ರಿದ್ದಾರೇಂತ ನಮ್ಮಮ್ಮಾನೇ ಹೇಳಿದ್ರೆ ನಮ್ಮಮ್ಮಾವ್ರ ಅಮ್ಮ ಅಂದ್ರೆ ದೊಡ್ಡಮ್ಮ ಆಗ್ಲಿಲ್ವೇ ?

ಅಪ್ಪಾ : ಭಲೇ ನಿನ್ನ ಬುದ್ಧಿ. ಅಲ್ಲಾ ಯಾವುದಾದ್ರೂ ನಾಟಕದ ಕಂಪೆನೀಲಿ ಇದ್ದೀಯೇನಯ್ಯಾ.

ವಿಠಲ : ಹೇಗೆ ತಿಳೀತು ನೋಡಿದ್ರಾ. ನಟರ ಪರಿಚಯ ಸಿಗೋದು ನಟರಾದವರಿಗೆ ಮಾತ್ರ. ವ್ಯತ್ಯಾಸ ಇಷ್ಟೇ. ತಾವು ನಟ ಸಾರ್ವಭೌಮ, ನಾನೊಬ್ಬ ನಟಗುಲಾಮ.

ಅಪ್ಪಾ : ಯಾಕೋ ಹಾಗಂತೀ. ಯಾವ ನಾಟಕದಲ್ಲಿ ಏನು ಪಾರ್ಟು ಮಾಡಿದ್ದೀ ಹೇಳು ?

ವಿಠಲ : ಸಾಹೇಬ್ರೇ ನಟದಾಸಾಂತ ಹೇಳಿದ್ದಲ್ಲ. ರಾಜಾಪಾರ್ಟು ಮಾಡ್ಬೇಕೂಂತಿದೆ ಮನಸ್ಸಿನಲ್ಲಿ, ಆದ್ರೆ ಯಾರು ಕೊಡ್ತಾರೆ ? ಗುಲಾಮನಾಗಿ ಸರಿಯಾಗಿ ಸಲಾಮು ಮಾಡಿದ್ರೆ ತಾನೆ ಸಿಗೋದು ಪಾರ್ಟು !

ಅಪ್ಪಾ : ಅರ್ಥವಾಯ್ತು. ಸಲಾಮು ಸರಿಯಾಗಿ ಮಾಡ್ಲಿಲ್ಲ. ಗುಲಾಮನ ಪಾರ್ಟು ಸಿಕ್ಲಿಲ್ಲ. ಹೋಗಲಿ ಬೇರೇನು ಮಾಡಿದ್ದಿ ?

ವಿಠಲ : ನಾಟಕ ಕಂಪೆನೀ ಯಜಮಾನ್ರು ಅಡಿಗೆ ಮಾಡೋ ಅಭ್ಯಾಸ ಮಾಡೂ ಆಮೇಲೆ ಪಿಕ್ಚರ್‌ನಲ್ಲಿ ಅಡಿಗೆಯವನ ಪಾತ್ರ ಮಾಡೋಕೆ ಛಾನ್ಸ್ ಕೊಡ್ತೇನೇಂತಂದ್ರು. ಆದ್ರೆ shooting ಶುರೂ ಆಗೋ ಮೊದಲೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಂಪ್ನಿ ಗುಳುಂಕ್ ಆಯ್ತು. ಅಡಿಗೇ ಪಾತ್ರ permanent ಆಯ್ತು. ಜೀವನವಿಡೀ ಈಗ ಚಿಕ್ಕಮ್ಮಾವ್ರಲ್ಲಿ......

ಅಪ್ಪಾ : ಅಡಿಗೆ ಮಾಡ್ತಾ ಇದ್ದಿಯಾ ಮಾಲತಿ ಮನೆಯಲ್ಲಿ ? ಸರಿ ಅದೇನು ಮಾಲತಿ ಅಮ್ಮ ಬರ್ಲಿಲ್ಲ.

ವಿಠಲ : ಸಾಹೇಬ್ರು ಜತೆ ಡಿನ್ನರ್‌ಗೆ ಹೋಗಿದ್ರೂಂತ ಹೇಳಿದ್ನಲ್ಲಾ. ಅದಕ್ಕೇ ನನ್ನನ್ನು ಕಳುಹಿಸಿದ್ದು. ಗ್ರಹಚಾರ ಹಿಡಿದ ಜೀಪು ಗೋತಾ ಹೊಡೀತು. ಬರೋದಿಕ್ಕೆ ತಡವಾಯ್ತು. ಅಮ್ಮಾವ್ರು ಬರ್‍ಬಹುದು. ಹಿಂದಿನಿಂದ. (Car Horn) ಹಾಂ ನೋಡಿ ಮೋಟಾರಿನ Horn. ಅವ್ರು ಬಂದ್ರೂಂತ ಕಾಣುತ್ತೆ.

ಮಾಲತಿ: (ಅವಸರದಿಂದ ಓಡಿಬಂದು) ಅಮ್ಮಾ......ಅಪ್ಪಾ......(ನಮಸ್ಕಾರ ಮಾಡುವಳು) ಕ್ಷಮಿಸಿ ಅಮ್ಮಾ, ಬರೋದಕ್ಕೆ ತಡವಾಯ್ತು.

ಅಪ್ಪಾ : ಪರವಾಗಿಲ್ಲ, ಚೆನ್ನಾಗಿದ್ದಿಯಲ್ಲಾ. ಇದೇನು ಇಷ್ಟು ಕ್ಷೀಣವಾಗಿದ್ದೀ? (ನಸುನಗುತ್ತಾ) ಹೂಂ......ಒಳ್ಳೇ ಸುದ್ದಿ ಏನಾದ್ರೂ ಇದ್ದಿರ್ಬೇಕು.

ಮಾಲತಿ: ಶೀ ನಿಮಗೆ ಯಾವಾಗ್ಲೂ ತಮಾಷೇನೇ.

ಅಪ್ಪಾ : ಹಾಗಾದ್ರೆ ಇನ್ನೇನು ಚೆನ್ನಾಗಿದ್ದಿ ತಾನೆ !

ಮಾಲತಿ: ನನಗೇನಾಗಿದೆ ? ಚೆನ್ನಾಗಿದ್ದೀನಲ್ಲಾ.

ಅಪ್ಪಾ : ಹೋಗಲಿ ಬಿಡು. ಅಳಿಯದೇವರನ್ನ ವಿಚಾರಿಸ್ಲೇ ಇಲ್ಲ. ಐದು ವರ್ಷಗಳಾಯ್ತಲ್ಲಾ ನೋಡದೆ. ಅಲ್ಲಪ್ಪಾ ಇವಳನ್ನ ಹೀಗ್ಯಾಕೆ ಮಾಡಿದ್ದೀಯಾ.

ಸುಧಾಕರ: ಅವಳನ್ನೇ ಕೇಳಿ. ಡಾಯಟಿಂಗ್ ಪ್ರೋಗ್ರಾಮ್. ತಿನ್ನೋದಿಲ್ಲ, ಉಣ್ಣೋದಿಲ್ಲ. ಆಡಿನ ಹಾಗೆ ಬರೇ ಸೊಪ್ಪಿನ ಆಹಾರ.

ಮಾಲತಿ: ಇಲ್ಲೇ ಕಾಲ ಕಳೆಯೋದಿಕ್ಕೇನಾಗಿದೆ ನಮಗೆ? ಮನೆಗೆ ಹೋಗೋದು ಬೇಡ್ವೇ. ವಿಠಲಾ ಸಾಮಾನೆಲ್ಲಾ ಗಾಡಿಯಲ್ಲಿಡಬಾರ್ದೇ. ಹೋ... ಗಾಡಿ ಪೆಟ್ರೋಲ್ ಹಾಕೋದಕ್ಕೆ ಹೋಯ್ತೂಂತ ಕಾಣುತ್ತೆ. ಶಂಕರ ಬಂದ ಕೂಡ್ಲೇ Horn ಮಾಡೋದಿಕ್ಕೆ ಹೇಳು. ಹೋಗು...... ಹುಂ....

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಯಾಕವಸರ ಪಡ್ತೀ. ಎರಡು ಘಂಟೆಯಿಂದ ಇಲ್ಲಿ ಕಾಯ್ತಾ ಇರೋವಾಗ ಇನ್ನೊಂದೆರಡು ನಿಮಿಷ ತಡವಾದ್ರೇನು ?

ಸುಧಾಕರ: ಕ್ಷಮಿಸಿ ಮಾವಯ್ಯ. ಬರೋದಕ್ಕೆ ಸ್ವಲ್ಪ ತಡವಾಯ್ತು.

ಮಾಲತಿ: ನಿಮ್ಮ Telegram ಇವತ್ತೇ ಸಿಕ್ತು, ಅದರ ಜತೆ ಮಾಧೂನ ತಂತೀನೂ ಬಂತು. ನೀವು ಸುಖವಾಗಿ ತಲಪಿದ್ದೀರಾ ಕೂಡ್ಲೇ ತಿಳಿಸಬೇಕೂಂತ. ಇವತ್ತು Office ಗೆ ರಜೆ ಇದ್ರೂ, ರಷ್ಯಾದ ಇಬ್ಬರು ಇಂಜಿನಿಯರು ಬಂದಿದ್ರೂಂತ ಇವರ Meeting ಇಟ್ಟಿದ್ರು. Meeting ಆದ್ಮೇಲೆ ಇದ್ದೇ ಇದೆಯಲ್ಲ party, dinner ಎಲ್ಲಾ (ವಿಠಲನನ್ನು ನೋಡಿ) ಏನೋ ಸಾಮಾನುಗಳನ್ನು ಗಾಡಿಯಲ್ಲಿಡೋಕಾಗೋಲ್ವೇ ? ಏನ್ ನೋಡ್ತಾ ಇದ್ದಿ.

[ವಿಠಲ ಸಾಮಾನುಕೊಂಡು ಹೋಗುವನು]

ಇವನೊಬ್ಬ ಗೊಡ್ಡು ! ಸಾವಿರ ಸಲಹೇಳಿದ್ರೂ ಸಾಕಾಗೋಲ್ಲ.

ಅಪ್ಪಾ : ಅವನೂ ಒಬ್ಬ ಕಲಾವಂತ ಅಲ್ವೇ. ಈ ಕಲಾವಂತರ ಸ್ವಭಾವಾನೇ ಹಾಗೆ. ಒಮ್ಮೆ ಹೇಳಿದರೆ ಸಾಕಾಗೋದಿಲ್ಲ. ಹೇಳಿ ಹೇಳಿ ಕಂಠಪಾಠ ಮಾಡಿದ್ರೇನೇ ತಲೆಗೆ ಹತ್ತೋದು.

ಮಾಲತಿ: ಅಂದ್ರೆ ಶುರು ಮಾಡಿದ್ನಾ ನಿಮ್ಮ ಹತ್ರಾನೂ ನಾಟಕದ ಪುರಾಣ.

ಅಪ್ಪಾ : ಅವನ ಪುರಾಣ ಹಾಗಿರ್ಲಿ. ನಿಮ್ಮ ನಾಟಕ Hamlet ಎಲ್ಲೀವರೆಗೆ ಬಂತು ? ನೀನೂ ಪಾರ್ಟು ಮಾಡ್ತೀಂತ ಸುದ್ದಿ.

ಮಾಲತಿ: ಅದು ಇವರ ಕೆಲಸ. ನನಗೆ ಇಷ್ಟ ಇಲ್ದಿದ್ರೂ ಇವರ ಒತ್ತಾಯ. ನಮ್ಮ ನಾಟಕ ಹೇಗೇ ಆಗ್ಲಿ ಉದ್ಘಾಟನೆಗೆ ನಿಮ್ಮನ್ನೇ ಕರೆಸಿಕೊಳ್ಬೇಕೂಂತಿದ್ದಾರೆ.

ಅಪ್ಪಾ : ಕರೆಸಿಕೊಳ್ಳೋದೆಲ್ಬಂತು. ಇಲ್ಲೇ ಬಂದಿದ್ದೇವಲ್ಲಾ.

ಮಾಲತಿ: ಅದಕ್ಕಿನ್ನೂ ತುಂಬಾ ದಿನ ಇದೆ. ಹೆಚ್ಚು ಕಡಿಮೆ ಎರಡು ತಿಂಗಳಿವೆ.

ಅಪ್ಪಾ : ಪರ್ವಾಗಿಲ್ಲ ಇಲ್ಲೇ ಇರ್ತೀವಲ್ಲಾ ನಾವು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಲತಿ: ಆದ್ರೆ ಅಣ್ಣ Telegram ಕೊಟ್ಟಿದ್ದಾನಲ್ಲಾ ಎಂಟು ದಿನಗಳಲ್ಲೇ ನಿಮ್ಮನ್ನ ಹಿಂದಕ್ಕೆ ಕಳುಹಿಸಬೇಕೂಂತ !

ಅಪ್ಪಾ : ನಾವು ಹೋಗೋದಿಲ್ಲಾಂತ ನಿರ್ಧಾರ ಮಾಡಿದ್ದೇವೆ.

ಮಾಲತಿ: (ಆಶ್ಚರ್ಯದಿಂದ) ಅಂದ್ರೆ......ನೀವು...

ಅಪ್ಪಾ : ಇನ್ನು ಮುಂದೆ ಇಲ್ಲೇ ಇರಬೇಕೂಂತ ನಿಶ್ಚಯಿಸಿದ್ದೇವೆ.

ಮಾಲತಿ: ಅಂದ್ರೆ.

ಅಪ್ಪಾ : ಕಾಯಂ–ಬದುಕಿರೋ–ತನಕ ನಿಮ್ಮ ಆಕ್ಷೇಪಣೆ ಇಲ್ಲದಿದ್ರೆ.

ಮಾಲತಿ: ಛೆ...ಛೆ... ನೀವು ಇರಬಾರ್ದೂಂತ ನಾವು ಹೇಳೋದು ಸಾಧ್ಯವೇ ನಪ್ಪಾ.

ಅಪ್ಪಾ : ಯಾರಿಗೆ ಗೊತ್ತು ? ನಿನ್ನ ಮುಖದ ಭಾವ ನೋಡಿ ಹಾಗನ್ನಿಸಿತು.

ಮಾಲತಿ: ತಪ್ಪು ತಿಳ್ಕೋಬೇಡಿ ಅಪ್ಪಾ. ನೀವಿಲ್ಲೇ ಇದ್ರೆ ಅಣ್ಣ ಏನಾದ್ರೂ ತಿಳ್ಕೋಬಹುದಲ್ಲಾಂತ.

ಅಪ್ಪಾ : ಏನೂ ತಿಳ್ಕೊಳ್ಳೋದಿಲ್ಲ. ಸುಧಾಕರ್ ! ನಮಗೆ ನಿಮ್ಮನೇಲಿ ಜಾಗ ಇದೆ ತಾನೆ !

ಸುಧಾಕರ: ಏನು ಹೇಳ್ತೀರಿ ಮಾವಯ್ಯ. ದೇವರ ದಯೆಯಿಂದ ದೊಡ್ಡ ಬಂಗ್ಲೆ ಇದೆ.

ಅಪ್ಪಾ : ಆದ್ರೂ ಮಕ್ಕಳಿದ್ದಾರಲ್ಲಾ. ಅಭ್ಯಾಸ ಓದು ಗೀದು ಯಾರಿಗೂ ತೊಂದರೆ ಆಗ್ಬಾರ್ದಲ್ಲಾ.

ಸುಧಾಕರ: ಅವರೆಲ್ಲಿದ್ದಾರೆ ಮನೇಲಿ. ಕಾನ್ವೆಂಟ್ Hostel ನಲ್ಲೇ ವ್ಯವಸ್ಥೆ ಆಗಿದೆ.

ಅಪ್ಪಾ : ಅಂದ್ರೆ ಮನೇಲಿ ನೀವಿಬ್ರೇ ಇರೋದೇ ಈಗ.

ಮಾಲತಿ: ಇಬ್ರೇ ಏಕೆ ಈ ನಟ ಭೈರವ ವಿಠಲ ಒಬ್ಬನೇ ಸಾಕಲ್ಲ. ಭಡ-ಭಡಾಂತ ಆರ್ಭಟೆ ಹೊಡೆಯೋದಕ್ಕೆ......ಅಂದಹಾಗೆ ಮಾತಾಡ್ತಾ ಮಾಲೆ ಹಾಕೋದು ಮರೆತೇ ಹೋಯ್ತಲ್ಲಾ (ಗಂಡನಿಗೆ) ಚೆನ್ನಾಯ್ತು ನೀವಾದ್ರೂ ಜ್ಞಾಪಿಸಿದ್ರಾ !

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಧಾಕರ: ಹಾರ ನಿನ್ನ ಜತೇನೇ ಇಟ್ಕೊಂಡ್ದೀಯಾ ನನ್ನನ್ನ ಜ್ಞಾಪಿಸ ಬೇಕೂಂತೀಯಾ.

ಮಾಲತಿ: ಅಪ್ಪಾ, ನಮ್ಮ ಮನೇದೇ ಮಲ್ಲಿಗೆ ಹೂ. ನಾನೇ ಹೆಣೆದ ಹಾರ. [ಹಾಕುವಳು]

ಅಪ್ಪಾ : ಯಾಕೀ ಸಂಭ್ರಮ ಎಲ್ಲಾ. ಅದೂ ಇಲ್ಲಿ ಸ್ಟೇಶನ್‌ನಲ್ಲಿ !

ಮಾಲತಿ: ಅಪ್ಪಾ ಇವತ್ತು ನಿಮ್ಮ ಹುಟ್ಟಿದ ದಿನ. ನಿಮಗೇ ತಿಳಿದಿರಲಿಕ್ಕಿಲ್ಲ. ತಗೋಮ್ಮಾ ನೀನೂ ಹೂ ಮುಡಿದುಕೋ.

ಕಾವೇರಿ : ಅಯ್ಯೋ ಹುಚ್ಚೀ ಇಷ್ಟೊಂದು ಹೂ ಮುಡಿಯೋದಿಕ್ಕೆ ನಾನೇನು ಮದುಮಗಳೇ. ನೀನೂ ಇಟ್ಕೋ ನೋಡೋಣ.

ಅಪ್ಪಾ : ಇಟ್ಕೋ ಸರಕಾರ್. ಮಗಳ order ಮೀರಕೂಡದು. ನಾಳೆ ನೈಲಾನ್‌ಸೀರೆ ಉಟ್ಕೋಂತಂದ್ರೆ ಅದಕ್ಕೂ ತಯಾರಿರಬೇಕು, ಮಗಳ ಮನೇಲಿ.

ಮಾಲತಿ: ಮಗಳ ಮನೇಂತಂದ್ರೆ ನಿಮ್ದೂ ಅಲ್ವಾ ? ನೀವು ಇಲ್ಲೇ ಇರ್ತೀರೀಂತ ಕೇಳಿಯಂತೂ ಬಹಳ ಸಂತೋಷವಾಯ್ತು. (Car Horn) ಹಾಂ ಗಾಡಿ ಬಂತೂಂತ ಕಾಣಿಸುತ್ತೆ. ಅಮ್ಮಾ ಹೊಸ Car ತಗೊಂಡಿದ್ದೀನಿ. ನೋಡು ನಾನೇ driving ಮಾಡ್ತೀನಪ್ಪಾ. ನೋಡಿ ನಿಮ್ಮ ಪುಟ್ಟಮರಿ ಎಷ್ಟು ಹುಶಾರಾಗಿದ್ದಾಳೇಂತ.

ಅಪ್ಪಾ : ನನ್ನ ಪುಟ್ಟಮರಿ ಈಗ ನನ್ನ ಮೊಮ್ಮಕ್ಕಳಿಗೆ ತಾಯಿಯಾಗಿ ಅಳಿಯನ ಸಹಚರಿಯಾಗಿದ್ದಾಳೇಂತ ಗೊತ್ತು. ನಡೀ ಸರಕಾರ್.

ಮಾಲತಿ: ಅಮ್ಮಾ ನಿನ್ನ ಕೈ ಹಿಡಿಯಲೇನು ?

ಅಪ್ಪಾ : ಬೇಡ. ಅವಳ ಕೈ ನಾನೇ ಹಿಡೀತೇನೆ. ಎಷ್ಟಾದ್ರೂ ನನ್ನ ಕೈ ಹಿಡಿದವಳಲ್ಲವೇ. ನನ್ನ ಆಶ್ರಯವೇ ಸಾಕು. (ನಗುವರು.)

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಕ ೨

ದೃಶ್ಯ ೨

[ಸುಧಾಕರ್ ದೇಶ್‌ಪಾಂಡೆಯವರ ಬಂಗ್ಲೆಯ Drawing room. ಆಧುನಿಕ ರೀತಿಯಂತೆ ಅಚ್ಚುಕಟ್ಟಾಗಿದೆ. ವಿಠಲ ಧೂಳು ಒರಸುತ್ತಾ ನಡು ನಡುವೆ Hamlet ನಾಟಕದ ಭೂತದ ಪಾತ್ರಾಭಿನಯ ಮಾಡುತ್ತಾ ಇರುವನು. Telephone ಘಂಟೆ ಬಾರಿಸುತ್ತದೆ. ರಿಸೀವರನ್ನು ತೆಗೆದು......]

ವಿಠಲ : ಹಲೊ...ಹಾಂ ಸುಧಾಕರ್ ದೇಶ್‌ಪಾಂಡೆಯವರ ಬಂಗ್ಲೆ. ನಾನು ? ನಾನು Hamletನ ಅಪ್ಪ. ಅಂದ್ರೆ ಭೂತ ಮಾತ್ನಾಡ್ತಾ ಇರೋದು. ಹಾಂ ಕ್ಷಮಿಸಿ ನಾನು ವಿಠಲ ಮಾತ್ನಾಡೋದು.

Phone: ವಿಠಲ, ನಿನಗೆ ಭೂತ ಗೀತ ಹಿಡಿದಿಲ್ಲ ತಾನೆ !

ವಿಠಲ : ಯಾರು ಚಿಕ್ಕಮ್ಮಾವ್ರ ?

Phone: ಇಲ್ನೋಡು. ನಾನು Club ನಿಂದ ಮಾತ್ನಾಡೋದು. ಈಗ ತಾನೆ ದೊಡ್ಡ ಸಾಹೇಬ್ರ Phone ಬಂದಿತ್ತು.

ವಿಠಲ : ಇಲ್ಲ ಚಿಕ್ಕಮ್ಮಾವ್ರೇ ಯಾರದ್ದೂ Phone ಬರ್ಲಿಲ್ಲ.

Phone: ನಿನ್ನ ತಲೆ. Phone ಬಂದದ್ದು ಅಲ್ಲಿಗಲ್ಲ, ಕ್ಲಬ್ಬಿಗೆ. ಸರಿಯಾಗಿ ಕೇಳ್ಕೋ. ದೊಡ್ಡ ಸಾಹೇಬ್ರೂ ಅಂದ್ರೆ ನಮ್ಮ ಯಜಮಾನ್ರ – ಸಾಹೇಬ್ರು, ಪತ್ನೀ ಸಮೇತ ನಮ್ಮ ಮನೆಗೆ ಬರ್ತಾರೆ. ಇನ್ನೊಂದು ಕಾಲು ಘಂಟೆಯಲ್ಲಿ ಬಂದಾರು.

ವಿಠಲ : ಬರ್ಲಿ. ಸಂತೋಷವಾಗಿ ಬರ್ಲಿ. ನಾನಿಲ್ಲೇ ಇದ್ದೇನಲ್ಲಾ!

Phone: ಸುಮ್ನಿರೋ. ಅವರಿಗೆ ಅಪ್ಪಾವರನ್ನು ನೋಡ್ಬೇಕಂತೆ. ಅಪ್ಪಾ ಮನೇಲಿದ್ದಾರೇನು ?

ವಿಠಲ : ಇರ್ಬೇಕು. ಅಂದ್ರೆ ಮನೇಲಿಲ್ಲ. ಇಲ್ಲೇ ಹೊರಗೆಲ್ಲಾದ್ರೂ ಇರ್ಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

Phone: ಅವರು ಬಂದ್ರೆ ಎಲ್ಲಿಗೂ ಹೋಗ್ಬಾರ್ದೂಂತ ಹೇಳು. ಅಮ್ಮನಿಗೆ ಔಷಧಿ ಕೊಟ್ಟಿದ್ದೀಯಾ.

ವಿಠಲ : ಹೌದು ಕೊಟ್ಟಿದ್ದೇನೆ.

Phone: ಹಾಸಿಗೆಯಿಂದ ಏಳಬಾರದೂಂತ docter ಹೇಳಿದ್ದಾರೆ. ಅವರಿಗೇನು ಬೇಕಾದ್ರೂ ವಿಚಾರಿಸಿ ತಂದುಕೊಡು.

ವಿಠಲ : ಆಗಲಿ ವಿಚಾರಿಸ್ತೇನೆ.

Phone: Drawing roomನ್ನ ಕಸಗುಡಿಸಿ ಫರ್ನೀಚರ್‌ಗಳನ್ನೆಲ್ಲ ಸ್ವಚ್ಛವಾಗಿಡು.

ವಿಠಲ : ಆಗಲೇ ಗುಡಿಸಿದ್ದೀನಮ್ಮಾ.

Phone: ಕಪಾಟಿನಲ್ಲಿ ಶರ್ಬತ್ತಿನ ಬಾಟ್ಲಿ ಇದೆ. ಅವುಗಳನ್ನ fridge ನಲ್ಲಿಡು. ನಾವು ಆದಷ್ಟು ಬೇಗ ಬರ್‍ತೀವೆ.

ವಿಠಲ : ನಾನು ಹಾಗೇ ಮಾಡ್ತೇನೆ. ನೀವು ನಿಧಾನವಾಗಿ ಬನ್ನಿ. (Phone cut ಆದುದನ್ನು ಅರಿತು ರಿಸೀವರ್ ಕೆಳಗಿಡುವನು. ನಂತರ ನಾಟಕ ಪುಸ್ತಕವನ್ನು ಹಿಡಿದುಕೊಂಡು ಈ ಹಿಂದೆ ಅಭಿನಯಿಸಿದಂತೆ ಆರಂಭಿಸುವನು)

"ನಾ ನಿನ್ನ ಪಿತನ ಪ್ರೇತಾತ್ಮ. ಬೆದರದಿರು ಮಗನೇ. ಸತ್ತವರು ಕಾಣಿಸುವುದಪರೂಪವಾದರೂ ಬೆದರಿದಿರು ಮಗನೇ..."*

[ಹೊರಗಿನ ಬಾಗಿಲಿನಿಂದ ಅಪ್ಪಾ ಅವರ ಪ್ರವೇಶ.]

ಅಪ್ಪಾ : (ಕೈಯಲ್ಲಿದ್ದ ಕೋಲನ್ನು ತೋರಿಸುತ್ತಾ) ಯಾರ್‍ನಿನ್ನ ಮಗ, ಬಡ್ಡೀಮಗನೇ.

ವಿಠಲ : (ಹೆದರಿ) ಹಾಂ. ಅಪ್ಪಾಸಾಹೇಬ್ ನೀವಾ.

---

* ಕುವೆಂಪು ಅವರ ರಕ್ತಾಕ್ಷಿ ನಾಟಕದ ಸಾಲುಗಳು. ಹ್ಯಾಮ್ಲೆಟ್ ನಾಟಕದ ಬದಲು ಇವನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ರಕ್ತಾಕ್ಷಿ ಹ್ಯಾಮ್ಲೆಟ್ ನಾಟಕದ ಅನುವಾದವಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಹೌದು ನಾನೇ. ಯಾರೋ ನಿನ್ನ ಮಗ. ನೀನು ಈ ರೀತಿ ಬೊಗಳಿದ್ರೆ ಬೆನ್ನು ಮುರಿದು ಹಾಕ್ತೀನಿ, ಬದ್ಮಾಶ್.

[ಕೈ ಎತ್ತುವನು. ವಿಠಲ ಓಡಿ]

ವಿಠಲ : ತಪ್ಪಾಯ್ತು ಅಪ್ಪಾ ಸಾಹೇಬ್. ನಾಟಕದ ಪ್ರಾಕ್ಟೀಸ್ ಮಾಡ್ತಾ ಇದ್ದೆ. Hamletನ ಅಪ್ಪನ ಪಾರ್ಟು ಮಾಡ್ತಾ ಇದ್ದೆ. ಅದೇ ಆ ಭೂತದ ಪಾತ್ರ.

ಅಪ್ಪಾ : ಓಹೋ ಮರೆತೇ ಹೋಗಿತ್ತು. ಭೂತದ ಪಾರ್ಟು ಅಭಿನಯಿಸ್ತಾ ಇದ್ದೀಯಾ. ನಡೆಯಲಿ ಹಾಗಾದ್ರೆ ರಿಹರ್ಸಲ್ ನೋಡೋಣ.

ವಿಠಲ : ಅಪ್ಪಾ ಸಾಹೇಬ್ ನಿಮ್ಮ ಆಶೀರ್ವಾದ, ಉತ್ತೇಜನ ಸಹಾಯ ಇದ್ರೆ ಪಾರ್ಟು ಬರೇ ಭೂತದ್ದಾದ್ರೂ ಅದ್ಭುತಾಂತ ಅನ್ನಿಸಿಬಿಡ್ತೀನಿ. ನೋಡೀ, ಈ ವಾಕ್ಯಗಳಿಗೆ ಯಾವರೀತಿ ಸ್ವರಭಾರ ಏರಿಳಿತ ಕೊಡ್ಬೇಕೂಂತ ಸ್ವಲ್ಪ ಹೇಳ್ತೀರಾ. ಭೂತ ಹೇಳುತ್ತೆ.

ಅಪ್ಪಾ : ಭೂತ ಏನು ಹೇಳುತ್ತೆ.

ವಿಠಲ : (ಬರೆದ ಪುಸ್ತಕದಿಂದ) ನಾ ನಿನ್ನ ಪಿತನ ಪ್ರೇತಾತ್ಮ. ಇದ್ರಲ್ಲಿ ಯಾವ ಶಬ್ದಗಳು ಮುಖ್ಯ ? ಯಾವುದಕ್ಕೆ ಹೆಚ್ಚು ಭಾರ ಹಾಕ್ಬೇಕು. ದಯವಿಟ್ಟು ತಿಳಿಸುವಿರಾ ನಟ ಸಂಮ್ರಾಟರೇ. "ನಾನಿನ್ನ"ಕ್ಕೋ "ಪಿತನ"ಕ್ಕೋ "ಪ್ರೇತಾತ್ಮ"ಕ್ಕೋ.

ಅಪ್ಪಾ : ಪ್ರತಿಯೊಂದಕ್ಕೂ, ಹಾಕಿ ನೀನೇ ನೋಡು. ಮೊದಲಾಗಿ ಸಂಭಾಷಣೆಯ ಅರ್ಥ, ಸನ್ನಿವೇಶ ತಿಳ್ಕೋಬೇಕು. ಆಮೇಲೆ ಬಾಯಿಪಾಠ ಚೆನ್ನಾಗಿ ಮಾಡ್ಕೋಬೇಕು. ಆ ನಂತರ ಸ್ವರಭಾರ ಏರಿಳಿತಕ್ಕೆ ಸರಿಯಾಗಿ ಗಮನ ಕೊಡ್ಬೇಕು.

ವಿಠಲ : ತಲೆಗೆ ಹೊಗಲಿಲ್ಲ ಅಪ್ಪಾಸಾಹೇಬ್. ದಯವಿಟ್ಟು ನೀವೇ ಒಂದು ಸಲ ತೋರಿಸಿದ್ರೆ ದೊಡ್ಡ ಉಪಕಾರ.

ಅಪ್ಪಾ : ನೋಡು. ಸಂಭಾಷಣೆಯ ಸನ್ನಿವೇಶವನ್ನ ನೀನೇ ತಿಳ್ಕೊಂಡು ಸ್ವತಃ ಅನುಭವಿಸ್ತಾ ಅಭಿನಯಿಸಬೇಕು. ಅಂದ್ರೆ, ವಿಷಕುಡಿಸಿ ಸತ್ತ ರಾಜ,

Sri Vidyabharathi Book Centre, Sringeri

CC-O. In Public Domain. Digitized by eGangotri

ನೀನೇ ಆಗಿದ್ರೆ, ನಿನ್ನ ಭೂತಕ್ಕೆ, ಮಗನ ಎದುರಿಗೆ ನಿಂತಾಗ, ಏನು ಅನ್ನಿಸ್ತಾ ಇತ್ತು ?

ವಿಠಲ : ನಾನೇ ರಾಜನಾಗಿದ್ರೆ, ವಿಷಕುಡಿದು ಸತ್ತಿದ್ರೆ, ಸತ್ತು ಆಮೇಲೆ ಭೂತವಾಗಿದ್ರೆ, ನನ್ನ ಮಗ ಎದುರಿಗೆ ನಿಂತಿದ್ರೆ; ಅಪ್ಪಾ ಸಾಹೇಬ್ ಮಗನ ಹತ್ತಿರ ಮಾತಾಡಿ ಹೆಚ್ಚು ಸಮಯ ಹಾಳು ಮಾಡದೆ ಆ ನನ್ನ ವಿಷಕೊಟ್ಟ ಹೆಂಡತಿಯ ಕುತ್ತಿಗೆಯನ್ನು ಹಿಡ್ದು, ಹಿಚುಕಿ, ಹಿಂಡಿ, ಕೊಂದ್ಹಾಕಿಬಿಡ್ತಿದ್ದೆ.

ಅಪ್ಪಾ : ಶಾಭಾಸ್. ಆದ್ರೆ, ಹಾಗೆ ಮಾಡಿದ್ರೆ, ಮಗನೇ ನಾಟಕ ಅಲ್ಲಿಗೇ ಮುಗೀತ್ತಿತ್ತು. Hamlet ಮುಂದೆ ಬರುವ ಅವಶ್ಯಕತೇನೇ ಇರಲಿಲ್ಲ. ಹಹಹ......

ವಿಠಲ : (ಉದ್ದಂಡ ನಮಸ್ಕಾರ ಮಾಡಿ) ಹೌದು ಅಪ್ಪಾ ಸಾಹೇಬ್. ನೀವು ನಟ ಸಂಮ್ರಾಟರೇ ಹೌದು. ನನಗೆ ನಿಜವಾಗ್ಲೂ ಅಭಿನಯ ಹೇಳಿ ಕೊಡ್ತೀರಾ ?

ಅಪ್ಪಾ : ಅಗತ್ಯವಾಗಿ. ಆದ್ರೆ, ನನ್ನ ಭಜಿ ತಿಂದು ಮುಗಿದಮೇಲೆ. ಈಗ ತಾನೇ ಹೋಟೇಲಿನಿಂದ ತಂದ ಬಿಸಿ ಬಿಸಿ ಭಜಿ ಆರಿಹೋಗುತ್ತೆ.

ವಿಠಲ : ಸಾಹೇಬ್ರೇ ನಾನು ಒಂದು ಮಾತು ಹೇಳ್ಲಾ. ದಯಮಾಡಿ ಕೋಪಿಸ್ಕೋಬೇಡಿ. ಈ ರೀತಿ ನೀವು ಹೋಟ್ಲಿನ ತಿಂಡಿ ತಿನ್ನೋದು ಚಿಕ್ಕಮ್ಮಾವ್ರಿಗೆ ಏನೂ ಹಿಡಿಸೋದಿಲ್ಲ.

ಅಪ್ಪಾ : ಅದೇ ನೀನಿನ್ನೂ ಚೆನ್ನಾಗಿ ಅರ್ಥಮಾಡಿಕೊಂಡಿಲ್ಲ. ನಾಟಕದಲ್ಲೂ ನೀನು ಇದೇ ರೀತಿ ಅರ್ಥಮಾಡಿಕೊಂಡಿಲ್ಲ. ಈಗ ನಾನ್ಯಾಕೆ ಭಜಿ ತಿನ್ತಾ ಇದ್ದೀನಿ. ನನ್ನನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದೀಯಾ —ಇಲ್ಲ. ತಗೋ ನೀನೂ ಒಂದಿಷ್ಟು ರುಚಿ ನೋಡು. ಆಗ ಅರ್ಥವಾಗುತ್ತೆ.

ವಿಠಲ : ಬೇಡ. ನನಗೆ ನಿಜವಾಗ್ಲೂ ಬೇಡ.

ಅಪ್ಪಾ : ಸ್ವಲ್ಪ ತಿಂದು ನೋಡ್ಕೋ...ಮತ್ತೆ ಬೇಡ ಅನ್ನು. ಆಮೇಲೆ ಬೇಕು ಅಂದ್ರೂ ಸಿಗೋಹಾಗಿಲ್ಲ. ನನ್ನ ಸರಕಾರ್ ಕೂಡ ಕಾದಿರುತ್ತಾಳೆ ಅದಕ್ಕೆ. ತಗೋ ನೋಡು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಠಲ : ಬೇಡ ಸ್ವಾಮಿಾ...ನನಗಿವತ್ತು ಗುರುವಾರ.

ಅಪ್ಪಾ : ಮತ್ತೆ ನನಗಿವತ್ತು ಶುಕ್ರವಾರವೇ.

ವಿಠಲ : ಹಾಗಲ್ಲ ಸಾರ್ ನನಗಿವತ್ತು ಉಪವಾಸ (ಏರಿದ ಸ್ವರದಲ್ಲಿ)

ಅಪ್ಪಾ : ಹಾಂ ಹಾಂ ಸರಿ. ಹೊಟ್ಟೆ ಹಸಿದಾಗಲೇ ಸ್ವರ ಏರೋದು ಕಲಾವಿದರಿಗೆ. ಹಾಗಾದ್ರೆ ಮುಂದುವರಿಯಲಿ ನಿನ್ನ ರಿಹರ್ಸಲ್.

ವಿಠಲ : (ತಕ್ಷಣ ನೆನಪಾದಂತೆ) ಹಾಂ ಮರೆತೇಹೋಗಿತ್ತು ಅಪ್ಪಾಸಾಹೇಬ್. ನಮ್ಮ ಸಾಹೇಬರ ಸಾಹೇಬ್ರೀಗ ಬರೋರಿದ್ದಾರಂತೆ, ರಂಗಭೂಮಿ ವಿಚಾರವಾಗಿ ನಿಮ್ಮ ಅಭಿಪ್ರಾಯ ತಿಳ್ಕೊಳ್ಳೋದಿಕ್ಕೆ.

ಅಪ್ಪಾ : ಯಾರು ಬೇಕಾದ್ರೂ ಬರಲಿ, ಆದ್ರೆ ಈ ಭಜಿ ತಿಂದಾದ ಮೇಲೆ ಬಂದ್ರೆ ಸರಿ. ಇಲ್ಲವಾದ್ರೆ ಅವರಿಗೂ ಕೊಡಬೇಕಾಗುತ್ತೆ ನೋಡು ಈ ರಾಂ ಭರೋಸೆ ಹೋಟ್ಲಿನ ಭಜಿ. ಅಲ್ಲಾ ಆ ತ್ರೇತಾಯುಗದ ರಾಮಚಂದ್ರ ಈ ಹೋಟೇಲನ್ನು ಉದ್ಧಾರ ಮಾಡ್ತೀನೀಂತ ಭರವಸೆ ಕೊಟ್ಟಿದ್ದಿರಬೇಕು. ಇಲ್ಲವಾದ್ರೆ ಜನಗಳಿಗೆ ಈ ಈರುಳ್ಳಿ ಭಜಿ ರುಚಿಹಿಡಿಸಿ ಮೂರು ಮಹಡಿ ಮನೆ ಕಟ್ಟಿಸಿದ ಈ ಹೋಟೆಲ್ Proprietor. ತಾಳು...ಕಾವೇರಿಗೂ ಸ್ವಲ್ಪ ಕೊಟ್ಟು ಬರ್ತೀನಿ... ಸರಕಾರ್. (ಒಳಗೆ ಹೋಗುವನು)

ವಿಠಲ : (ಪುನಃ ಪ್ರಾಕ್ಟೀಸ್ ಮಾಡುವನು) ನಾ ನಿನ್ನ ಪಿತನ ಪ್ರೇತಾತ್ಮ. (Telephone ರಿಸೀವರ್ ಹಿಡಿದುಕೊಂಡೇ) ಬೆದರದಿರು ಮಗನೇ. ಸತ್ತವರು ಕಾಣಿಸುವುದಪರೂಪವಾದರೂ ಬೆದರದಿರು ಮಗನೇ... ಛೆ...

Phone: ಏನೋ ಸತ್ತು ಪಿತ್ತ ನೆತ್ತಿಗೇರಿದೆಯೇನೋ ?

ವಿಠಲ : ಅಲ್ಲಮ್ಮ ನಾನು ಭೂತ (ನಾಲಿಗೆ ಕಚ್ಚಿ) ಅಲ್ಲಾ ಹೇಂಲೆಟ್‌ನ ಅಪ್ಪ –ನಾಟಕ ಪ್ರಾಕ್ಟೀಸ್ ಮಾಡ್ತಾ ಇದ್ದೆ.

Phone: ಸಾಹೇಬ್ರು ಬಂದಿಲ್ಲ ತಾನೆ !

ವಿಠಲ : ಇಲ್ಲಮ್ಮಾ ಇನ್ನೂ ಬಂದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

Phone: ಅಪ್ಪಾ ಬಂದ್ರೇನು ?

ವಿಠಲ : ಮನೇಲೇ ಇದ್ದಾರೆ.

Phone: ನಾವು ಮೀಟಿಂಗ್ ಮುಗಿದ ತಕ್ಷಣ ಬರ್ತೀವಿ.

ವಿಠಲ : ನಿಧಾನವಾಗಿ ಬನ್ನಿ.

Phone: ಶರ್ಬತ್ತಿನ ಬಾಟ್ಲಿಗಳನ್ನ fridgeನಲ್ಲಿಟ್ಟಿದ್ದೀಯಾ.

ವಿಠಲ : (ಗಾಬರಿಯಿಂದ) ಶರಬತ್ತೇ......ಹಾಂ...ಹಾಂ...ಗೊತ್ತಾಯ್ತು. ಇಡ್ತೇನೆ...ಇಟ್ಟಿದ್ದೇನೆ.

Phone: ನಾನಾದಷ್ಟು ಬೇಗ ಬರ್ತೀನಿ.

ವಿಠಲ : ಅವಸರ ಇಲ್ಲಮ್ಮಾ. ನಿಧಾನವಾಗಿ ಬನ್ನಿ. ನಿಮ್ಮ ಎಲ್ಲಾ ಕೆಲ್ಸ ಮುಗಿಸಿ ಬನ್ನಿ. ನಾನಿದ್ದೇನಲ್ಲಾ ಇಲ್ಲಿ. (Phone cut ಆಗುವುದು) ಶರಬತ್ತಿನ ಬಾಟ್ಲಿಯಲ್ಲಿ fridge...ಅಲ್ಲಲ್ಲ fridgeನಲ್ಲಿ ಶರಬತ್ತಿನ ಬಾಟ್ಲಿ (ಪುನಃ ಅಭಿನಯಿಸಲು ಪ್ರಾರಂಭಿಸುವನು)
ನಾ ನಿನ್ನ ಪಿತನ ಪ್ರೇತಾತ್ಮ.

[Bell]

(ಒಳಗಿನಿಂದ ಬರುತ್ತಾ) ಛೆ...ಬಂದೆ...ಬಂದೆ...

[ಬಾಗಿಲು ತೆಗೆಯುವನು]

[Mr. ಕಂಬದ್ಕೋಣೆ ಮತ್ತು Mrs. ಸರಸ್ವತೀ ಬಾಯಿಯವರು ಬರುವರು. ಅವರಿಬ್ಬರೂ ಆಧುನಿಕ ಉಡುಪಿನಲ್ಲಿರುವರು.]

ಕಂಬದ್ಕೋಣೆ: ನಮಸ್ಕಾರ. ಸುಧಾಕರ್ ದೇಶ್‌ಪಾಂಡೆಯವರು ಬರಲಿಲ್ಲವೇ ಇನ್ನೂ.

ಅಪ್ಪಾ : ಇನ್ನೂ ಬಂದಿಲ್ಲ, ಈಗ ತಾನೆ ಬರಬಹುದು.

ಕಂಬದ್ಕೋಣೆ: ಮೊದಲೇ ಗೊತ್ತಿತ್ತು. ಕ್ಲಬ್ಬಿನಲ್ಲಿ ಮೀಟಿಂಗ್ ಮುಗಿಯುವಾಗ ತಡವಾಗ್ಬಹುದೂಂತ. ಆದ್ರೆ ನಿಜವಾಗಿ ನಿಮ್ಮನ್ನೇ ಕಾಣ್ಬೇಕಿತ್ತು. ಅದೇ ಮುಖ್ಯವಾದ ವಿಷಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಬನ್ನಿ ಕೂತ್ಕೊಳ್ಳಿ. ಏನ್ ಸಮಾಚಾರ.

ಕ.ಕೋ : ಇವಳು ನನ್ನ ಪತ್ನಿ ಸರಸ್ವತೀ ಬಾಯಿ. Hamletನಲ್ಲಿ ಒಲಿಂಪಿಯಾ ಮಾಡಿದ್ದಾಳೆ. ನಾನು ಕಂಬದ್ಕೋಣೆ. Prof. Batliwalla ರವರ ನಾಟಕದಲ್ಲಿ Hamlet ಮಾಡಿದ್ದೇನೆ. ಅಲ್ಲದೆ ದಿಗ್ದರ್ಶನದ ಭಾರ ವನ್ನೂ ಹೊತ್ತಿದ್ದೇನೆ.

ಅಪ್ಪಾ : ಗೊತ್ತು ಗೊತ್ತು. ಮೊನ್ನೆ ರಿಹರ್ಸಲ್ ನೋಡಿದೆನಲ್ಲಾ. [ವಿಠಲ ನನ್ನು ಕರೆದು] ವಿಠಲಾ ನೋಡೋ ನಿನ್ನ ಸಾಹೇಬರ ಸಾಹೇಬರು ಬಂದಿದ್ದಾರೆ. ಅಲ್ಲದೆ ನಿನ್ನ ನಾಟಕದ ದಿಗ್ದರ್ಶಕರು. ಚಾ, ಕಾಫಿ ಏನಾದ್ರೂ...

ಕ.ಕೋ: ಅವಸರ ಇಲ್ಲ. ಅವರೂ ಬರ್ಲಿ. (ವಿಠಲನಿಗೆ) ಹೋಗೋ ನಿನ್ನ ಕೆಲ್ಸ ನೀನು ನೋಡು.

ವಿಠಲ : ಆಗಲಿ ಸಾಹೇಬ್.

[ಹೋಗುವನು]

ಕ.ಕೋ: ಅಪ್ಪಾ ಸಾಹೇಬ್. ಮೊನ್ನೆ ನಮ್ಮ ರಿಹರ್ಸಲ್ ನೋಡಿದ್ರುಲ್ಲಾ. ನಿಮಗೆ ಹ್ಯಾಗೆ ಅನ್ನಿಸಿತು. ನೋಡಿ ನನ್ನ Profession Engineering ಆದ್ರೂ ಹವ್ಯಾಸ ನಾಟಕದ್ದು. ನಾವಿಬ್ರೂ ಮುಂಬಯಿ ಯಲ್ಲಿದ್ದಾಗ ಕನ್ನಡ ಕಲೋದ್ಧಾರಕ ಕೇಂದ್ರದ ಪರವಾಗಿ "ಬ್ರಾಹ್ಮಣರ ಬೊಜ್ಜ" ಎಂಬ ನಾಟಕದ ಆಧುನಿಕ ಪ್ರಯೋಗ ನಡೆಸಿದ್ದೆವು. ಕಳೆದ ವರ್ಷದಲ್ಲಿ ಆ ನಾಟಕಕ್ಕೆ ಸರಕಾರದಿಂದ ತಾಮ್ರ ಕಮಲ award ಕೂಡ ಕೊಟ್ಟಿದ್ದಾರೆ. ಇವಳಿಗೆ special prize ಅಭಿನಯ ಕ್ಕಾಗಿ, ನನಗೆ ದಿಗ್ದರ್ಶನಕ್ಕಾಗಿ.

ಅಪ್ಪಾ : ವಾರೆವ್ವಾ. ಹಾಗಾದ್ರೆ ನಿಮ್ಮ ಜೊತೆ ಚೆನ್ನಾಗಿದೆ.

ಕ.ಕೋ: ಹೌದು ನಾವು ಯಾವಾಗ್ಲೂ ಜತೆ ಜತೆನೇ ಪಾರ್ಟು ಮಾಡೋದು. ಇದೀಗ ಈ ಊರಿಗೆ ಬಂದ್ಮೇಲೆ Hamlet ನಾಟಕದ ಜವಾಬ್ದಾರಿ ಯನ್ನ ನನ್ನ ಮೇಲೇ ಹಾಕಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಸಹಜವೇ. ನಿಜ ಜೀವನದ ನಿಮ್ಮ ಜತೆ ನಾಟಕಕ್ಕೂ ಅಳವಡಿಸಿ ಕೊಂಡ್ರೆ ಇನ್ನೂ ಅನುಕೂಲ ತಾನೆ !

ಸರಸು : ಛೆ...ಛೆ...ಆ ಕಾರಣದಿಂದಲ್ಲ. College ನಲ್ಲಿದ್ದಾಗ Hamletನ part ಇವ್ರೇ ಹಾಕಿದ್ರು, ಆದ್ರಿಂದ.

ಕ.ಕೋ: ಆದ್ರೆ ಆಗ ನಾನು ಇಂಗ್ಲೀಷ್‌ನಲ್ಲಿ ಮಾಡಿದ್ದು. ನನ್ದು English Medium ಉ.

ಅಪ್ಪಾ : ಪರವಾಗಿಲ್ಲ. ಅದ್ರಲ್ಲೇನು ? ನಿಮಗೆ ಕನ್ನಡಾನೂ ಮಾತಾಡೋಕೆ ಬರುತ್ತಲ್ಲಾ. ಭಾಷೆ ಹೇಗಿದ್ರೇನು. ಪಾತ್ರದ ಅಭಿನಯ ಮುಖ್ಯ ಅಷ್ಟೆ. ಅಭಿನಯಕ್ಕೆ ಅವಕಾಶ ಇದ್ದ ಪಾತ್ರವೇ Hamlet.

ಕ.ಕೋ: ಆದ್ರೆ ಅಪ್ಪಾ ಸಾಹೇಬ್, ನಾನು ಒಂದು ತೀರ ಹೊಸ ಪ್ರಯೋಗ ಮಾಡಬೇಕೂಂತಿದ್ದೇನೆ. ಈ ಮೊದಲು ಯಾರೂ ಪ್ರಯತ್ನಿಸದಂಥಾ ನಾವೀನ್ಯತೆ ಅಂದ್ರೆ – ಈ ನಮ್ಮ ನಾಟಕದ ಮೂಲಕ ಪ್ರೇಕ್ಷಕರಿಗೆ ಶೇಕ್ಸ್‌ಪಿಯರ‍ನ Philosophy ಹಿಂದೂಸ್ಥಾನಕ್ಕೇನೂ ಹೊಸ ತಲ್ಲಾ. ನಮ್ಮ ಭಗವದ್ಗೀತೆಯಲ್ಲಿ ಪುರಂದರದಾಸರ ಕೃತಿಗಳಲ್ಲಿ ಅವು ಗಳ ತತ್ವ ಬೇಕಾದಷ್ಟಿದೆ ಎಂದು ಎತ್ತಿ ತೋರಿಸಿಕೊಡೋದು.

ಸರಸು : ಮಧ್ಯ ಮಧ್ಯದಲ್ಲಿ ಸೂತ್ರಧಾರನ ಮೂಲಕ ಪುರಂದರದಾಸರ ಕೀರ್ತನೆಗಳನ್ನು ಹಾಕೋದು.

ಕ.ಕೋ: ಶೇಕ್ಸ್‌ಪಿಯರ‍ನ ನಾಟಕಗಳನ್ನು ಎಷ್ಟೋ ಜನ ಆಡಿರಬಹುದು. ಆದ್ರೆ ನಿಜವಾಗಿ ಶೇಕ್ಸ್‌ಪಿಯರ್‌ನನ್ನು ಸರಿಯಾಗಿ ಅರ್ಥಮಾಡಿ ಕೊಂಡವರು ಎಷ್ಟಿದ್ದಾರೆ, ಹೇಳಿ.

ಅಪ್ಪಾ : ನಿಜ. ಅರ್ಥಮಾಡಿಕೊಂಡವರಿಗಿಂತ ಅನರ್ಥಮಾಡಿಕೊಂಡವರೇ ಜಾಸ್ತೀಂತನ್ನಬೇಕು.

ಕ.ಕೋ: ಅಲ್ಲಾ. ಮೊನ್ನೆ ನೀವು ನಮ್ಮ ರಿಹರ್ಸಲ್ ಚೆನ್ನಾಗಿ ಗಮನಿಸಿಲ್ಲ. ಬಂದವರೇ ಗಡಿಬಿಡಿಯಲ್ಲಿ ಹೋದಿರಿ. ನಿಮ್ಮ ಅಭಿಪ್ರಾಯ ಏನೂಂತ ತಿಳಿಸಲೇ ಇಲ್ಲವಲ್ಲಾ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ನನ್ನ ಅಭಿಪ್ರಾಯ ಏನಾದ್ರೇನು. ರಿಹರ್ಸಲ್‌ನಲ್ಲಿ ಶಿಸ್ತು ಬಹಳ ಚೆನ್ನಾಗಿತ್ತು.

ಕ.ಕೋ: ನೀವೂ Hamletನ ಪಾತ್ರ ಮಾಡಿ ಹೆಸರುವಾಸಿಯಾಗಿದ್ದೀರಂತೆ !

ಅಪ್ಪಾ : ಅದು ಒಂದಾನೊಂದು ಕಾಲದಲ್ಲಿ.

ಕ.ಕೋ: ಆದ್ರಿಂದ್ಲೇ ನಿಮ್ಮ ಸೂಚನೆ ಏನೂಂತ ಕೇಳೋ ಕುತೂಹಲ.

ಅಪ್ಪಾ : ತಪ್ಪು ತಿಳ್ಕೋಬೇಡಿ. ನಮ್ಮ ಸೂಚನೆ ನಿಮಗೆ ಹಿಡಿಸ್ಲಿಕ್ಕಿಲ್ಲ, ಸಾಹೇಬ್ರೆ. ಕಾರಣ ಹಿಮಾಚಲ ಒಂದರಿಂದಲೇ ಉದ್ಭವಿಸಿದ ಗಂಗೆ, ಬ್ರಹ್ಮಪುತ್ರಗಳೆರಡೂ ಮಹಾಸಾಗರ ಒಂದಕ್ಕೇ ಸೇರೋದಾದ್ರೂ ಪ್ರವಾಹದ ರೀತಿ, ವೇಗ ಹರಿಯುವ ದಾರಿ ಎಲ್ಲಾ ಬೇರೆ ಬೇರೆ ತಾನೆ !

ಕ.ಕೋ: ಆದ್ರೂ ನಿಮ್ಮ ಅಭಿಪ್ರಾಯ ಕೇಳೋದ್ರಲ್ಲೇನಡ್ಡಿ. ಅಲ್ಲದೆ ನೋಡಿ, ಈ ನಾಟಕವನ್ನ ನಾವು ಅಂತರ್ ಪ್ರಾಂತ್ಯ ನಾಟಕಸ್ಪರ್ಧೆಯಲ್ಲಿ ಪ್ರದರ್ಶಿಸಬೇಕೂಂತ ನಿಶ್ಚಯಿಸಿದ್ದೇವೆ. ಒಳ್ಳೇ Top-class ಆಗ್ಬೇಕೂಂತ ನಮ್ಮೆಲ್ರ ಇಚ್ಛೆ.

ಅಪ್ಪಾ : ಆದೀತು. ಖಂಡಿತ ಆದೀತು. (ಭಜೆಯ ಪೊಟ್ಟಣ ಬಿಚ್ಚಿ) ಸ್ವಲ್ಪ ಭಜೆ ತೆಗೆದುಕೊಳ್ಳಿತೀರಾ.

ಕ.ಕೋ: (ತಾತ್ಸಾರದಿಂದ) ಭಜೆ.

ಅಪ್ಪಾ : ಹೌದು. ನಮ್ಮ ರಾಂಭರೋಸೆ ಹೋಟ್ಲಿದ್ದು.

ಸರಸು : ರಾಂಭರೋಸೆ ಹೋಟ್ಲು ? ಶೀ ಅದೆಂಥ ಹೋಟ್ಲು. ಆ ರಸ್ತೆಯೇ ಹೊಲಸು. ಇನ್ನು ಆ ಹೋಟ್ಲೋ...

ಅಪ್ಪಾ : ಅದೂ ಹೊಲಸೇ. ಆದ್ರೆ ಭಜೆ ಮಾತ್ರ Ist class. ತಿಂದುನೋಡಿ. ಒಮ್ಮೆ ತಿಂದ್ರೆ ಬಿಡೋಹಾಗಿಲ್ಲ, ಸ್ವಲ್ಪ ರುಚಿನೋಡಿ.

ಕ.ಕೋ: ಬೇಡ...Thanks. ಅಂದಹಾಗೆ ಅಪ್ಪಾ ಸಾಹೇಬ್ ನಮ್ಮ ರಿಹರ್ಸಲ್ ನಿಮಗೆ ಹಿಡಿಸಿಲ್ಲಾಂತ ಅನ್ನಿಸುತ್ತೆ.

ಅಪ್ಪಾ : ಛೆ...ಛೆ. ಹಾಗೇನಿಲ್ಲ. ಆದ್ರೆ ನಿಮ್ಮ ಆ ರೀತಿ...ಆ...

Sri Vidyabharathi Book Centre, Sringeri

CC-O. In Public Domain. Digitized by eGangotri

ಕ.ಕೋ: (ಅವರು ಹೇಳುವಷ್ಟರಲ್ಲಿ) ನವೀನ ತಂತ್ರ, Stage-craft ನಿಮಗಷ್ಟು ಹಿಡಿಸಲಿಲ್ಲಾಂತ ಕಾಣಿಸುತ್ತೆ.

ಅಪ್ಪಾ : Stage-craft ಬಗ್ಗೆ ಅಲ್ಲ ನಾನು ಹೇಳ್ತಿರೋದು. (ತಡೆದು ನಿಂತು) ಖಾರಾ, ಭಜಿಗೆ ಹಾಕಿದ ಮೆಣಸೆಲ್ಲಾ ಒಂದ್ರುಲ್ಲೇ ಬಂತೂಂತ ಕಾಣುತ್ತೆ. ನೀವು ಹೇಳಿದ್ದೇನು ? Stage-craft ಏನೋ ಪರವಾಗಿಲ್ಲ. ಆದ್ರೆ ನನಗೆ ಮಾತುಗಳೇ ಕೇಳಿಸ್ತಾ ಇರಲಿಲ್ಲ. ಕೆಲವರ ಮಾತುಗಳು ಅವರವರಿಗೇ ಕೇಳಿಸ್ತಾ ಇತ್ತೋ ಇಲ್ವೋಂತ ಅನುಮಾನ. ಕೆಲವೊಮ್ಮೆ ಬರೇ ಮುಖ, ಮುಖ ನೋಡಿಕೊಂಡಂತಿತ್ತು. 900–1000 ಜನ ಇರೋ ಸಭೆಯಲ್ಲಿ ಸ್ವರ-ಭಾರ ಏರಿಳಿತ ಹೇಗಿರಬೇಕೂಂತೀರಾ.

ಕ.ಕೋ: ಹಾಂ. ಅಲ್ಲೇ ಇರೋದು ನಮ್ಮ ಹೊಸ ಪ್ರಯೋಗದ ಗುಟ್ಟು. ಹಳೇ ಸಾಂಪ್ರದಾಯಿಕ ನಾಟಕಕ್ಕೂ ಹೊಸ ಸಾಂಕೇತಿಕ ನಾಟಕಕ್ಕೂ ಇರೋ ವ್ಯತ್ಯಾಸ, ಅಜ ಗಜಾಂತರ. ಸುಮ್ಮನೆ ಕಂಠಪಾಠ ಮಾಡಿ ಗಟ್ಟಿಯಾಗಿ ಒದರಿದರೆ ಜನರಿಗೆ ಸಂಭಾಷಣೆ ಕೇಳ್ತಿರಬಹುದು. ಆದ್ರೆ ಭಾವನೆ ಮೂಡೋದಿಲ್ಲ. ನಾನು Subdued tone ನಲ್ಲಿ ಪಾತ್ರಗಳನ್ನ ತಯಾರಿಸಿದ್ದೇನೆ. I don't believe in shouting. ಬೊಬ್ಬೆ ಹೊಡೆದು ಮಾತ್ನಾಡೋದು ಹಳೇ Melo-dramatic ಪದ್ಧತಿ.

ಅಪ್ಪಾ : ಪರವಾಗಿಲ್ಲ ಆ ವಿಚಾರ ಬಿಡಿ. ನೀವು ಸ್ವಲ್ಪ ಭಜೆಯ ರುಚಿ ನೋಡಿ.

ಸರಸು : (ಸ್ವಲ್ಪ ತಾತ್ಸಾರದಿಂದ) ಶೀ...ಬೇಡ ಬೇಡ.

ಅಪ್ಪಾ : ಕಲಾಕಾರರು ಭಜೆ ಬೇಡಾಂತ ಹೇಳಲೇಬಾರದು. ಏನು ಸ್ಫೂರ್ತಿ ಕೊಡುತ್ತೇಂತೀರಾ.

ಕ.ಕೋ: (ನಿರ್ಲಕ್ಷಿಸಿ ಮಾತುಗಳಿಗೆ ಲಕ್ಷಕೊಡದೆ) ನಮ್ಮ ಪ್ರಯೋಗಾಂದ್ರೆ ಸಾಂಕೇತಿಕ ರಂಗಸಜ್ಜಿಕೆ. ಅಭಿನಯಕ್ಕೆ ಪ್ರಾಧಾನ್ಯ...ಅಂದ್ರೆ ನಿಮಗೆ ಅರ್ಥವಾಗಲಿಕ್ಕೆ ಸ್ವಲ್ಪ ಕಷ್ಟ. ಉದಾಹರಣೆಗೆ ಒಂದು ಕಾಡಿನ ದೃಶ್ಯಾಂತ ತಿಳ್ಕೊಳ್ಳಿ. ಮೊದಲಿನ ಹಾಗೆ ಪರದೆ ಇಳೀಬಿಟ್ಟು ಅದ

Sri Vidyabharathi Book Centre, Sringeri

CC-O. In Public Domain. Digitized by eGangotri

ರಲ್ಲಿ ತುಂಬಾ ಮರಗಳ ಚಿತ್ರ ತೋರಿಸ್ಲಿಕ್ಕಿಲ್ಲ. ಬರೇ ಮರದ ಒಂದು cutting. ಅದರಿಂದ಼್ಲೇ ಕಲ್ಪನೆಯಾಗ್ಬೇಕು ಇದು ಕಾಡೂಂತ.

ಸರಸು : ರೋಡ್ ಸೀನೂಂದ್ರೆ ಹಿಂದಿನವರಂತೆ ಪರದೆ ಇಳಿ ಬಿಡಲಿಕ್ಕಿಲ್ಲವೇ. ಇಲ್ಲ.ಬರೆ ಒಂದು lamp-post or Post box dabba ಅಥವಾ ಕಚರಾ ಡಬ್ಬಾ.

ಕ.ಕೋ: ಅಲ್ಲದೆ ಹಗಲು ರಾತ್ರಿ ಅಥವಾ ಇನ್ನಿತರ ಸಮಯ ಸೂಚಿಸಲು lighting effect, dim ಅಥವಾ Bright Light. ಬರೇ spot light effects through dimmers.

ಸರಸು : ದೃಶ್ಯಕ್ಕೊಂದು ತೆರೆ ಇಲ್ಲ. ಬರೇ blue curtain. ದೃಶ್ಯ ಮುಗಿಯಿತೆನ್ನುವಾಗ light off. ಪುನಃ light ಹಾಕಿದಾಗ ದೃಶ್ಯ ಬೇರೇಂತ ಜನ ತಿಳ್ಕೋಬೇಕು. ಆದ್ರೆ Stageನಲ್ಲಿ ಮಾತ್ರ ಬೇರೆ ಬೇರೆ levels ಇರ್ಬೇಕು. ಅಂದ್ರೆ I mean plat-forms ಅಂತಾರಲ್ಲ ಅದು.

ಕ.ಕೋ: ಒಂದೊಂದು ಅಡಿ ಎತ್ತರದಲ್ಲಿ ಒಂದೊಂದು plat-form. ಬೇರೆ ಬೇರೆ ಏರು ತಗ್ಗುಗಳಿರುವ ರಂಗಸಜ್ಜಿಕೆ. ಎತ್ತರದ ರಂಗದ ಮೇಲೆ ಅರಮನೆಯಾದರೆ, ಕೆಳಗಿನ level ನಲ್ಲಿ ರಸ್ತೆ. ಹಾಗೇ ಪ್ರತಿಯೊಂದು ದೃಶ್ಯಕ್ಕೂ (ಅಪ್ಪಾ ಎಲ್ಲೋ ನೋಡುವುದನ್ನು ಗಮನಿಸಿ) ನಾವು ಹೇಳಿದ್ದು ನಿಮಗೆ ಅರ್ಥವಾಯ್ತಲ್ಲಾ.

ಅಪ್ಪಾ : ಹೌದು...ಹೌದು. ಏ ವಿಠಲಾ ಸಾಹೇಬ್ರಿಗೆ ಕುಡೀಲಿಕ್ಕೆ ಏನಾದ್ರೂ ತರಬಾರದೇನೋ. ಮಾತಾಡಿ ಮಾತಾಡಿ ಪಾಪ ಗಂಟಲು ಆರಿ ಹೋಗಿರ್ಬೇಕು.

ವಿಠಲ : ತರ್ತೀನಿ...ಈಗ್ಲೇ ತಂದುಬಿಟ್ಟೆ......

ಕ.ಕೋ: ನೋಡೀ ಈ ಹೊಸ ರೀತಿಯ ಪ್ರಯೋಗ ಜನಗಳಿಗೆ ಹಿಡಿಸಲಿಕ್ಕಿಲ್ಲ. ಅರ್ಥವಾಗ್ಲಿಕ್ಕೂ ಕಷ್ಟವೇ. ಆದ್ರೆ ನಾವು ಹಟಹಿಡಿದು ಮಾಡ್ತಾ ಇದ್ರೆ ಅವರಿಗೆ ಒಪ್ಪಿಗೆ ಆಗಿಯೇ ಆಗುತ್ತೆ. ಒಂದುವೇಳೆ ಅವರಿಗೆಲ್ಲಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಪ್ಪಿಗೆಯಾಗದೆ ಇದ್ರೂ ನಾವು ಮಾತ್ರ ಮಾಡೋದನ್ನ ಬಿಡ್ಬಾರ್ದು. ಹಿಂದಿನ ಸಾಂಪ್ರದಾಯಿಕ ನಾಟಕ ನೋಡಿ ನೋಡಿ ಭೂತಕಾಲದ ಪ್ರಭಾವ ಜನರ ಮೇಲೆ ಬೇರೂರಿ ನಿಂತಿರುತ್ತೆ.

ಅಪ್ಪಾ : ನಿಜ...ನಿಜ...ಎಷ್ಟೆಂದ್ರೂ ಭೂತ ಭೂತವೇ. ಅದರ ಕೆಟ್ಟ ಸ್ವಭಾವ ವನ್ನ ಅದು ಎಲ್ಲಿ ಬಿಡುತ್ತೆ. ಸತ್ತಮೇಲೆ ಕೂಡಾ ಸ್ಮಶಾನ ಬಿಟ್ಟು ಜೀವಂತ ಮನುಷ್ಯನ ಮನಸ್ಸಿನ ಮೇಲೆ ನೆಲೆಸೋದು.

ಕ.ಕೋ: ವರದಾಚಾರ್ಯರ ನಾಟಕಗಳನ್ನ ನೀವು ನೋಡಿರಬೇಕಲ್ಲ.

ಅಪ್ಪಾ : ಓಹೋ ಬೇಕಾದಷ್ಟು ನೋಡಿದ್ದೇನೆ.

ಕ.ಕೋ: ಕ್ಷಮಿಸಿ. ವರದಾಚಾರ್ಯ, ಪೀರ್‌ಸಾಹೇಬ್, ಗರುಡ ಸದಾಶಿವ ರಾಯರು ಇವರೆಲ್ಲ ನಾಟಕದ ಇತಿಹಾಸದಲ್ಲಿ ಹೆಸರಾಂತ ವ್ಯಕ್ತಿ ಗಳೇನೋ ನಿಜ. ಆದರೆ ನನಗೆ ಕಾಣುತ್ತೆ ಅವರನ್ನೆಲ್ಲ ಅವರವರ ಯೋಗ್ಯತೆಗೆ ಮೀರಿ ವರ್ಣಿಸಿದ್ದಾರೇಂತ. ಅಥವಾ ವಿಕೃತ Morbid ಸಮಾಧಾನಕ್ಕೋಸ್ಕರ ನಾವೇ ಕಲ್ಪಿಸಿಕೊಂಡ ಮಹಾನ್ ವ್ಯಕ್ತಿಗಳು. I don't believe they were great actors—not even good actors. ನಾನು ಇವರದ್ದೆಲ್ಲ Photos ನೋಡಿದ್ದೇನೆ. ಚರಿತ್ರೇನೂ ಓದಿದ್ದೇನೆ. ರಂಗಭೂಮಿಯಲ್ಲಿ ಅತಿರೇಕ ಭಾವ ಪ್ರದರ್ಶನ, ಆರ್ಭಟಿ ಹೊಡೆಯುವ ಸಂಪ್ರದಾಯ ಹುಟ್ಟಿಸಿದ ಪಾತ್ರಧಾರಿಗಳೂಂತ......

ಸರಸು : ಅಯ್ಯೋ ಅವರ ಮುಖದಲ್ಲಿ ಸ್ವಲ್ಪವೂ ನಟರ ಕಳೆಯೇ ಇಲ್ಲಾಂದ್ರೆ. ಕೆಲವರ ಮುಖ ಕಳ್ಳು ಕುಡಿದವರ ಹಾಗೇ. ಅಲ್ಲದೆ ಕೆಲವರಿಗೆ ಶರಾಬು ಕುಡಿಯದೆ ಸ್ಫೂರ್ತೀನೇ ಬರ್ತಿರಲಿಲ್ಲವಂತೆ.

ಕ.ಕೋ: ಅಲ್ಲ. ಅದು ಪರವಾಗಿಲ್ಲ, ಅವರವರ personal matters. We should not interfere. ಆದ್ರೆ ಅವರ ನಾಟಕದಲ್ಲೇನು ಶ್ರೇಷ್ಠತೆ ಕಂಡುಕೊಳ್ಳೋದು ಸಾಧ್ಯ. ಎಲ್ಲಾ Melo-dramas. ಮಧ್ಯೆ ಮಧ್ಯೆ ಕಂದಪದ್ಯ ಹಾಡೋದು. ಆಮೇಲೆ ಭಾಷಣ ಬಿಗಿಯೋದು.

ಸರಸು : ಹೌದೂಂದ್ರೆ ಭಾಷಣ ಕೊಟ್ಟಹಾಗೆ ಸಂಭಾಷಣೆ. ದೊಡ್ಡ ದೊಡ್ಡ dialogues—most unnatural.

Sri Vidyabharathi Book Centre, Sringeri

CC-O. In Public Domain. Digitized by eGangotri

ಕ.ಕೋ: ಯಕ್ಷಗಾನದ ಹಾಗೆ ರಾಗ, intonation. ಅಲ್ಲಾ ಯಕ್ಷಗಾನ ಅಂದ್ರೆ ನಮ್ಮ ಪ್ರಾಂತ್ಯದ ಎಷ್ಟೊಂದು ದೊಡ್ಡ ಕಲೆ ? ನಾವೀಗ ಯಾವ ರೀತಿ ಶೇಕ್ಸ್‌ಪಿಯರಿನ dramaಕ್ಕೆ ಯಕ್ಷಗಾನದ style ಹಾಕಿದ್ದೇವೆ ? ಈ ರೀತಿ ಪ್ರಯೋಗ ಮಾಡೋಣಾಂತ ಅವರಿಗೆ ಯೋಚನೆ ಕೂಡಾ ಬಂದಿರಲಿಕ್ಕಿಲ್ಲ.

ಅಪ್ಪಾ : (ಸಹನೆ ಮೀರಿ ಸಿಟ್ಟಿನಿಂದ) ಸಾಕು, ಸಾಕಿನ್ನು ಈ ಆತ್ಮ ಸ್ತುತಿ. ಕರ್ನಾಟಕದ ಕೀರ್ತಿಕಲಶರೆನಿಸಿದ ಪೀರ್ ಸಾಹೇಬ್, ವರದಾ ಚಾರ್ಯರು, ಗರುಡ ಸದಾಶಿವರಾಯರು ಇವರ ಅವಹೇಳನ ಮಾಡುವ, ನಿಮಗೇನು ಯೋಗ್ಯತೆ ಇದೆ ಹೇಳಿ. ಅವರ ರೋಮದ ಯೋಗ್ಯತೆ ಕೂಡಾ ನಿಮಗಿಲ್ಲ. ಹೊರಡಿ ಇಲ್ಲಿಂದ.

ಕ.ಕೋ: ಅಪ್ಪಾ ಸಾಹೇಬ್ ಏನು ಹೇಳ್ತಾ ಇದ್ದೀರಿ.

ಅಪ್ಪಾ : (ಜೋರಾಗಿ) ನಡೀರಿ. ನಾನ್ಹೇಳೋದು ನಡೀರಿ ಇಲ್ಲಿಂದಾಂತ. ನನಗೆ ಆದರ್ಶರೆನಿಸಿದ ಕಲಾವಂತರ ಕೀರ್ತಿ ಕಲಶಕ್ಕೆ ಸೆಗಣಿ ಹಚ್ಚಲು ಪ್ರಯತ್ನ ಮಾಡುವ ನೀವು ನಡೀರಿ ಇಲ್ಲಿಂದ.

[ಸುಧಾಕರ್ ಮತ್ತು ಮಾಲತಿ ಹೊರಗಿನಿಂದ,
ವಿಠಲ ಒಳಗಿನಿಂದ ಬರುವರು]

ಮಾಲತಿ: ಅಪ್ಪಾ...ಏನಿದು......ಏನಿದರ ಅರ್ಥ ?

ಅಪ್ಪಾ : ಎಲ್ಲಾ ತಿಳಿದೇ ಹೇಳ್ತಾ ಇದ್ದೇನೆ. ಈ ಮನೆ ನನ್ನದಲ್ಲ, ನನ ಗ್ಗೊತ್ತು. ಆದ್ರೂ ಹೇಳ್ತೀನಿ [ಕಂಬದ್ಕೋಣೆಯವರಿಗೆ] ತೊಲಗಿ ಇಲ್ಲಿಂದ. ನನ್ನ ರಕ್ತ ನಾಡಿಗಳ ಕಣ ಕಣಗಳಲ್ಲಿ ವರದಾಚಾರ್ಯರ ಕಲಾಕೌಶಲ್ಯತೆಯ ನೆನಪು ಇನ್ನೂ ಅಡಗಿದೆ. ಹಾಗಿದ್ದೂ ನನ್ನೆದು ರಿಗೇ ಅವರ ಅವಮಾನವಾಗೋದನ್ನ ಸಹಿಸಲೇ. ತೊಲಗಿ ಇಲ್ಲಿಂದ.

ಸರಸು : (ಗಂಡನಿಗೆ) ನಡೀರೀಂದ್ರೆ. ಇನ್ನೊಂದು ಕ್ಷಣ ನಾವಿಲ್ಲಿರಬಾರದು. Nonsense.

ಮಾಲತಿ: ದಯಮಾಡಿ ತಪ್ಪುತಿಳ್ಕೋಬೇಡಿ.

ಸುಧಾಕರ: ಸಾಹೇಬ್ರು ಕ್ಷಮಿಸ್ಬೇಕು. ನನ್ನ ಮಾತು ಸ್ವಲ್ಪ ಕೇಳ್ಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕ.ಕೋ: No. Never. I won't tolerate this insult. (ಅಪ್ಪಾವರನ್ನು ನೋಡಿ) ಹಳೇ ಸಂಪ್ರದಾಯದ ಮುದಿಗೊಡ್ಡು this Idiot. ಬಾ ಸರಸು.

[ಕಂಬದ್ಕೋಣೆ ಮತ್ತು ಸರಸು ಹೋಗುವರು. ಸುಧಾಕರ್ ಅವರ ಹಿಂದೆಯೇ ಹೋಗುವನು. ಮಾಲತಿ ಒಂದು ಬದಿಗೆ ತಟಸ್ಥಳಾಗಿ ನಿಲ್ಲುತ್ತಾಳೆ. ವಿಠಲ ಒಳಗೆ ಹೋಗುವನು.]

[ಅಪ್ಪಾ ಸಾಹೇಬ್ ನಿಧಾನವಾಗಿ ಆಚೆ ಈಚೆ ಹೋಗುತ್ತ ಒಂದು ಕಡೆ ನಿಂತು]

ಅಪ್ಪಾ : ಮಾಲತಿ ನಾನು ಹಾಗೆ ಮಾಡ್ಬಾರ್ದಿತ್ತು. ನನ್ನಿಂದ ದೊಡ್ಡ ತಪ್ಪಾಯ್ತು.

ಮಾಲತಿ: ಅಪ್ಪಾ ನೀವು ಸ್ವಲ್ಪ ಒಳಗೆ ಹೋಗಿ. ಸುಮ್ಮನೆ ಮಾತ್ನಾಡದೆ ಕೂತ್ಕೊಳ್ಳಿ.

ಅಪ್ಪಾ : ನನ್ನ ಬುದ್ಧಿಯೇ ಸ್ಥಿಮಿತದಲ್ಲಿರಲಿಲ್ಲ ಮಗೂ. ನನ್ನ ಕೈಗಡಿಯಾರ ಚಲಿಸೋದೇ ನಿಂತಿದೆ. ನನ್ನ ತಲೆಯೇ ಕೆಟ್ಟಿದೆ ಮಗೂ.

ಮಾಲತಿ: ದಯವಿಟ್ಟು ನೀವು ಒಳಗೆ ಹೋಗಿ. ಈಗ ನನ್ನ ತಲೆ ಕೆಡಿಸ್ಬೇಡಿ.

ಅಪ್ಪಾ : ಆಗಲಿ.

[ಹೋಗುವನು]

[ಮಾಲತಿ Sofa ದ ಮೇಲೆ ತಲೆ ಕೆಳಗೆ ಹಾಕಿ ಕುಳಿತುಕೊಳ್ಳುವಳು ನಿಧಾನವಾಗಿ ಸುಧಾಕರ್ ಪ್ರವೇಶಿಸುವನು. ಆತನನ್ನು ನೋಡಿ]

ಮಾಲತಿ: ದಯಮಾಡಿ ನೀವು ನನ್ನ ಮೇಲೆ ಕೋಪಿಸ್ಕೋಬಾರ್ದು.

ಸುಧಾಕರ: ನಿನ್ನ ಮೇಲೆ ನಾನ್ಯಾಕೆ ಕೋಪಿಸ್ಕೊಳ್ಳಿ. ನಿನ್ನದೇನು ತಪ್ಪಿದೆ ಇದ್ರಲ್ಲಿ ?

ಮಾಲತಿ: ನನ್ನದೇ ತಪ್ಪು. ನಾನವರನ್ನಿಲ್ಲಿ ಇರಿಸಿಕೊಂಡದ್ದೇ ತಪ್ಪು.

ಸುಧಾಕರ: ಅದರಲ್ಲೇನು ? ನೀನು ನಿನ್ನ ಕರ್ತವ್ಯವನ್ನು ಮಾಡಿದ್ದೀಯಾ.

ಮಾಲತಿ: ಅದರ ಪರಿಣಾಮವೇನಾಯ್ತೀಗ ನೋಡಿ. ನಮ್ಮ ಮನೇಲಿ ನಿಮ್ಮ ಸಾಹೇಬ್ರಿಗೇ ಅಪಮಾನವಾಯ್ತಲ್ಲ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಧಾಕರ: ನಿನಗದರ ಚಿಂತೆ ಬೇಡ. ನನ್ನ ಮೇಲವರಿಗೆ ತುಂಬಾ ಅಭಿಮಾನ ಇದೆ. ಇಷ್ಟು ವರ್ಷ ಬೆಳೆಸಿ ಬಂದ ಈ ಅಭಿಮಾನ ಈ ಒಂದು ಚಿಕ್ಕ ವಿಷಯದಲ್ಲಿ ಮಣ್ಣು ಪಾಲಾಗ್ಲಿಕ್ಕೆ ಸಾಧ್ಯವಿಲ್ಲ. ಅವರ ಸ್ವಭಾವ ನನಗೆ ಚೆನ್ನಾಗಿ ಗೊತ್ತು. ಅವರಿಗೆಲ್ಲ ಚೆನ್ನಾಗಿ ವಿವರಿಸಿ ಹೇಳಿದ್ರೆ ಸರಿ.

ಮಾಲತಿ: ಅಣ್ಣ, ಅತ್ತಿಗೆಯವರಲ್ಲೂ ಇದೇ ರೀತಿ ಇವರು ವರ್ತಿಸಿಕೊಂಡಿದ್ದಿರಬೇಕು. ಅವರ ಸಹನೆಗೂ ಮಿತಿ ಮೀರಿ ಹೋಗಿರಬೇಕು. ಈಗ ನನಗೆ ತಿಳೀತು. ಈ ಪ್ರಾಯಸ್ಥರನ್ನು ಸುಧಾರಿಸಿಕೊಂಡು ಹೋಗೋದೆಷ್ಟು ಕಷ್ಟಾಂತ.

ಸುಧಾಕರ: ಮುದಿ ಪ್ರಾಯಾಂದ್ರೆ ಹಾಗೇನೇ. ಅವರ ಜಗತ್ತೇ ಬೇರೆ. ವಾಸ್ತವಿಕ ಪ್ರಪಂಚಕ್ಕೆ ಹೊಂದಿಕೊಂಡು ಹೋಗೋದು ಅವರಿಗಸಾಧ್ಯ. ಅದಕ್ಕೇ ಮುದಿ ಭ್ರಾಂತೀಂತ ಹೇಳೋದು.

ಮಾಲತಿ: ಹಾಗೇಂತ ಅದನ್ನು ನಾವು ಸಹಿಸಿಕೊಂಡು ಹೀಗೆ ನಿಂದೆಗೆ ಗುರಿಯಾಗ್ಬೇಕೇನು ? ಇತ್ತೀಚೆಗೆ ನಾನವರಿಗೆ ಹೊರಗಿನ ಹೋಟೇಲಿನ ಕಚರಾ ತಿಂಡಿ ತಿನ್ನಲಿಕ್ಕೆ ಹಣ ಕೊಡ್ತಿಲ್ಲಾಂತ ಸಾಲ ತಗೊಂಡು ತಂದು ತಿಂತಾರೆ. ಇವರಿಗೆ ನಾನೇನು ಕಡಿಮೆ ಮಾಡಿದ್ದೇನೆ.

ಸುಧಾಕರ: ಅಯ್ಯೋ! ನಮ್ಮ ಮರ್ಯಾದೆ ಎಲ್ಲಾ ತೆಗೀತಿದ್ದಾರಲ್ಲವೇ ಮಾಲತಿ?

ಮಾಲತಿ: ಅದನ್ನೇ ಹೇಳ್ತಾ ಇರೋದು. ಯಾವ ಯಾವ ಅಂಗಡಿಗೆ ಹೋಗಿ ಹರಟೆ ಹೊಡೆಯೋದು, ಹೊಲಸು ಹೋಟೇಲಿನ ತಿಂಡಿ ತಂದು ಮನೇಲಿ ತಿನ್ನೋದು ಇದೆಲ್ಲಾ ಚೆನ್ನಾಗಿರುತ್ತಾ. ಏನೋ ಮಕ್ಕಳನ್ನು ನಾವು Hostel ನಲ್ಲಿ ಇಟ್ಟದ್ರಿಂದ ಬದುಕಿದೆವು. ಇಲ್ಲವಾದ್ರೆ ಅವರ ಮೇಲೂ ಅಜ್ಜನ ಸಹವಾಸದ ಅನಿಷ್ಟ ಪರಿಣಾಮ ಖಂಡಿತಾ ಆಗ್ತಿತ್ತು.

ಸುಧಾಕರ: ಮುದುಕರಿಗೆ ಪ್ರಾಯ ಸಂದಂತೆ ಎಳೇ ಮಕ್ಕಳ ಬುದ್ಧಿ ಬರುತ್ತಂತೆ.

ಮಾಲತಿ: ಆದ್ರೆ ಇಂಥವರಿಗೆ ತಾಯಿಯರನ್ನೆಲ್ಲಿಂದ ಹುಡುಕೋದು. ಕೂತ ಕೂತಲ್ಲಿ ಕಸ, ಕಾಗದದ ಚೂರು, ಭಜಿಯ ತುಂಡುಗಳು, ಕೈ ತೊಳೆದುಕೊಳ್ಳೋ ಬದಲು curtain ಗೆ ಕೈ ಒರಸಿಕೊಳ್ಳೋದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಣ್ಣೆ ಇರಲಿ ಶಾಯಿ ಇರಲಿ ಕಣ್ಣೆದುರಿಗೆ ಏನಿದೆಯೋ ಅದಕ್ಕೇ ಒರಸೋದು. ಇಷ್ಟಾದ್ರೂ ಸುಮ್ಮನೆ ಕುಳಿತುಕೊಳ್ತಾರೇನು. ಬಾಯಿಗೆ ಬಂದ ಹಾಗೆ ಒದರೋದು ರೇಗಾಡೋದು ಯಾರಿದ್ದಾರೆ ಯಾರಿಲ್ಲಾಂತ ಇಲ್ಲ. ಮೊನ್ನೆ ಕಪಾಟಿನಲ್ಲಿದ್ದ ಚಂದನದ ಗೊಂಬೆ ಎಲ್ಲಿ ಮಾಯವಾಯ್ತೂಂತ ಹುಡುಕಿದ್ರೆ ಅಪ್ಪಾವ್ರ ತಲೆದಿಂಬಿನಡಿಯಲ್ಲಿತ್ತು. ಕೇಳಿದ್ರೆ ಮುನ್ನಿಯ ನೆನಪಾಗಿ ಗೊಂಬೆ ಇಟ್ಟುಕೊಂಡಿದ್ದೇಂತ ಹೇಳಿದ್ರು. ಇವೆಲ್ಲಾ ವಿಷಯ ನಾನು ಯಾಕೇಂತ ನಿಮಗೆ ಹೇಳ್ಳಿಲ್ಲ. ಆದ್ರೆ ಇವತ್ತಿನ ಈ ವಿಪರೀತ ಸ್ಥಿತಿ ನೋಡಿದ್ರೆ ಸಹಿಸಲಿಕ್ಕೇ ಅಸಾಧ್ಯ. ನಿಮಗೇ ಈ ಮನೆಯಲ್ಲಿ ಈ ರೀತಿ ಅವಮಾನ ಮಾಡಿದ್ರೆ. ನಮ್ಮ ಮುಂದಿನ ಗತಿ ಏನು ?

[ಕಣ್ಣೀರು ಒರಸಿಕೊಳ್ಳುವಳು]

ಸುಧಾಕರ: ಅಯ್ಯೋ ಹುಚ್ಚೀ ಇಷ್ಟಕ್ಕೆಲ್ಲಾ ಅಳ್ತಾರೇನು. ಹೋಗಲಿ ಮರೆತು ಬಿಡು.

ಮಾಲತಿ: ಹೇಗೆ ಮರೆಯೋದು. ಮುಂದಿನ ಗತಿ ಏನೂಂತ ಯೋಚನೆ ಮಾಡ್ಬೇಡ್ವೇ ?

ಸುಧಾಕರ: ಏನು ಮಾಡೋಕಾಗುತ್ತೆ, ಹೇಳು ?

ಮಾಲತಿ: ಮಾಡೋದೇನಿಲ್ಲಾ. ನಾನಂತೂ ಒಂದು ನಿರ್ಧಾರ ಮಾಡಿದ್ದೀನಿ.

ಸುಧಾಕರ: ಏನು ನಿಶ್ಚಯಿಸಿದ್ದಿ ?

ಮಾಲತಿ: ಇನ್ನು ಮುಂದೆ ಅವ್ರಿಬ್ರೂ ಮನೆ ಹಿಂದಿನ out house ನಲ್ಲಿ ಬಿದ್ದುಕೊಂಡಿರ್ಲಿ.

ಸುಧಾಕರ: ಛೆ...ಛೆ...ಅಲ್ಲಿ ಹೇಗಿರೋದು. ಕಸ, ಧೂಳು ತುಂಬಿಕೊಂಡಿದೆ.

ಮಾಲತಿ: ನಾನದನ್ನೆಲ್ಲಾ ಸ್ವಚ್ಛಪಡಿಸ್ತೀನಿ. ಅಮ್ಮ ಹೇಗೂ ಕಾಯಿಲೆಯಲ್ಲಿ ಹಾಸಿಗೆ ಹಿಡಿದಿದ್ದಾಳೆ. ಅವಳನ್ನು ಮಂಚ ಸಮೇತ ಅಲ್ಲಿಗೆ ಒಯ್ದ್ರೆ ಅಪ್ಪ ತನ್ನಿಂತಾನೇ ಹೋಗ್ತಾರೆ. ಅವರ ಸಾಮಾನೆಲ್ಲಾ ಅಲ್ಲೇ ಇಟ್ಟರಾಯ್ತು. ಊಟ Coffee ಅಲ್ಲಿಗೇ ಕಳಿಸೋದು. ಆಮೇಲೆ ಇಲ್ಲಿಗೆ ಬರೋ ಅವಕಾಶಾನೇ ಇರೋದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಧಾಕರ: ಅಷ್ಟು ಕಠೋರವಾಗ್ಬೇಡ ಮಾಲತಿ. ನೋಡಿದೋರು ಏನಂದಾರು?

ಮಾಲತಿ: ಬೇರೆ ದಾರೀನೇ ಇಲ್ಲ. ಅವರನ್ನು ಚೆನ್ನಾಗಿ ನೋಡಿಕೊಳ್ಳೊ ಕರ್ತವ್ಯ ನನ್ನದಾಗಿದ್ರೂ ನಮ್ಮ ಸಂಸಾರದ ಭವಿಷ್ಯವನ್ನು ಮಣ್ಣುಪಾಲು ಮಾಡೋದಿಕ್ಕೆ ನಾನು ಬಿಡ್ಲಿಕ್ಕಿಲ್ಲ. ವಿಠಲಾ [ವಿಠಲಾ ಬರುವನು] ನಮ್ಮ out houseನ್ನ ಈಗಿಂದೀಗ್ಲೇ ಕಸ ಗುಡ್ಸಿ ಸ್ವಚ್ಛಮಾಡು. ನಾಳೆ ಬೆಳಗ್ಗೆ ಅಮ್ಮನ ಮಂಚವನ್ನು ಅಲ್ಲಿಗೇ ಸಾಗಿಸು. ಅವರಿಬ್ಬರ ಪೆಟ್ಟಿಗೆ ಸಾಮಾನು ಅಲ್ಲೇ ತೆಗೆದುಕೊಂಡು ಹೋಗಿಡು. ನಾಳೆ ಯಿಂದ ಅವರಿಬ್ರೂ ಅಲ್ಲೇ ಉಳ್ಕೊಳ್ತಾರೆ ತಿಳೀತೇನು ?

ವಿಠಲ : ತಿಳೀತಮ್ಮ.

ಮಾಲತಿ: ಅವರ ಊಟ Coffee ಎಲ್ಲಾ ಅಲ್ಲೇ ಆಗ್ಲಿ. ಅವರಿಗೇನು ಬೇಕೋ ಅದು ಅಲ್ಲೇ ಕೊಟ್ಟು ಸರಿಯಾಗಿ ನೋಡ್ಕೊಂಡಿರಬೇಕು ನೀನು. ತಿಳೀತೇನು ?

ವಿಠಲ : ತಿಳೀತಮ್ಮ.

ಮಾಲತಿ: ಸರಿ ಹಾಗಾದ್ರೆ, ನಡಿ.

ಸುಧಾಕರ: ಚೆನ್ನಾಗಿ ವಿಚಾರ ಮಾಡು ಮಾಲತೀ...

ಮಾಲತಿ: ದಮ್ಮಯ್ಯ, ನೀವು ನನ್ನ ತಡೆಕಟ್ಬೇಡಿ. ನನಗ್ಗೊತ್ತು ನಾನು ಮಾಡೋದು ಸರಿಯಲ್ಲಾಂತ. (ಅಳುತ್ತಾ) ಆದ್ರೆ ನನ್ನ ಮನೆತನದ ಗೌರವವನ್ನು ನಾನೂ ಉಳಿಸಿಕೊಳ್ಳೋದೂ ನನ್ನ ಧರ್ಮ. ನನ್ನ ಬಗ್ಗೆ ಅವರೇನು ಬೇಕಾದ್ರೂ ತಿಳ್ಕೊಳ್ಳಿ. ಅವರ ಅಂದಿನ ಆ ಪುಟ್ಟ ಮರಿ ಈಗ ದೊಡ್ಡ ಮರಿಯಾಗಿದ್ದಾಳೇಂತ ಭಾವಿಸ್ಲಿ, ಪರವಾಗಿಲ್ಲ. ನನ್ನ ನಿರ್ಧಾರ ಬದಲಿಸಲಾರೆ. ಸುಧಾಕರ್...ಬೇರಿನ್ನೇನು ಮಾಡ್ಲಿ. ನನ್ನಿಂದೇನು ಮಾಡೋದಕ್ಕೆ ಸಾಧ್ಯ.

[ಅಳುತ್ತಿರುವಾಗ ಸುಧಾಕರ ಹತ್ತಿರ ಬಂದು ಅವಳನ್ನು ಸಂತೈಸುವನು]

ಸುಧಾಕರ: ಸಮಾಧಾನ ಮಾಡ್ಕೋ ಮಾಲತೀ. ನಿನ್ನ ಆರೋಗ್ಯ ಕೆಡಿಸ್ಕೊಳ್ಬೇಡ. ಮುಂದೇನು ಮಾಡ್ಬೇಕೋ ನಾಳೆ ನೋಡ್ಕೊಂಡ್ರಾಯ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಕ ೨

ದೃಶ್ಯ ೩

[Out houseನ ಕೋಣೆ. ಒಂದು ಬದಿಯಲ್ಲಿ ಕಾವೇರಿ ಮಂಚದಲ್ಲಿ ಮಲಗಿದ್ದಾಳೆ. ಅಪ್ಪಾ ದಾಸರ ಪದಗಳನ್ನು easy chair ನಲ್ಲಿ ಕುಳಿತು ಓದು ತ್ತಿದ್ದಾನೆ. ಕೆಲವೊಮ್ಮೆ ಗಟ್ಟಿಯಾಗಿ ಹಾಡುತ್ತಾನೆ.]

ಅಪ್ಪಾ : ಮರವಿದ್ದರೇನಯ್ಯ ನೆರಳಿಲ್ಲದನಕ
ನೆರಳಿದ್ದರೇನಯ್ಯ ನೀರಿಲ್ಲದನಕ
ನೀರಿದ್ದು ಫಲವೇನು ಒರತಿಲ್ಲದನಕ
ಧನವಿದ್ದು ಫಲವೇನು ಕೊಡುವ ಮನವಿಲ್ಲದನಕ
ಮನವಿದ್ದು ಫಲವೇನು ಜ್ಞಾನವಿಲ್ಲದನಕ
ದೇವ ಪುರಂದರ ವಿಠಲ ರಾಯನ
ಊಳಿಗ ಮಾಡದವನ ಬಾಳುವೆ ಏತಕೆ ॥

ಕಾವೇರಿ : ಇಲ್ಲಿ ಕೇಳೀಂದ್ರೆ.

ಅಪ್ಪಾ : (ಕನ್ನಡಕ ತೆಗೆಯುತ್ತಾ) ಏನು ಬೇಕು.

ಕಾವೇರಿ : ಘಂಟೆ ಎಷ್ಟಾಯ್ತೂಂದೆ.

ಅಪ್ಪಾ : ಯಾರಿಗ್ಗೊತ್ತು. ಯಾವತ್ತು ನನ್ನ ಗಡಿಯಾರ ನಿಂತು ಹೋಯ್ತೋ ಅಂದಿನಿಂದ ಈ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ. ಈಗ ಘಂಟೆ ಯನ್ನಲ್ಲ ನಾನು ದಿನ ಲೆಕ್ಕ ಹಾಕ್ತಾ ಇದ್ದೀನಷ್ಟೇ. (ಓದುವನು)
ಹರಿ ಸರ್ವೋತ್ತಮನೆಂಬೋ ಹಿರಿಪುತ್ರನಿರಲಾಗಿ
ಈ ನರಪುತ್ರರಿಂದ ಆಹೋದೇನಯ್ಯಾ
ಪದ್ಮನಾಭನೆಂಬೋ ದೊಡ್ಡ ಪುತ್ರನಿರಲಾಗಿ ಈ
ದಡ್ಡಪುತ್ರರಿಂದ ಆಗೋ ಗತಿಯೇನಯ್ಯಾ
ಶ್ರೀ ಕೇಶವನೆಂಬೋ ಜ್ಯೇಷ್ಠಪುತ್ರನಿರಲಾಗಿ ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ನಷ್ಟ ಪುತ್ರರಿಂದಲಾಗೋ ಗತಿಯೇನಯ್ಯಾ
ಪುರಂದರ ವಿಠಲನೆಂಬೊ ಪುಣ್ಯಪುತ್ರನಿರಲಾಗಿ
ಈ ಅನ್ಯ ಪುತ್ರರಿಂದ ಆಗೋ ಗತಿಯೇನಯ್ಯಾ.

ಕಾವೇರಿ : ಸಾಕು. ಕಾವ್ಯವಾಚನ, ಸಾಕು ಮಾಡೀಂದ್ರೆ.

ಅಪ್ಪಾ : ನಿನಗೇನಾಗಬೇಕಾಗಿದೆ ಸರಕಾರ್.

ಕಾವೇರಿ : ನೋಡಿ ಇವತ್ತಿನ ಮಟ್ಟಿಗೆ ಸಾಕುಮಾಡಿ ನಿಮ್ಮ ವಾಚನ. ನನಗ್ಯಾಕೋ ಇಂದು ಆಕಡೆ ಲಕ್ಷವೇ ಹೋಗೋದಿಲ್ಲ.

ಅಪ್ಪಾ : ಸರಿ ಹಾಗಾದ್ರೆ. ನಿನ್ನ ಮನಸ್ಸಿಗೆ ಒಂದಿಷ್ಟು ಶಾಂತಿ ಸಮಾಧಾನ ಸಿಗ್ಲೀಂತ ನಾನು ಓದೋದು. ನಿನಗೇ ಬೇಡವಾದ್ರೆ ಮತ್ತೆ ನನಗ್ಯಾಕೆ.

ಕಾವೇರಿ : ನೋಡಿ ನಾನೊಂದು ಹೇಳ್ತೀನಿ. ನೀವು ತಮಾಷೆ ಮಾಡೋದಿಲ್ಲ ತಾನೆ !

ಅಪ್ಪಾ : ಆಗಲಿ ಹೇಳು.

ಕಾವೇರಿ : ನನಗಿವತ್ತು ತುಂಬಾ ಉಲ್ಲಾಸ ಯಾಕೋ ಏನೋ. ನೋಡೀಂದ್ರೆ ಎದ್ದು ಕುಳಿತುಕೊಳ್ಳುವಷ್ಟು ಬಲಕೂಡ ಬಂದಿದೆ.

ಅಪ್ಪಾ : ಸರಿ ಹಾಗಾದ್ರೆ. ನಾವಿಬ್ರೂ ಜತೆಯಾಗಿ ತೋಟ ಸುತ್ತಿಕೊಂಡು ಬರೋಣವೇ.

ಕಾವೇರಿ : ಚೆನ್ನಾಯ್ತು ನೀವು ಚೇಷ್ಟೆ ಮಾಡ್ತೀರಾದ್ರೆ ನಾನು ಮಾತ್ನಾಡೋದೇ ಇಲ್ಲ.

ಅಪ್ಪಾ : (ತಕ್ಷಣ ನಿಂತು) ಅಲ್ಲಾ ಎಂಥ ಮೂರ್ಖ ನಾನು. ಮರೆತೇ ಹೋಯ್ತು. ತೋಟ ಎಂದಾಗ ನೆನಪಾಯ್ತು. ನಿನಗಾಗಿ ನಾನೇನೋ ತಂದಿದ್ದೀನಿ. ಏನದು ಹೇಳು ನೋಡೋಣ.

ಕಾವೇರಿ : ನನಗಾಗಿ ? ಅದೇನು ಅಂಥಾ ಕೌತುಕದ ವಸ್ತು. ಭಜೆ ಗಿಜೆ ಅಲ್ಲ ತಾನೆ !

ಅಪ್ಪಾ : ಛೆ ತಿನ್ನೋವಸ್ತು ಅಲ್ವೇ ಅಲ್ಲ.

*

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾವೇರಿ : ಹಾಂ. ಹೇಳ್ಲಾ – ಸಂಪಿಗೆಯ ಹೂ.

ಅಪ್ಪಾ : ಅರೆ ವ್ಹಾ, ಹೇಗೆ ತಿಳೀತು ನಿನ್ಗೆ? ಮೊದ್ಲೇ ನೀನು ನೋಡಿರಬೇಕು.

ಕಾವೇರಿ : ನೋಡ್ಬೇಕೂಂತಿಲ್ಲವೇ ಇಲ್ಲ. ಅದೂ ಸಂಪಿಗೆಯ ಹೂ. ಅದನ್ನ ಎಲ್ಲಿ ಬಚ್ಚಿಟ್ಟರೂ ಅದ್ರ ಪರಿಮಳವನ್ನ ಬಚ್ಚಿಡೋದಕ್ಕೆ ಸಾಧ್ಯ ವಿಲ್ಲ. ನೀವು ಬಂದ ತಕ್ಷಣವೇ ಸಂಪಿಗೆಯ ಪರಿಮಳ ಬಂತು. ಬೇರೇನೋ ಮಾತು ಬಂದು ಕೇಳೋದಿಕ್ಕೆ ಮರೆತುಹೋಯ್ತು.

ಅಪ್ಪಾ : ಪರವಾಗಿಲ್ಲ ತಗೋ...ಅಥವಾ ನಾನೇ ಮುಡಿಸ್ಲೋ. (ಹತ್ತಿರ ಹೋಗುವನು)

ಕಾವೇರಿ : ಶೀ...ಇದೇನು ಹುಡುಗಾಟಾಂದ್ರೆ. ನಿನ್ನೆ ಮೊನ್ನೆ ಮದುವೆಯಾದ ವರ ಹಾಗೆ ಮಾಡ್ತೀರಾ. ಕೊಡಿ ಇಲ್ಲಿ. ಯಾವ ತೋಟದಿಂದ ಕದ್ದು ಕೊಂಡು ಬಂದ್ರಿ ಅದು ಮೊದಲು ಹೇಳಿ.

ಅಪ್ಪಾ : ನೋಡು ಸರಕಾರ್. ಹೂತೋಟ ಯಾವನೇ ಬೆಳಸಲಿ ಹೂವಾತ್ರ ಪರಮಾತ್ಮಂದೇ ಸೃಷ್ಟಿ. ಪ್ರಪಂಚದ ಸೌಂದರ್ಯ ಸೃಷ್ಟಿಗಳಲ್ಲಿ ಇದೂ ಒಂದು. ಆಕಾಶದಲ್ಲಿ ಮಿನುಗುವ ತಾರೆಗಳಂತೆ ಭೂದೇವಿಯ ಮೇಲೆ ಶೋಭಿಸುವ ಈ ಬಗೆ ಬಗೆಯ ಪುಷ್ಪಗಳು ದೈವಸಂಪತ್ತು. ಆ ಮನೇ ಮಾಲಿಕ ಆಕಾಶವೇ ಕಳಚಿ ಬಿದ್ದಂತೆ ಓಡಿ ಬಂದಾಗ ಅದೇ ಮಾತು ಹೇಳಿದೆ ; ಅವನಿಗೆ ನಿನ್ನ ಮನೇ ಮಹಡಿ ಮೇಲೆ ಬೆಳ ದಿಂಗಳು ಬಿತ್ಕೊಂಡ್ರೆ ಚಂದ್ರದೇವರು ನಿನ್ನಪ್ಪನ ಮನೆ ಆಸ್ತಿಯಾ ಗೋಲ್ಲಾಂತ.

ಕಾವೇರಿ : ನಿಮ್ಮ ಮಾತು ಕೇಳಿ ಖುಶಿಯಾಗಿರಬೇಕಲ್ಲ ಅವನಿಗೆ ?

ಅಪ್ಪಾ : ಅವನಿಗೆ ಖುಶಿಯಾದ್ದು ನನ್ನ ಮಾತಲ್ಲ ಕಣೇ. ನಾನು ಸುಧಾಕರ ದೇಶ್‌ಪಾಂಡೆಯವರ ಮಾವಾಂತ. ಇಂಥ ಸಣ್ಣ ಜಗತ್ತಿಗೆ ನನ್ನಳಿಯ ಬಹಳ ದೊಡ್ಡ ಮನುಷ್ಯ ಕಣೇ.

ಕಾವೇರಿ : ಏನೋ ಹೇಳ್ಬೇಕೂಂತ ಯೋಚಿಸ್ತಾ ಇದ್ದೆ.

ಅಪ್ಪಾ : ಏನದು ಹೇಳ್ಬೇಕೂಂತಿದ್ದದ್ದು.

ಕಾವೇರಿ : ಎಷ್ಟೋ ದಿನಗಳಿಂದ ಒಂದು ವಿಚಾರ ಮನಸ್ಸಿನಲ್ಲಿ ಸುಳಿದಾಡ್ತಾ ಇದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಏನದು ಅಂಥಾ ಮಹತ್ವದ ವಿಚಾರ ?

ಕಾವೇರಿ : ಬೇರೇನಿಲ್ಲ. ನಾವಿಲ್ಲಿ ಇನ್ನು ಮುಂದೆ ಇರಬಾರದೂಂತನ್ನಿಸುತ್ತೆ.

ಅಪ್ಪಾ : ಇನ್ನೆಲ್ಲಿಗೆ ಹೋಗೋದು. ಅದೂ ಈ ಸ್ಥಿತಿಯಲ್ಲಿ !

ಕಾವೇರಿ : ಊರಿಗೆ ಹೋಗೋಣ, ತೀರ್ಥಹಳ್ಳಿಗೆ.

ಅಪ್ಪಾ : ಯಾಕೆ. ನಿನಗೇನಾದ್ರೂ ತೊಂದರೆಯಾಗುತ್ತೇನಿಲ್ಲಿ ?

ಕಾವೇರಿ : ನಿಮಗೆ ಅಷ್ಟೂ ಅರ್ಥವಾಗೋದಿಲ್ವೇ ?

ಅಪ್ಪಾ : ನೋಡು ಸರಕಾರ್. ಯಾವತ್ತು ನಮ್ಮ ಬಿಡಾರ ಇಲ್ಲಿಗೆ ಬದಲಾಯ್ತೋ ಅಂದೇ ನಾನೆಲ್ಲ ತಿಳಿದುಕೊಂಡೆ. ಆದ್ರೆ ಮಾಲತಿಯಾಗ್ಲಿ, ಸುಧಾಕರನಾಗ್ಲೀ ಮನಸ್ಸಿನಲ್ಲೇನಿದ್ರೂ ಹೊರಗೆ ಹೇಳಿ ತೋರ್ಸೋ ವ್ಯಕ್ತಿಗಳಲ್ಲ. ಆದ್ರಿಂದ ನಾವೂ ಹಾಗೇ ಇದ್ರೆ ಸರಿ. ತೊಂದ್ರೆ ಏನಿದ್ರೂ ಸಹಿಸಿಕೊಂಡು ಸುಖವಾಗಿದ್ದೇವೇಂತ ಅನ್ನಿಸಿಬಿಡೋದು.

ಕಾವೇರಿ : ಬೇಡ, ಹಾಗೆ ಮನಸ್ಸಿನಲ್ಲೇ ಇಟ್ಕೊಂಡಿದ್ರೆ ನನ್ನ ಆರೋಗ್ಯವೆಂದೂ ಸುಧಾರಿಸಲಿಕ್ಕಿಲ್ಲ.

ಅಪ್ಪಾ : ಮತ್ತೇನು ಊರಿಗೆ ಹೋದ್ರೆ ಸುಧಾರಿಸುತ್ತಾ. ಆ ಹಳ್ಳಿಯಲ್ಲಿ ಒಬ್ಬ ವೈದ್ಯ ಬೇಕಾದ್ರೂ ಸಿಗಲಿಕ್ಕಿಲ್ಲ.

ಕಾವೇರಿ : ಆದ್ರೆ ವೈದ್ಯರ ಮದ್ದಿನಿಂದ ಗುಣವಾಗೋ ಕಾಯಿಲೆ ಅಲ್ಲ ಇದು. ಗೂಡಿನಲ್ಲಿ ಸಿಕ್ಕಿಬಿದ್ದ ಇಲಿಗಳಂತಿದ್ದೇವೆ ಇಲ್ಲಿ. ಯಾರಿಗೂ ಬೇಡವಾಗಿದ್ದೇವೆ. ನಾನು ಹೊರಗೆ ಹೋಗೋ ಸ್ಥಿತೀಲಂತೂ ಇಲ್ಲ. ಅವರಿಗಾದ್ರೂ ನಮ್ಮನ್ನು ನೋಡಬೇಕೂಂತನ್ನಿಸುತ್ತೋ ಅದೂ ಇಲ್ಲ. ಹೀಗೆ ಶಿಕ್ಷೆ ಅನುಭವಿಸಿಕೊಂಡೇ ಸಾಯೋದಾದ್ರೆ ಇಲ್ಲಿ ಇರಬೇಕಾದ ಅಗತ್ಯ ಏನು. ಹುಟ್ಟಿದ ಹಳ್ಳಿಯಲ್ಲೇ ಸ್ವತಂತ್ರವಾಗಿ ಸಾಯಬಹುದಲ್ಲ.

ಅಪ್ಪಾ : ಅಶುಭ ಮಾತಾಡಬೇಡ ಸರಕಾರ್. ನೀನು ಹೇಳೋದೇನೋ ಒಂದು ದೃಷ್ಟಿಯಲ್ಲಿ ಸರಿ. ನಿಜವಾಗಿ ನೋಡಿದ್ರೆ ನನ್ನ ಮನಸ್ಸನ್ನೇ ನೀನೂ ಬಾಯಿಬಿಟ್ಟು ಹೇಳ್ತಾ ಇದ್ದಿ. ಊರಿಗೆ ಹೋದೆವೂಂದ್ರೆ ನಮ್ಮೆಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಕಷ್ಟಗಳ ನಿವಾರಣೆ ಖಂಡಿತ. ನಮ್ಮನೆಗೆ ಈ ಮಾಲತಿ ಕುಣಿದಾಡಿ ಕೊಂಡು ಬರಲಿಕ್ಕಿದೆ ನೋಡು. ಅಲ್ಲದೆ ಆ ನಮ್ಮ ಮೇಲ್ಮನೆ ದೇವ ಸ್ಥಾನದ ಕೆರೆಯಲ್ಲಿ ನಾನೊಂದು ಎರಡು ವಾರ ಈಜಿದ್ರೆ ನನ್ನ ಆರೋಗ್ಯಾನೂ ಎಷ್ಟು ಚೆನ್ನಾಗಿ ಸುಧಾರಿಸುತ್ತೆ ಗೊತ್ತಾ. ಮತ್ತೆ ನಮ್ಮ ಮಾಧು ಶಾರದಾನೂ ಅವರ ಜತೆಗೆ ಮುನ್ನೀನ ಕರಕೊಂಡು ಖಂಡಿತ ಬರ್ತಾರೆ ನೋಡು. ಆದ್ರೆ ನಾವೀಗ ಇಲ್ಲಿಂದ ಹೋದ್ರೆ ಸರಕಾರ್ ನಮ್ಮ ಮಾಲತಿ ಸುಧಾಕರ್ ಏನಂದಾರು ?

ಕಾವೇರಿ : ಏನೂ ಅನ್ನೋದಿಲ್ಲ. ಊರಿಗೆ ಹೋಗ್ತೀವೀಂದ್ರೆ ಹೋಗಿ ಅಂತಾರೆ. ಪುಣ್ಯಕ್ಕೆ ಈ ಹಳೇ ಮನೆಯನ್ನ ಯಾರಿಗೂ ದಾನ ಮಾಡದೆ ಇಟ್ಟು ಕೊಂಡದ್ದು ಒಳ್ಳೇದಾಯ್ತು.

ಅಪ್ಪಾ : ಆದ್ರೆ ಅದು ಉಳ್ಕೊಂಡಿದೇಂತೇನು ಗೊತ್ತು ನಿನಗೆ. ಮನೆ ಬಿಟ್ಟು ಎಷ್ಟೋ ವರ್ಷಗಳಾಯ್ತು. ಅದು ಸರಿಯಾಗಿ ಇದ್ಯೋ, ಬಿದ್ದಿದ್ಯೋ ಅಥವಾ ಯಾರ ಪಾಲಾಗಿದ್ಯೋ ಯಾರಿಗ್ಗೊತ್ತು ?

ಕಾವೇರಿ : ನಾನು ಒಮ್ಮೆ ಇಲ್ಲಿಂದ ಬಿಟ್ಟೆ ಅಂದ್ರೆ ತನ್ನಷ್ಟಕ್ಕೇ ಹುಷಾರಾಗ್ತೇನೆ ನೋಡಿ. ಮನೆ ಮುರುಕಾಗಿಯಾದ್ರೂ ಉಳಿದಿದ್ರೆ ನಾನೇ ಅದನ್ನು ಸರಿಮಾಡ್ತೇನೆ. ನೆರೆಮನೆಯವರೆಲ್ಲ ನಮ್ಮ ಶತ್ರುಗಳಲ್ಲ ತಾನೆ ! ನಮ್ಮ ಮನೆಯನ್ನ ಹ್ಯಾಗೆ ಅಲಂಕಾರ ಮಾಡಿಡ್ತೇನೆ ನೋಡಿ.

ಅಪ್ಪಾ : ತಥಾಸ್ತು ನಿನ್ನಿಚ್ಛೆಯಂತಾಗಲಿ.

ಕಾವೇರಿ : ನೋಡಿ, ಆ ಮನೆಯಲ್ಲಿ ಎಲ್ಲ ನಾನು ಹೇಳಿದಂತೆಯೇ ಆಗ್ಬೇಕು. ಮತ್ತೆ ನೀವು ಗಟ್ಟಿ ಮಾತಾಡೋದು, ಗದರಿಸೋದು ಎಲ್ಲಾ ಇರ ಬಾರದು. ತಿಳೀತೇನು ?

ಅಪ್ಪಾ : ಹುಕುಂ ಸರಕಾರ್...

ಕಾವೇರಿ : ನಮ್ಮ ಆ ಮನೆ ಮುಂದಿನಂಗಳದಲ್ಲಿ ಒಂದು ಚಂದವಾದ ತುಳಸಿ ವೃಂದಾವನ ಇರ್ಲೇಬೇಕು. ಏನು, ಕೇಳಿತೇ ನಾನು ಹೇಳಿದ್ದು ? ಮನೆ ಚಿಕ್ಕದಾದ್ರೂ ಎಷ್ಟು ಚೊಕ್ಕಟವಾಗಿಡ್ತೇನೆ ನೋಡಿ. ನಾವು ದೂರ ಇದ್ರೆ ಮಕ್ಕಳಿಗೂ ಮಮತೆ ಹೆಚ್ಚುತ್ತೆ. ರಜೆಗೆ ನಾಲ್ಕು ದಿನ ಅವರೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಬರ್ಲಿ. ಮಾಧು ಕೂಡಾ ಬಾರದಿರಲಿಕ್ಕಿಲ್ಲ. ನೋಡಿ ಹ್ಯಾಗೆ ಅವರ ದೃಷ್ಟಿ ಬದಲಾಗುತ್ತೇಂತ.

ಅಪ್ಪಾ : ಆಗಲಿ ಯಾರು ಬೇಡಾ ಅಂದ್ರು. ಆದ್ರೆ ಇಷ್ಟಕ್ಕೆಲ್ಲ ಹಣವಿಲ್ಲದೆ ಆಗುತ್ತೆಯೇ ? ಅದಕ್ಕೇನು ಮಾಡೋದು. ನನ್ನ ಹತ್ತಿರ ಒಂದು ಕಾಸೂ ಇಲ್ಲ.

ಕಾವೇರಿ : ಆ ಚಿಂತೆ ನಿಮಗೆ ಬೇಡ. ಆ ಮುತ್ತಿನ ಸರ ಮಾರಿದ ಹಣದಲ್ಲಿ ಉಳಿದ ಎರಡೂವರೆ ಸಾವಿರ ರೂಪ್ಯಾ ಇನ್ನೂ ಹಾಗೇ ಜೋಪಾನ ವಾಗಿಟ್ಟಿದ್ದೇನೆ.

ಅಪ್ಪಾ : ಯಾವ ಮುತ್ತಿನ ಸರ ?

ಕಾವೇರಿ : ಇದು ಒಳ್ಳೇ ಸಂಗ್ತಿ. ನಿಮ್ಮ ಸತ್ಕಾರದ ದಿನ ನನಗೇಂತ ತಂದಿದ್ದು. ಅಷ್ಟು ಬೇಗ ಮರೆತು ಹೋಯ್ತಾ.

ಅಪ್ಪಾ : ಪರವಾಗಿಲ್ಲ ಕಣೇ. ಆ ಹಣ ಇನ್ನೂ ಉಳಿದಿದೆಯೇ.

ಕಾವೇರಿ : ಹಾಗೇ ಪೆಟ್ಟಿಗೆಯಲ್ಲಿದೆ. ನೀವಷ್ಟು ಪ್ರೀತಿಯಿಂದ ಕೊಟ್ಟ ಉಡು ಗೊರೆ ಮಾರಿ ಬಂದ ಹಣ. ಕಷ್ಟಕಾಲಕ್ಕೆ ಅದೇ ಉಪಯೋಗಕ್ಕೆ ಬೀಳ್ತಾ ಇದೆ.

ಅಪ್ಪಾ : ನೋಡಿದ್ಯಾ, ಅದಕ್ಕೇ ಸರಕಾರ್‌ಂತ ಕರೆಯೋದು ನಿನ್ನನ್ನು. ನಿನ್ನ ಕೈ ಹಿಡಿದಂದಿನಿಂದ ನನಗೇನೂ ಯೋಚನೇನೇ ಇಲ್ಲ. ಎಲ್ಲಾ ಕಾರು ಬಾರು ನೀನೇ ನಡೆಸಿಕೊಂಡು ಬಂದಿದ್ದೀಯಾ. ಅಲ್ಲಾ ಎಷ್ಟೊಂದು ಪ್ರೀತಿ ಕಣೇ ನಿನಗೆ ನನ್ನ ಮೇಲೆ ?

ಕಾವೇರಿ : ಅಂದ್ರೆ ನಿಮಗಿಲ್ವಾ ಪ್ರೀತಿ ನನ್ನ ಮೇಲೆ.

ಅಪ್ಪಾ : ಹಾಗೆಲ್ಲಿ ಹೇಳಿದೆ ನಾನು.

ಕಾವೇರಿ : ಕೆಲವೊಮ್ಮೆ ಮನಸ್ಸಿನಲ್ಲಿದ್ದ ಭಾವನೆ ಮಾತಿನಲ್ಲಿ ಹೇಳೋಕಾಗಲ್ಲ. ನೀವು ಕೋಪಿಸಿಕೊಳ್ಳದಿದ್ರೆ ನಿಮ್ಮನ್ನು ಒಂದು ಪ್ರಶ್ನೆ ಕೇಳ್ಲಾ ?

ಅಪ್ಪಾ : ಒಂದು ಯಾಕೆ ಎರಡು ಕೇಳು.

ಕಾವೇರಿ : ನಿಜವಾಗ್ಲೂ ನೀವು ನನ್ನನ್ನು ಪ್ರೀತಿಸ್ತಾ ಇದ್ರಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಹಾಗಂದ್ರೇನು ಸರಕಾರ್, ಮದುವೆಯಾಗಿ ಐವತ್ತು ವರ್ಷಗಳ ದಾಂಪತ್ಯ ಜೀವನ ದಾಟಿ ಸುವರ್ಣ ಮಹೋತ್ಸವ ಮುಗಿಸಿದ ಮೇಲೂ ನನ್ನ ಮೇಲೆ ಅವಿಶ್ವಾಸವೇ.

ಕಾವೇರಿ : ಹಾಗಲ್ಲ, ಒಂದು ಮಾತಿಗೆ ಕೇಳಿದೆ. ಎಷ್ಟಾದ್ರೂ ನಾಟಕದ ಜನ. ನಾಟಕ ಕಂಪೆನಿಯೇ ನಿಮ್ಮ ಕುಟುಂಬಾಂತ ನಂಬಿದ್ದ ಕಾಲ ಅದು. ನಂಗೆಷ್ಟು ಸವತಿಯರಿದ್ದರೂಂತ ಕೇಳೋಣಾಂತನ್ನಿಸಿತು.

ಅಪ್ಪಾ : ಸವತಿಯರು ! (ನಸುನಕ್ಕು) ಇದ್ದಿರಬಹುದು. ಆದ್ರೆ ಅವರನ್ನೆಲ್ಲಾ ಸವತಿಯರೂಂತ ಯಾಕೆ ಹೇಳ್ತಿ. ಗೆಳತಿಯರೂಂತನ್ನು.

ಕಾವೇರಿ : ನಾನೇನು ಗೆಳತಿಯಾಗಿದ್ದಿರಲಿಲ್ವೇ ?

ಅಪ್ಪಾ : ನೀನು ನನ್ನ ಹೆಂಡ್ತಿ, ಸರಕಾರ್.

ಕಾವೇರಿ : ಯಾಕೆ ಹೆಂಡ್ತಿ ಗೆಳತೀನೂ ಆಗ್ಬಾರ್ದೇನು ?

ಅಪ್ಪಾ : ಆಗ್ಬಾರ್ದೂಂತೇನಿಲ್ಲಾ. ನಿಜವಾಗಿ ನೋಡಿದ್ರೆ ಆಗ್ಬೇಕು. ಆದ್ರೆ ಮದುವೆಯ ಚೌಕಟ್ಟಿನಲ್ಲಿ ಗೆಳತಿ ಗೆಳತಿಯೆಂಬ ಸ್ವಾತಂತ್ರ್ಯವನ್ನು ಇರಿಸಿಕೊಳ್ಳದೆ ಪತ್ನಿಯಾಗ್ತಾಳೆ. ಅದೊಂದು ಸುಂದರವಾದ ಮಹತ್ವದ ವ್ಯತ್ಯಾಸ ಅಷ್ಟೆ. ಸಮಾಜದಲ್ಲಿ ಹೆಂಡತಿಗೆ ಅದೊಂದು ಭದ್ರ ಸ್ಥಾನ. ಹಾಗೆ ನೋಡಿದ್ರೆ ನಾಟಕಗಳಲ್ಲಿ ನಾವೆಷ್ಟೋ ಹೆಂಡಂದಿರಿಗೆ ಗಂಡಾಂತನ್ನಿಸಿಕೊಳ್ತೇವೆ. ಅದು ಕೇವಲ ರಂಗಭೂಮಿಯಲ್ಲಿ ಮಾತ್ರ. Side wing ದಾಟಿತೋ ಅವರೆಲ್ಲ ಗೆಳತಿಯರೇ. ಆ ಗೆರೆ ದಾಟೋ ಹಾಗಿಲ್ಲ.

ಕಾವೇರಿ : ಅಂತೂ ಗೆಳತಿಯರಾದ್ರೂ ನಿಮಗೆ ಇದ್ದದ್ದು ನಿಜ ತಾನೆ !

ಅಪ್ಪಾ : ಇದ್ದಿರಲಿಲ್ಲಾಂದ್ರೆ ಅದು ಸುಳ್ಳು. ಆದ್ರೆ ಈಗ ಈ ಮುದಿ ವಯಸ್ಸಿನಲ್ಲಿ ಆ ವಿಚಾರವಾದ್ರೂ ಯಾಕೆ ಹೇಳು.

ಕಾವೇರಿ : ಅದರಿಂದ ನನಗೇನೂ ಬೇಸರ ಇಲ್ಲ ಬಿಡಿ. ಸುಮ್ಮನೆ ಹೀಗೇ ಕೇಳಿದೆ. ಸಂತೋಷದಿಂದ ಸಂಸಾರಮಾಡಿ ಬದುಕಿದ್ದೇನೆ. ಹಾಯಾಗಿ ಇನ್ನು ಒಂದು ದಿನ ಪ್ರಾಣ ಬಿಟ್ರೆ ಸರಿ.

ಅಪ್ಪಾ : ನನಗಿಂತ ಮೊದಲೇ ಹೋಗ್ತೀಯ ಅಷ್ಟೇನಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾವೇರಿ : ಮುತ್ತೈದೆ ಭಾಗ್ಯ ಕೊಡಪ್ಪಾಂತ ಬೇಡ್ತೇನೆ. ಇನ್ನು ನನ್ನ ಹಣೆಯಲ್ಲೇನು ಬರೆದಿದೆಯೋ ಯಾರಿಗ್ಗೊತ್ತು.

ಅಪ್ಪಾ : ಮತ್ತೆ ನನ್ನ ಗತಿ ? ನಾವೀಗ ಯಾವುದೇ ಸ್ಥಿತಿಯಲ್ಲಿದ್ರೂ ಜತೆಯಾಗಿದ್ದೀವಿ. ಆದ್ರೆ ನೀನು ನನ್ನ ಕೈ ಬಿಟ್ಟು ಹೋದ್ರೆ ನಾನು ಮತಿ ಇಲ್ಲದ ಮಂಗನಾಗ್ತೇನೆ ಅಷ್ಟೆ.

ಕಾವೇರಿ : ಬಿಡಿ ಆ ಮಾತು. ತಮಾಷೆಗಂದೆ ಅಷ್ಟೆ. ಇಷ್ಟು ಬೇಗ ನಾನೆಲ್ಲಿ ಸಾಯಲಿಕ್ಕೆ ಹೊರಟಿದ್ದೀನಿ. ನಾನೂ ಹೋಗೊಲ್ಲ, ನಿಮ್ಮನ್ನೂ ಹೋಗಲಿಕ್ಕೆ ಬಿಡೋದಿಲ್ಲ. ಆದ್ರೆ ಯಾವುದಕ್ಕೂ ಮೊದ್ಲು ತೀರ್ಥಹಳ್ಳಿಗೆ ಹೋಗೋದು ಮಾತ್ರ ಖಂಡಿತ. ತಿಳೀತೇನು ?

ಅಪ್ಪಾ : ಸರಿ. ಸರಕಾರ್ ನಿನ್ನಿಷ್ಟ.

ಕಾವೇರಿ : ಮಾತು ಕೊಡಿ.

ಅಪ್ಪಾ : ಕೊಡ್ಲೇನು ಭಾಷೆ.

[ಕೈ ಮುಂದು ಮಾಡುವನು. ಆಗ ವಿಠಲನ ಪ್ರವೇಶ]

ವಿಠಲ : ಕೊಡು ಭಾಷೆ ನನಗೆ.

[ಅಪ್ಪಾವರನ್ನು ನೋಡಿ ಮಾತನಾಡದೆ ನಿಲ್ಲುವನು. ಅಪ್ಪಾ ಅವನ ಕೈ ತಟ್ಟಿ]

ಅಪ್ಪಾ : ತಗೋ ಭಾಷೆ. ನಾನು ತೀರ್ಥಹಳ್ಳಿಗೆ ಹೋಗೋದು ಖಂಡಿತ.

ವಿಠಲ : ನೀವು ತೀರ್ಥಹಳ್ಳಿಗೆ ಹೋದ್ರೆ, ನಾನು ತೀರ್ಥಯಾತ್ರೆಗೆ ಹೋಗೋದೂ ಖಂಡಿತ.

ಅಪ್ಪಾ : ಹತ್ ಮೂರ್ಖ ! ನೀನ್ಯಾಕೋ ಹೋಗ್ಬೇಕು ತೀರ್ಥಯಾತ್ರೆಗೆ. ಬುದ್ಧಿ ನೆಟ್ಟಗಿದೆ ತಾನೆ ! ಅಥವಾ ನಾಟಕದ ಗುಂಗಿನಲ್ಲಿದ್ದೀಯಾ.

ವಿಠಲ : ಬುದ್ಧಿ ನೆಟ್ಟಗಿದೆ ಸ್ವಾಮಿ ಇಷ್ಟರತನಕ. ಆದ್ರೆ ಇದೇ ಮನೇಲಿ ಇನ್ನೂ ಕಾಲ ಕಳೆದೇಂತಾದ್ರೆ ಹುಚ್ಚು ಹಿಡಿಯುವುದೂ ಖಂಡಿತ. ನೋಡಿ ಅಪ್ಪಾ ಸಾಹೇಬ್ ಪ್ರಮಾಣ ಮಾಡಿ ಹೇಳ್ತೀನಿ ನನ್ನ ಜೀವಮಾನದಲ್ಲಿ ಈ ತನಕ ನಾನು ಕದ್ದದ್ದೇನಾದ್ರೂ ಇದ್ರೆ ಅದು ಬರೇ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಟಕದ ಮಾತುಗಳು. ಇನ್ನಿತರ ಯಾವ ವಸ್ತುಗಳಿಗೂ ಕೈ ಹಾಕಿದವನಲ್ಲ. ಪ್ರಮಾಣ ಮಾಡ್ತೀನಿ. ಆದರೂ ನಂಬಿಕೆ ಇಲ್ಲಾಂದ್ರೆ.

ಅಪ್ಪಾ : ಅಲ್ಲೋ ನೀನು ಕದ್ದಿದ್ದೀಂತ ಯಾರು ಹೇಳಿದ್ರೀಗ ?

ವಿಠಲ : ಕದೀಲಿಲ್ಲಾಂತ್ಲೂ ನಂಬಿಕೆ ಇಲ್ವಲ್ಲಾ (ಹೊರಗೆ ನೋಡಿ) ಅಪ್ಪಾ ಸಾಹೇಬ್ ಅಮ್ಮಾವರು ಬರ್ತಿದ್ದಾರೆ.

[ಮಾಲತಿ ಮತ್ತು ಸುಧಾಕರರ ಪ್ರವೇಶ]

ಮಾಲತಿ: ವಿಠಲಾ ಇಲ್ಲೇನೋ ಕೆಲ್ಸ ನಿಂಗೆ ? ಹರಟೆ ಹೊಡೀತಾ ಇದ್ದೀಯಾ ಇಲ್ಲಿ ? Laundryಗೆ ಹೋಗಿ ಸಾಹೇಬ್ರ ಬಟ್ಟೆ ತಗೊಂಡು ಬಾ.

ವಿಠಲ : ಆಗಲೀಮ್ಮಾ. ಈಗ್ಲೇ ತರ್ತೀನಿ.

[ಹೋಗುವನು]

[ಕಾವೇರಿ ಎದ್ದು ಕುಳಿತುಕೊಳ್ಳಲು ಪ್ರಯತ್ನಿಸುವಳು. ಆಗ ಸುಧಾಕರ]

ಸುಧಾಕರ: ಹಾಂ, ಹಾಂ. ಏಳ್ಬೇಡಿ ನೀವು ಮಲಗಿದ್ದಲ್ಲೇ ಇರ್ಬೇಕೂಂತ doctorರ ಅಪ್ಪಣೆಯಾಗಿದೆ.

ಅಪ್ಪಾ : ಎಷ್ಟು ದಿವಸಗಳಾಯ್ತಪ್ಪಾ ನಿಮ್ಮನ್ನು ನೋಡಿ. ಇದೇನಮ್ಮಾ ನಿನಗೂ ಒಮ್ಮೆ ಬಂದು ಹೋಗ್ಬಾರ್ದಿತ್ತೇನು ?

ಮಾಲತಿ: ನನ್ನ ಅವಸ್ಥೆ ಏನು ಹೇಳೋದಪ್ಪಾ. ದಿನಾ ಒಂದಲ್ಲ ಒಂದು ಏನಾದ್ರೂ ಕೆಲಸ. ಪ್ರತಿದಿನ ಒಬ್ರಲ್ಲ ಒಬ್ರಿಗೆ ಡಿನ್ನರ್ ಲಂಚ್ ಅಂತ ಕಳೆದ ಒಂದು ವಾರ ಹೀಗೇ ಹೋಯ್ತು. ಒಂದಿಷ್ಟೂ ಬಿಡುವು ಸಿಕ್ಲಿಲ್ಲ. ಯೋಚನೆ ಮಾಡೋದಕ್ಕೂ ಪುರುಸೊತ್ತಿಲ್ಲ. ಸುಸ್ತಾಗಿ ಬಿಟ್ಟೆ. (ಕಪಾಟಿನತ್ತ ಹೋಗಿ ಬಾಗಿಲು ತೆರೆದು) ಅಪ್ಪಾ ಇಲ್ಲೆಲ್ಲಾದ್ರೂ (ಹುಡುಕುವಳು).

ಅಪ್ಪಾ : ಅದೇನಮ್ಮಾ ಹುಡುಕ್ತಾ ಇದ್ದಿ ? ಏನಾದ್ರೂ ಬೇಕಿತ್ತೇನು. ನಮ್ಮ ಹರಕು ಮುರುಕು ಸಾಮಾನುಗಳನ್ನು ಮುಟ್ಟಿದ್ರೆ ನಿನ್ನ ಮೈಯೆಲ್ಲಾ ಧೂಳು ತುಂಬೀತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಲತಿ: ಬೆಳಗ್ಗಿನಿಂದ ಒಂದು ಸೂಜಿ ಹುಡುಕ್ತಾ ಇದ್ದೇನೆ. ಮನೆಯೆಲ್ಲಾ ಹುಡುಕಿದ್ರೂ ಸಿಕ್ತಾ ಇಲ್ಲ. ಅಲ್ಲದೆ ನಾವಿಬ್ರೂ ಬೆಂಗಳೂರಿಗೆ ಹೋಗ್ಬೇಕೂಂತಿದ್ದೇವೆ. ಅದನ್ನೂ ತಿಳಿಸೋಣಾಂತ ಬಂದೆ.

ಅಪ್ಪಾ : ಬಹಳ ಸಂತೋಷ. ವಾಪಾಸ್ ಯಾವಾಗ ಬರ್‍ತೀರಿ.

ಸುಧಾಕರ: ಬರೇ ಎರಡು ದಿನಕ್ಕೋಸ್ಕರ ಹೋಗೋದು. Officeನ ಒಂದು Meeting ಇದೆ. ಹೇಗೂ ಕಂಪೆನಿ ಕಾರಲ್ಲಿ ಹೋಗೋದು. ಒಟ್ಟಿಗೆ ಹೋಗೋಣಾಂತ ಅವಳಿಗೂ ಹೇಳಿದೆ.

ಅಪ್ಪಾ : ಹೌದಮ್ಮಾ ಹೋಗಿ ಬಾ. ವಿಠಲ ಇಲ್ಲಿರ್‍ತಾನಲ್ಲಾ.

ಮಾಲತಿ: ಅವನೆಲ್ಲಿ ಹೋಗ್ತಾನೆ. ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಬೇಕೂಂತ ಅವನಿಗೆ ಆಗಲೇ ಹೇಳಿಟ್ಟಿದ್ದೇನೆ.

ಅಪ್ಪಾ : ಸರಿ. ಅಂದ ಹಾಗೆ ನೀವಿಲ್ಲಾದಾಗ ನಿಮ್ಮ ಮನೆ ಒಳಗೆ ನಾವು ಹೋಗ ಬಹುದಲ್ಲಾ ?

ಮಾಲತಿ: ಯಾಕಪ್ಪಾ ಇಂಥ ಪ್ರಶ್ನೆ ಕೇಳ್ತೀರಿ. ಮನೆಯೊಳಗೆ ಬರ್‍ಲಿಕ್ಕೆ ಅಡ್ಡಿ ಯಾರು ಮಾಡಿದ್ದಾರೆ. ಇವತ್ತೂ ಮಧ್ಯಾಹ್ನ ನೀವು ಬಂದಿದ್ರಲ್ಲಾ.

ಅಪ್ಪಾ : ಹಾಗಲ್ಲ ನೀವು ಇದ್ದಾಗ ಆ ವಿಚಾರ ಬೇರೆ. ಹಾಗೆ ಪ್ರತೀದಿನ ಬೆಳಗ್ಗೆ ನಾನು paper ಓದೋದಕ್ಕೆ ಬರೋದಿಲ್ವೇ ?

ಮಾಲತಿ: ಅಪ್ಪಾ, ಇವತ್ತು ನೀವು ಬಂದಾಗ ಬೇರೆ ಯಾರಾದ್ರೂ ಮನೆಗೆ ಬಂದದ್ದು ಕಂಡಿದ್ದಿರೇನು ?

ಅಪ್ಪಾ : ನನಗೆ ನೆನಪಿಲ್ಲಾ ಮಗೂ. ನಾನು paper ಓದುತ್ತಾ ಕೂತ್ರೆ ಕಳ್ಳರು ಮನೆಯೊಳಗೆ ನುಗ್ಗಿದ್ರೂ ನನಗೆ ಗೊತ್ತಾಗೋ ಹಾಗಿಲ್ಲ.

ಮಾಲತಿ: ಅಮ್ಮಾ, ನಾನು ನಿನ್ನೆ ಸೀರೆ ಕಳುಹಿಸಿದಾಗ ಸೂಜಿ packet ಅದರ ಜತೇನೇ ಬಂದಿರಬೇಕು. ಬೀಗದ ಕೈ ಕೊಡಮ್ಮಾ. ನಿನ್ನ ಪೆಟ್ಟಿಗೆ ನೋಡ್ತೀನಿ.

ಅಪ್ಪಾ : ಅದಕ್ಕೆ ಬೀಗ ಹಾಕಲೇ ಇಲ್ಲ. ಅಲ್ಲೇ ಮಂಚದಡಿ ಇದೆ. ಅದನ್ನ ಹೊರಗೆ ಎಳೆದು ಕೊಡ್ತೀನಿ ತಾಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಲತಿ: ಬೇಡಪ್ಪಾ ನಾನೇ ನೋಡ್ತೀನಿ. (ಮಂಚದ ಕೆಳಗೆ ಕುಳಿತು ಬಾಗಿಲು ತೆರೆದು ಹುಡುಕುವಳು)

ಸುಧಾಕರ: ಸಾಕು, ಸುಮ್ಮನಿರು ಮಾಲತಿ. ಅಲ್ಲೇನಿರಲಿಕ್ಕಿಲ್ಲ ಬಹುಶಃ......

ಮಾಲತಿ: (ಸ್ವಲ್ಪ ಸಿಟ್ಟಿನಿಂದ) ಸಂಶಯ ಯಾಕೆ ? ಸರಿಯಾಗಿ ನೋಡಿ ಖಂಡಿತ ಮಾಡಿಕೊಂಡ್ರೆ ಆಯ್ತಲ್ಲಾ.

ಅಪ್ಪಾ : ಅವಳು ಹೇಳೋದೂ ಸರಿ. ಸಂಶಯಾತ್ಮಾ ವಿನಶ್ಯತೀ ಅಂತ. ಸರಿಯಾಗಿ ಖಾತ್ರಿ ಮಾಡಿಕೊಳ್ಳೋದು ಅವಶ್ಯ. ನೋಡು ಸುಧಾಕರ್, ಅವಳ ಸ್ವಭಾವ ಮೊದಲಿನಿಂದ್ಲೂ ಹಾಗೇನೇ. ಏನಾದರೊಂದು ಕಳೆದುಹೋಯ್ತೊ ಮನಸ್ಸಿಗೆ ಸಮಾಧಾನವೇ ಇಲ್ಲ. ಅದು ಸಿಗೋ ತನಕ.

ಮಾಲತಿ: (ಪೆಟ್ಟಿಗೆ ಹಾಗೇ ಒಳಗೆ ತೂರಿಬಿಟ್ಟು) ಇಲ್ಲ, ಸೂಜಿ ಕಾಣೋದಿಲ್ಲ. ಬನ್ನಿ ಹೋಗೋಣ.

ಅಪ್ಪಾ : ಅವಸರ ಏನಮ್ಮಾ ಕೂತ್ಕೋ. ಆ ಒಂದು ಸೂಜಿಗಾಗಿ ಇಷ್ಟೊಂದು ಪೇಚಾಟ ಯಾಕೆ ?

ಮಾಲತಿ: ಇಲ್ಲಪ್ಪ. ಎಲ್ಲಿಗೋ ಹೋಗಬೇಕೂಂತಿತ್ತು. ಅವರ ಶರ್ಟಿನ ಬಟನ್ ಹೊಲಿಯೋದಿಕ್ಕೆ ಸೂಜಿ ಬೇಕಾಗಿತ್ತು. ಇಲ್ಲೇನಾದ್ರೂ ಇದೆಯೋ ನೋಡೋಣಾಂತ ಬಂದೆ. ಆಮೇಲೆ ಪುನಃ ಬರ್ತೀನಿ.

[ಮಾಲತಿ–ಸುಧಾಕರ ಹೋಗುವರು]

ಅಪ್ಪಾ : ಒಂದು ಸೂಜಿ ಕಳೆದುಕೊಂಡ್ರೆ ಯಾಕಿಷ್ಟೊಂದು ಹುಡುಕಾಟ ? ಕಾರಿದೆ, ಡ್ರೈವರಿದ್ದಾನೆ–ಹೊಸ ಸೂಜಿ ತರಿಸಿಕೊಳ್ಳೋದು ಕಷ್ಟವೇ.

ಕಾವೇರಿ : ಹಾಂ ಸರಿ. ನಿಮಗೇನು ಗೊತ್ತು. ಹೆಂಗಸರೂಂದ್ರೆ ಹಾಗೇನೇ. ಸೂಜಿ ಕಳಕೊಂಡ್ರೂ ಸಂತಾಪ. ಗಂಡಸರಿಗೆ ಅದೆಲ್ಲ ತಿಳಿಯೋದಿಲ್ಲ. ನೋಡೀಂದ್ರೆ ಚಳಿಗಾಳಿ ಬೀಸತೊಡಗಿದೇಂತ ಕಾಣುತ್ತೆ ಕಂಬಳಿ ಸ್ವಲ್ಪ ಕೊಡ್ತೀರಾ.

ಅಪ್ಪಾ : ಮಲಗು ಸರಕಾರ್. ನಾನೇ ಕಂಬಳಿ ಹೊದಿಸ್ತೀನಿ.

ಕಾವೇರಿ : ನೀವ್ಯ ಆ ಸ್ವೆಟರ್ ಹಾಕ್ಕೊಳ್ಳಿ. ಇಲ್ಲಾಂದ್ರೆ ಚಳಿಯಾದೀತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಆ ಸ್ವೆಟ್ಟರಿಗೆ ನಮ್ಮ ಮಾಧುವಿನಷ್ಟು ವರ್ಷವಾಗಿರಬೇಕು. ಪೂರ್ತಿ ಹರಿದು ಹೋಗಿದೆ. ಅದನ್ನ ಹಾಕ್ಕೊಂಡ್ರೂ ಚಳಿ ಹೋಗ್ಲಿಕ್ಕಿಲ್ಲ. ಅದರ ಬದಲು ನಾನೂ ಇಲ್ಲೇ ನಿನ್ನ ಪಕ್ಕದಲ್ಲಿ ಮಲಗಿಕೊಳ್ತೀನಿ. ಇಬ್ಬರಿಗೂ ಒಂದೇ ಕಂಬಳಿ ಸಾಕು.

ಕಾವೇರಿ : ಶೀ...ಇದೇನಿದು. ಹುಡುಗಾಟ ಈ ವಯಸ್ಸಿನಲ್ಲಿ.

ಅಪ್ಪಾ : ಅಲ್ಲ ಕಾವೂ, ಚಳಿ ನನಗೂ ಆಗೋದಿಲ್ವೇ ? ವಯಸ್ಸು ಇಳಿದ ಹಾಗೇ ರಕ್ತದ ಕಾವೂ ಕಡಿಮೆಯಾದಂತೆ ಚಳಿ ಹೆಚ್ಚಾಗುತ್ತೆ. ನಾನಾದ್ರೂ ಏನು ಮಾಡ್ಲಿ ?

ಕಾವೇರಿ : ಊರಿಗೆ ಹೋದ ಮೇಲೆ ನಿಮಗೊಂದು ಸ್ವೆಟ್ಟರ್ ಸ್ವತಃ ನಾನೇ ಹೊಲ್ದುಕೊಡ್ತೀನಿ.

ಅಪ್ಪಾ : ವ್ಹಾರೆವ್ಹಾ. ಕೊಡುಭಾಷೆ ನನ್ನ ಮಡದಿಯೇ (ಕೈ ಮುಂದೆ ಮಾಡುವನು. ಅಷ್ಟರೊಳಗೆ ಏನೋ ನೆನಪಾದಂತೆ) ಹಾಗಲ್ಲ (ನಾಟ್ಯಾಭಿನಯದ ಆವೇಶದಲ್ಲಿ) ನಲ್ಲೇ ! ಇನಿಯನ ಚಳಿಯಿಂ ಸಲಹುವರೆ ಸ್ವೆಟ್ಟರ್ ನೇಯ್ವುದು ನಿನ್ನ ಕರ್ತವ್ಯಮಲ್ತೆ. ಕೊಡುಭಾಷೆ ಪ್ರಿಯತಮೆ.

[ವಿಠಲನ ಪ್ರವೇಶ]

ವಿಠಲ : ಶಾಭಾಸ್...ಶಾಭಾಸ್. ನಟಸಾರ್ವಭೌಮರಿಗೆ ನಮೋ ನಮಃ ಶಿವಪೂಜೆಯಲ್ಲಿ ಕರಡಿ ಬಂದ ಹಾಗೆ ಬಂದೆ ಕ್ಷಮಿಸಿ.

ಅಪ್ಪಾ : ಯಾರೋ ನಿನ್ನನ್ನು ಒಳಗೆ ಬರಲಿಕ್ಕೆ ಹೇಳಿದ್ದು, ಅದೂ ನಟಸಾರ್ವಭೌಮರು ಶೃಂಗಾರಾಭಿನಯದ ಭಂಗಿಯಲ್ಲಿರುವಾಗ.

ವಿಠಲ : ಕ್ಷಮಿಸಿ ಅಪ್ಪಾ ಸಾಹೇಬ್ ನಾಟಕಕಾರರಿಗೆ ವೇಳೆಯ ಬಂಧನವೇ ಇಲ್ಲಾಂತ ನೀವೇ ಹೇಳಿದ್ದೀರಿ ತಾನೆ ! ಸತ್ಯ ಹೇಳ್ತೀನೆ ಅಪ್ಪಾ ಸಾಹೇಬ್. ತಮ್ಮ ಅಭಿನಯ ಕೌಶಲ್ಯದ Sample ನೋಡಿದ ನಾನು ಇದೇ ರೀತಿ copy ಮಾಡಿದ್ರೆ ನನಗೆ ತಾಮ್ರಕಮಲ ಬಹುಮಾನ ಸಿಗುವುದರಲ್ಲಿ ಸಂದೇಹವೇ ಇಲ್ಲ. ತಗೊಳ್ಳಿ ತಮ್ಮ ಬಟ್ಟೆ ಲೋಂಡ್ರಿಯಿಂದ ಇಸ್ತ್ರಿಯಾಗಿ ಬಂದಿರುವುದು. ಗುರುಗಳ ಚರಣಾರವಿಂದಗಳಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಪ್ಪಿಸಿ ಕೃತಾರ್ಥನಾದೆ. (ಉದ್ದಂಡ ನಮಸ್ಕಾರ ಮಾಡುವನು) ಹೋಗಲು ಅಪ್ಪಣೆಯಾಗಲಿ.

ಅಪ್ಪಾ : (ತಲೆ ಮುಟ್ಟಿ ಪರೀಕ್ಷಿಸುತ್ತಾ) ತಲೆಗೇರಿದ್ದು ಇಳಿಯಿತೇನು ? ಎಷ್ಟು ಬಾಟ್ಲಿ ತಗೊಂಡಿದ್ದಿ ?

ವಿಠಲ : ಇಲ್ಲ ಸ್ವಾಮಿ. ಪ್ರಮಾಣವಾಗಿ ಕುಡಿದಿಲ್ಲ. ಅಂದ್ಮೇಲೆ ಇಳಿಯುವ ಪ್ರಶ್ನೆ ಎಲ್ಲಿದೆ. (ಕಪಾಟಿನಲ್ಲಿ ವಸ್ತ್ರವಿಡುತ್ತಾ) ಆದ್ರೆ ತಲೆಗೇರಿದ್ದು ನಿಜ. ಕಳ್ಳತನದ ಆರೋಪದಿಂದ ಸಿಟ್ಟು ನೆತ್ತಿಗೇರಿತ್ತು. ಈಗ ಕತ್ತಿಗೆ ಬಂತು.

ಅಪ್ಪಾ : ಕಳ್ಳತನದ ಆರೋಪ ? ಯಾರ ಮೇಲೆ.

ವಿಠಲ : ಸದ್ಯಕ್ಕೆ ನನ್ನ ಮೇಲೆ. ನಾನಲ್ಲಾಂತ ರುಜುವಾತಾದ್ರೆ ಇನ್ನಾರ ಮೇಲಾದ್ರೂ. ಅಂತೂ ಮನೆಯಲ್ಲಿ ಕಳವಾದ್ರೆ ಮನೆಯವರ ಮೇಲೇನೇ ಆರೋಪ ಮಾಡಿದ್ರೆ ಚೆನ್ನಾಗಿರುತ್ತೆಯೇ.

ಅಪ್ಪಾ : ಎಲ್ಲಿ ಕಳವಾಯ್ತು, ಏನು ಕಳವಾಯ್ತು. ಸರಿಯಾಗಿ ಬಿಡಿಸಿಹೇಳು ಮೂರ್ಖ.

ಕಾವೇರಿ : ಸೂಜಿ ಬಿಸಾಡಿ ಹೋಯ್ತೂಂತ ಮಾಲತಿ ಬಡಬಡಿಸ್ತಾ ಇರ್ಲಿಲ್ವೇ? ಅದೇ ದೊಡ್ಡ ಕೇಸಾಗಿರ್ಬೇಕು.

ವಿಠಲ : ಸೂಜಿಯಲ್ಲವಮ್ಮಾ. ಆ ನೆಪ ಹಿಡ್ಕೊಂಡು ಬೇರೇನೋ ಹುಡುಕ್ತಾ ಇದ್ದಿರ್ಬೇಕು. ಇವತ್ತು ಸಾಹೇಬ್ರು ಸಂಬಳ ಸಮೇತ ಪಾಕೀಟು ನಾಪತ್ತೆಯಾಗಿದೆಯಂತೆ. ಹೊ...ತಪ್ಪಾಯ್ತು ದೊಡ್ಡಮ್ಮಾ (ತಪ್ಪಿ ತಸ್ತನಂತೆ) ತಪ್ಪಾಯ್ತು. ಯಾರಿಗೂ ಹೇಳ್ಬಾರ್ದೂಂತ ಕಟ್ಟಪ್ಪಣೆ ಆಗಿದೆ. ಆದ್ರೂ ನಿಮ್ಮಲ್ಲಿ ಮುಚ್ಚುಮರೆ ಮಾಡೋದಿಕ್ಕೆ ಹೇಗೆ ಸಾಧ್ಯ ? ದಯಮಾಡಿ ನಾನು ಹೇಳಿದ್ದೂಂತ ಮಾತ್ರ ಹೇಳ್ಬೇಡಿ.

ಅಪ್ಪಾ :
ಕಾವೇರಿ : } ನೀನು ಹೇಳೋದೇನು ವಿಠಲಾ? ಹಣದ ಪಾಕೀಟು ನಾಪತ್ತೆ ಅಂದ್ರೆ.

ವಿಠಲ : ನಾಪತ್ತೆ ಅಂದ್ರೆ ಕಾ...ಣೆ ಹೂಂ. ಸಾಹೇಬ್ರು ಮಧ್ಯಾಹ್ನ ಊಟಕ್ಕೆ ಬಂದಾಗ **Godrej** ಕಪಾಟಿನಲ್ಲಿಟ್ಟಿದ್ದರಂತೆ ಹಣವನ್ನ...ಸಂಜೆ ನೋಡಿದ್ರೆ **wholesale** ಇಡೀ ಪಾಕೀಟೇ ಗುಳುಂಕ್.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಹಾಗಂದ್ರೆ.

ವಿಠಲ : ಹಾಗಂದ್ರೆ (ಕೈಸನ್ನೆಯಿಂದ) ಸ್ವಾಹಾ......ಇಡೀ ಮನೆ ನೋಡಿ ಯಾಯ್ತು. ನನ್ನ ಶರ್ಟ್ಸ್, ಬಟ್ಟೆ, ಹರಕು ಚೀಲ, ಎಲ್ಲಾ ಹುಡುಕಿ ಯಾಯ್ತು. ಅತ್ತ driver ನಿಗೂ ದಂ ದಾಟಿ ಕೊಟ್ಟಾಯ್ತು. ಎಲ್ಲೂ ಇಲ್ಲ. ಕೊನೆಗೆ ಇಲ್ಲೂ ಬಂದಾಯ್ತು. ಇಲ್ಲಿಯೂ ಶೋಧನೆ ಯಾಯ್ತು ಅರ್ಥವಾಗ್ಲಿಲ್ವೆ ? ಅದಕ್ಕೇ ನಿಮಗೆ ಹೇಳೋದಿಕ್ಕೆ ಬಂದದ್ದು ತೀರ್ಥಹಳ್ಳಿಗೆ ಹೊರಡ್ತೇವೇಂತ ಹೊರಟ್ರೆ ನಿಮ್ಮ ಮೇಲೇನೇ ಆರೋಪ ಬಿದ್ರೂ ಬೀಳಬಹುದೂಂತ.

[ಹೋಗುವನು]

[ಅಪ್ಪಾ "ಹಾಂ" ಎಂದು ಗಾಬರಿಯಾಗಿ ನಿಂತಲ್ಲೇ ಕುಳಿತು ಕೊಂಡು ಆಶ್ಚರ್ಯದಿಂದ ಮತ್ತು ಕೋಪದಿಂದ ಎಲ್ಲೋ ನೋಡಿ ಕೊಂಡಿರುವನು.]

ಕಾವೇರಿ : ಅಲ್ಲಾ. ಎಷ್ಟು ಅಲಕ್ಷ್ಯಾಂತೀನಿ. ಹಣವಿದ್ದ ಕಪಾಟಿಗೆ ಬೀಗ ಹಾಕ್ಲಿಕ್ಕೆ ಮರೆಯೋದೇ. ಯಾರು ಅಷ್ಟು ಬೇಗ ಕದ್ದುಕೊಂಡು ಹೋದರೋ ಏನೋ. ಮಾಲತಿಗೆಷ್ಟು ಅಜಾಗ್ರತೆ ! ಇಷ್ಟೂ ಬುದ್ಧಿ ಇಲ್ಲಾಂದ್ರೆ !!

ಅಪ್ಪಾ : (ಒಂದು ರೀತಿಯ ಗಾಂಭೀರ್ಯದಿಂದ) ಬುದ್ಧಿ ನಮಗೇ ಇಲ್ಲ ಸರ ಕಾರ್. ಸೂಜಿ ನೆಪ ಮಾಡಿ ನಮ್ಮ ಕೋಣೆಯಲ್ಲಿದ್ದ ಪೆಟ್ಟಿಗೆಯನ್ನು ಅವಳು ಶೋಧನೆ ಮಾಡಿದಾಗ ಅರ್ಥವಾಗದೆ ಇದ್ದದ್ದಕ್ಕೆ ನಮಗೆ ಬುದ್ಧಿ ಇಲ್ಲಾಂತನ್ನಬೇಕು. ನಾನೇ ಕಳ್ಳ. ನನ್ನ ಮೇಲೆಯೇ ಕಳ್ಳ ತನದ ಆಪಾದನೆ. ಈಗಲಾದ್ರೂ ಅರ್ಥವಾಯ್ತೋ ಸರಕಾರ್. ನಾವು ಬದುಕಿದ್ದೂ ಸತ್ತಂತೆಯೇ. (ಭಾವೋದ್ವೇಗದಿಂದ) ಇದನ್ನೂ ಸಹಿಸಿ ಕೊಂಡಿರಬೇಕೇ.

ಕಾವೇರಿ : ನೀವು ಸುಮ್ಮನೆ ಏನೇನೋ ತಪ್ಪು ತಿಳ್ಕೊಳ್ತಾ ಇದ್ದೀರಿ. ಅವಳೇನು ಹೇಳಿದ್ಳೊ, ಇವನೇನು ತಿಳಕೊಂಡಿದ್ದಾನೋ.

[ಮಾಲತಿ woollen rug ಹಿಡಿದುಕೊಂಡು ಬರುವಳು. ಅವ ಳನ್ನು ಕಂಡು ಇಬ್ಬರೂ ಸ್ತಬ್ಧರಾಗುವರು.]

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಲತಿ: ಚಳಿ ಹೆಚ್ಚಾಗಿದೆ ಈ ಹೊದಿಕೆ ತಗೋಮ್ಮಾ. ನಾನೇ ಹೊದಿಸ್ಲೇ.

ಕಾವೇರಿ : ಬೇಡ ಅಲ್ಲಿಡು. ನಾನೇ ಬೇಕಾದಾಗ ಹಾಕ್ಕೊಳ್ತೇನೆ.

[ಮಾಲತಿ ಹೊರಡಲನುವಾಗುವಳು]

ಅಪ್ಪಾ : (ಕುರ್ಚಿಯಿಂದ ಎದ್ದು ಭಾವೋದ್ರೇಕದಿಂದ) ಮಾಲತಿ ! ನಾನು, ನಿನ್ನಪ್ಪ ಕಳ್ಳತನ ಮಾಡಿರಬಹುದೇನೋ ಎಂಬ ಸಂಶಯ ನಿಜವಾಗ್ಲೂ ನಿನಗಿದೆಯೇನು ?

[ಗಂಭೀರತೆಯಿಂದ ಹೌದು ಎಂಬಂತೆ ತಲೆ ಅಲ್ಲಾಡಿಸುವಳು]

ಕಾವೇರಿ : (ದನಿಯೇರಿಸಿ) ಮಾಲತೀ !

ಅಪ್ಪಾ : ಅದಕ್ಕಾಗಿಯೇ ನೀನು ನಮ್ಮ ಕಪಾಟು, ಪೆಟ್ಟಿಗೆ ಶೋಧನೆ ಮಾಡಿದ್ದೇನು ?

ಮಾಲತಿ: ಹೌದು.

ಅಪ್ಪಾ : ಇದು ಹೀಗಾಗೋದಕ್ಕೆ ಸಾಧ್ಯವಿಲ್ಲ. ನನ್ನ ಪುಟ್ಟಮರೀ, ಅಲ್ಲಾಂತ ಹೇಳು ಮಗೂ. ನೀನು ಸುಳ್ಳು ಹೇಳಿದ್ರೂ ಪರವಾಗಿಲ್ಲ ಆದ್ರೆ ಅಲ್ಲಾಂತ ಹೇಳು. ಇದನ್ನ ನನಗೆ ಸಹಿಸೋದಿಕ್ಕೆ ಅಸಾಧ್ಯ. ನೀನು ಸುಳ್ಳೇ ಹೇಳು... ಆದ್ರೆ ಅಲ್ಲಾಂತ ಹೇಳು...

ಮಾಲತಿ: ನನಗೆ ಒಳಗೊಂದು ಹೊರಗೊಂದು ಮಾತಾಡೋ ಅಭ್ಯಾಸ ಇಲ್ಲಪ್ಪಾ.

ಅಪ್ಪಾ : (ಗಂಭೀರವಾಗಿ, ಕೋಪದಿಂದ) ಮಾಲತೀ ನಿಜವಾಗ್ಲೂ ನಿನಗೆ ನಾನು ಕದ್ದಿರಬಹುದೂಂತ ಅನ್ನಿಸುತ್ತೇನು ?

ಮಾಲತಿ: ಅಪ್ಪಾ ನಾನು ನಿಮ್ಮ ಮಗಳಾಗಿರಬಹುದು. ಈ ಹಣ ನನ್ನದಲ್ಲ. ನನ್ನ ಯಜಮಾನರದ್ದು. ಅವರ ಸಂಬಳ ಅದು. ನಿಮಗೆ ಹಣ ಬೇಕಿದ್ರೆ ನನ್ನ ಹತ್ತಿರ ಕೇಳ್ಬಹುದಿತ್ತು. ಆದ್ರೆ ಈ ರೀತಿ ಕಳ್ಳತನ ಮಾಡಿ ನನಗೂ ನಿಮ್ಮ ವಂಶಕ್ಕೂ ಕಳಂಕ ತರಬೇಕಾಗಿತ್ತೇ.

ಅಪ್ಪಾ : ಪಾಪಿ. ನಾನು ಕಳ್ಳಾಂತ ಹೇಳ್ತಾ ಇದ್ದೀಯಾ (ಸಿಟ್ಟಿನಿಂದ) ಚಾಂಡಾಲಿನೀ...

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾವೇರಿ : ನೋಡೀಂದ್ರೆ ನನ್ಮಾತು ಕೇಳಿ. ನಿಮ್ಮದೇ ಮಗುವಿಗೆ ಈ ರೀತಿ ಬೈಯಬಾರದು. ದಯಮಾಡಿ ಕೋಪಿಸಿಕೊಳ್ಬೇಡಿ.

ಅಪ್ಪಾ : ಏಕೆ ? ಸುಳ್ಳು ಹೇಳಿ ಕಳ್ಳಾಂತ ಬೆರಳು ತೋರಿಸಿದ ಈ ಅವಿವೇಕಿಯ ಮೇಲೆ ನಾನು ಕೋಪಿಸಿಕೊಳ್ಳಬಾರದೇಕೆ ? ನಾವಿಲ್ಲಿ ಅವಳ ಹಂಗಿನಲ್ಲಿ ಬದುಕಿಕೊಂಡಿದ್ದ ಮಾತ್ರಕ್ಕೆ ಕಳ್ಳತನ ಮಾಡಿದ್ದೇವೆಂಬ ಆರೋಪವನ್ನೂ ಸುಳ್ಳು ಸುಳ್ಳಾಗಿ ಒಪ್ಪಿಕೊಳ್ಳಬೇಕೇನು ? ನಿರ್ಗತಿಕನಾದ ಮಾತ್ರಕ್ಕೆ ಈ ನಿರ್ಲಜ್ಜ ಹೆಣ್ಣಿನ ಕಾಲಿಗೆ ಬಿದ್ದು ನಿರ್ದೋಷೀಂತ ಮೊರೆ ಇಡಲೇನು ? ಇಂಥ ಬಾಳ್ವೆಗಿಂತ ಸಾಯುವುದೇ ಲೇಸು. ಆದರೆ ನಾನು ಸಾಯಲಾರೆ. ಸಾಯಲೇ ಬೇಕಾದ್ರೂ ಸತ್ಯದ ಕೊಲೆ ಮಾಡಿ ಸಾಯಲಾರೆ. ಸುಳ್ಳಿನ ಅಪವಾದ ಹೊತ್ತು ಮರಣ ಹೊಂದಲಾರೆ. ಸತ್ಯವೆಂದೂ ಕಹಿಯಾಗಿದ್ದರೂ ಆ ಕಹಿಯನ್ನೇ ಅಮೃತವೆಂದು ಸೇವಿಸಿದ್ದ ನಾನಿಂದು ಅಸತ್ಯದ ಅಟ್ಟಹಾಸಕ್ಕೆ ಬಲಿಯಾಗಲಾರೆ. ಚಾಂಡಾಲಿನೀ ನಿನಗಷ್ಟೊಂದು ಧೈರ್ಯವಿದ್ದರೆ ಹೇಳು ? ಆದರೆ ನನ್ನ ಮುಖ ನೋಡಿ ಹೇಳು. ಕಳೆದು ಹೋದ ನಿನ್ನ ಗಂಡನ ಹಣದ ಚೀಲವನ್ನು ನಾನು ಅಪಹರಿಸಿದೆನೆಂಬ ಸಂಶಯ ನಿನಗೆ, ನಿಜವಾಗಿಯೂ ಇದೆಯೇನು ?

ಮಾಲತಿ: (ಮುಖ ನೋಡಲಿಕ್ಕಾಗದೆ) ಹೌದು. ನೀವೇ ಆ ಕೆಲಸ ಮಾಡಿರಬೇಕು. ಅದಕ್ಕೆ ಕಳ್ಳತನಾಂತನ್ನಿ ಬೇರೇನಾದ್ರೂ ಅನ್ನಿ.

[ಹೋಗುವಳು]

[ಕಾವೇರಿ 'ಮಾಲತಿ ! ಮಾಲತಿ' ಎನ್ನುತ್ತ ಏಳಲು ಪ್ರಯತ್ನಿಸುವಳು. ಅಪ್ಪಾ ಕೊರಡಿನಂತೆ ನಿಂತಿರುವನು. ತುಸುಹೊತ್ತು ಶಾಂತ ವಾತಾವರಣ. ಆಮೇಲೆ ಕಾವೇರಿ ನಿಧಾನವಾಗಿ ಒದ್ದಾಡುತ್ತಾ ಕುಂಟುತ್ತಾ ಅಪ್ಪನನ್ನು ಸಮಾಧಾನ ಮಾಡಲೆಂದು ಬರುವಳು.]

ಅಪ್ಪಾ : (ಕಳಕಳಿಯಿಂದ) ನಾನು ಕಳ್ಳ (ಎದೆ ಬಡಿದುಕೊಳ್ಳುತ್ತಾ) ನಾನು ಮೋಸಗಾರ. ಕಲೆಯನ್ನೇ ಆದರ್ಶವಾಗಿಟ್ಟುಕೊಂಡು ಲಕ್ಷಾಂತರ ಹೃದಯಗಳನ್ನು ಗೆದ್ದ ಈ ನಟ ಸಾಮ್ರಾಟ ಕೇಶವರಾವ್ ಜೋಶಿ ಇಂದು ಅವನ ಮಗಳಿಂದಲೇ ಕಳ್ಳಾಂತನ್ನಿಸಿಕೊಂಡ. ಪರಮೇಶ್ವರಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಇನ್ನೂ ನಾನು ಬದುಕಬೇಕೂಂತಿದ್ರೆ ಈ ಅವಮಾನವನ್ನು ಸಹಿಸುವ ತ್ರಾಣವನ್ನಾದ್ರೂ ದಯಪಾಲಿಸು. ಈ ರೀತಿ ಅನ್ಯಾಯವಾಗಿ ಹೊರಿಸಿದ ಅಪವಾದವನ್ನು ಹೇಗೆ ತಡೆದುಕೊಳ್ಳಲಿ ಸರಕಾರ್...

ಕಾವೇರಿ : ನಾನು ಹೇಳೋದನ್ನಿಷ್ಟು ಕೇಳ್ತೀರಾ.

ಅಪ್ಪಾ : ಅದೊಂದೇ ದಾರಿ ನನಗುಳಿದಿರೋದು. ಬೇರೆ ದಾರೀನೇ ಇಲ್ಲ. ನೀನು ಹೇಳೋದನ್ನು ಕೇಳೋದೊಂದೇ...ಹೇಳು ಸರಕಾರ್... ಹೇಳು.

ಕಾವೇರಿ : ಜಗತ್ತೇ ನಮಗೀಗ ಎದುರಾಗಿ ನಿಂತಿದೆ. ನಮ್ಮ ಪಾಲಿಗೆ ಇನ್ನೇನೂ ಉಳಿದಿಲ್ಲ. ನಿಮಗೆ ನಾನು. ನನಗೆ ನೀವು...

ಅಪ್ಪಾ : ಆದ್ರೆ ನನ್ನ ಹೃದಯಕಾನನವೇ ಅಂಧಕಾರದಿಂದ ತುಂಬಿದೆಯಲ್ಲಾ ! ಬೆಳಕು ನೀಡುವವರು ಯಾರಿದ್ದಾರೆ. ನನಗೆ ಏನು ಮಾಡ್ಬೇಕು ತಿಳೀತಾ ಇಲ್ಲ. ನನಗೆ ದಾರಿ ತೋರಿಸುವವರು ಯಾರಿದ್ದಾರೆ ?

ಕಾವೇರಿ : ದಾರಿ ನಾನು ತೋರಿಸ್ತೇನೆ. ಆದ್ರೆ ನೀವು ಮಾತ್ರ ನಾನು ಹೇಳಿದಂತೆ ಕೇಳ್ಬೇಕು. ಇಲ್ಲಾ ಅನ್ಬಾರ್ದು...ನೋಡಿ ನನ್ನ ಹೃದಯ ಒಡೆದು ಸಾವಿರ ಹೋಳಾದ್ರೂ ನಾನಿನ್ನೂ ಬದುಕಿದ್ದೇನೆ ನಿಮಗೋಸ್ಕರ, ನಿಮಗೋಸ್ಕರ ಮಾತ್ರ. ನನ್ನ ಆರೋಗ್ಯ ಚೆನ್ನಾಗಿದ್ದಿದ್ರೆ ಒಂದು ಕ್ಷಣವೂ ಈ ಅವಮಾನವನ್ನ ಸಹಿಸುತ್ತಿದ್ದಿಲ್ಲ. ಮಾಧು ಮನೆಯಿಂದ ಹೊರಟಂತೆ ಈಗಿಂದೀಗ್ಲೇ ಬನ್ನಿ ಹೋಗೋಣಾಂತ ಹೇಳ್ತಿದ್ದೆ. ನನ್ನ ದೇಹದಲ್ಲೀಗೇನೂ ತ್ರಾಣ ಉಳಿದಿಲ್ಲ. ನಿಲ್ಲೋದಕ್ಕೆ ಶಕ್ತಿ ಇಲ್ಲ. ಆದ್ರೂ ಹೇಳ್ತೇನೆ ಇವತ್ತೊಂದು ರಾತ್ರಿ ಇಲ್ಲೇ ಕಳೆಯೋಣ. ನಾಳೆ ಬೆಳಗ್ಗೆ ತೀರ್ಥಹಳ್ಳಿಗೆ ಹೊರಡೋಣ. ನಾನೀಗ್ಲೇ ಹೋಗಿ ಮಾಲತಿಗೆ ಸ್ಪಷ್ಟವಾಗಿ ಹೇಳ್ತೇನೆ. ಅವಳ ಮನಸ್ಸಿನಲ್ಲೇನಿದ್ರೂ ಬಿಡಿಸಿ ಹೇಳೂಂತ. ನಾವಿಲ್ಲಿಂದ ಹೋಗೋದಿಕ್ಕೆ ತಯಾರಿದ್ದೇವೆ. ಆದ್ರೆ ಅನ್ಯಾಯವಾಗಿ ಅಪವಾದದ ಹೊರೆ ಮಾತ್ರ ಹೊರಿಸಬೇಡಾಂತ- ಬೇಡಿಕೊಳ್ತೇನೆ. ಇಲ್ಲಿಂದ ಹೊರಟ ಮೇಲೆ ಸಾಯೋದು ಖಂಡಿತ ಅಂತಾದ್ರೂ ಅವಳ ಹಣದ ಅಗತ್ಯ ಇನ್ನೆಂದಿಗೂ ಬೇಡಾಂತ ಸ್ಪಷ್ಟವಾಗಿ ಹೇಳಿಬಿಡ್ತೇನೆ. ಆದ್ರೆ ನೀವು ಮಾತ್ರ ತಾಳ್ಮೆಯಿಂದ ಸದ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಮ್ಮನಿರಬೇಕು. ಒಂದು ಶಬ್ದ ಎತ್ತಬಾರದು. ಇಲ್ಲಿಂದ ನಮ್ಮೂರಿಗೆ ಹೋದ ಮೇಲೆ ಈ ವಿಷಯವನ್ನೆಲ್ಲ ಒಂದು ಕೆಟ್ಟ ಕನಸನ್ನು ಮರೆ ತಂತೆ ಮರೆತುಬಿಡ್ಬೇಕು. ಆಗ ನಮ್ಮ ಆ ಮುರುಕು ಮನೆಯೇ ಅರಮನೆಯಾಗುತ್ತೆ. ಸುಖ ಶಾಂತಿಯ ದೇವಾಲಯವಾಗುತ್ತೆ. ನೀವು ನನ್ನ ರಾಜ, ನನ್ನ ದೇವರು, ಈಗ ಮಾತ್ರ ನನ್ನ ಕೈ ಬಿಡ ಬೇಡಿ. ನನಗಿರುವ ಒಂದೇ ಒಂದು ಆಸರೆಯೆಂದರೆ ನೀವು. ನಿಮ ಗಾಗಿ ನಾನೇನು ಮಾಡಲೂ ಸಿದ್ಧ. ಏನು ? ಮಾತಾಡಿ. ಕೇಳಿತೇ ನಾನು ಹೇಳಿದ್ದು ?

ಅಪ್ಪಾ : ಕೇಳಿತು.

ಕಾವೇರಿ : ಹಾಗಾದ್ರೆ ನಾನು ಹೇಳಿದಂತೆ ಕೇಳ್ತೀರಲ್ಲಾ.

ಅಪ್ಪಾ : ಕೇಳ್ತೇನೆ.

ಕಾವೇರಿ : ನಾನೀಗ್ಲೇ ಮಾಲತಿ ಹತ್ರ ಹೋಗ್ಬರ್ತೇನೆ.

ಅಪ್ಪಾ : ನೀನೊಬ್ಳೇ ಹೋಗ್ಬೇಡ ಸರಕಾರ್. ನಿನಗೇನೂ ಶಕ್ತಿಯಿಲ್ಲ.

ಕಾವೇರಿ : ಗೋಡೆಯ ಆಧಾರವಿದೆ ನನಗೆ. ಒಂದು ವೇಳೆ ಗೋಡೆ ಕಳಚಿ ಬಿದ್ರೂ ನಾನು ಹೆದರೋದಿಲ್ಲ, ನೀವಿರೋತನಕ.

[ಹೋಗುವಳು]

ಅಪ್ಪಾ : ನಾವಿನ್ನೂ ಬದುಕಿರಬೇಕೇ. ನಾವಿರೋದಾದ್ರೂ ಯಾಕೆ? ಯಾರಿಗೆ? ಯಾವುದಕ್ಕಾಗಿ ನಾವಿನ್ನು ಬದುಕಬೇಕು ? (ಆವೇಶದ ಭರದಲ್ಲಿರು ವನು)

[ಬೆಳಕು ಕಮ್ಮಿಯಾಗಿ ಮಂದವಾದ ಪ್ರಕಾಶ ಅವನ ಮೇಲೆ ಬೀಳುವುದು]

*ಬದುಕಿರಲೆ, ಬಾಳಿಗಂತವ ತರಲೆ, ಅದುವೆ ಪ್ರಶ್ನೆ !
ದುಷ್ಟ ಅದೃಷ್ಟವದು ಎಸೆವಂಬು, ಕವಣೆಗಳ
ಮುಟ್ಟಿದಲ್ಲದ ತೆರದಿ ಸಹಿಸುವುದು ಲೇಸೇ ?

---

* ಹ್ಯಾಮ್ಲೆಟ್ III (i)—ಶಿವರಾಮ ಕಾರಂತ.

*

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲಿಲ್ಲ, ಅಟ್ಟಿಬಹ ಸಂಕಷ್ಟ ಸಾಸಿರವ
ನಿಷ್ಠುರದಿ ಎದೆಯೊಡ್ಡಿ ಕೊನೆಗೊಳಿಸೆ ಲೇಸೇ ?
ಸಾವೆಂಬ ಸೀಮೆಯಲಿ ಕಾಯಕ್ಕೆ ಕಟ್ಟಿಟ್ಟ
ಮಾಯದಾ ಎದೆನೋವು ಸಾಸಿರಾಘಾತಗಳ
ಇಲ್ಲದಾಗಿಸಿ ಮಾಳ್ಪನಿದ್ದೆ, ಶ್ರೇಯಸ್ಸೆ ?
ಯಾಕೊಲ್ಲ ? ಯಾಕೊಲ್ಲದಾ ಸಾವು, ನಿದ್ದೆ -
ಹಂಬಲಿಸಿ ಹಂಬಲಿಸಿ ಭಾಗ್ಯ ಪಡೆದಂತೆ
ನಿದ್ದೆಯೆಂದೊಡೆವುಂಟು ಕನಸುಗಳ ಬಾಧೆ
ಅಲ್ಲಿಯೇ ತೊಡಕುಂಟು. ಆ ಕನಸು ಇನ್ನೆಂತೊ !
ಕಳಚಿಯೆಸೆದಾಕ್ಷಣಕೆ ನಮ್ಮೀ ಭೌತಿಕಾಯ
ಬೇಕೆ ಬೇಕೊಂದು ಕೊನೆ ಬಾಳ್ಬವಣೆ ಸಸಿಗೆ ತೆನೆ,
ಇಲ್ಲದಿರೆ ಬೆಲೆಯೇನು ? ಸಹಿಸಿದರೆ ಫಲವೇನು ?
ಕಾಲನಾ ಮೂದಲೆಯ, ಚಮ್ಮಟಿಗೆಯೇಟುಗಳ,
ಹಗೆಯೆಸೆವುದನ್ಯಾಯ, ಉದ್ಧಟನ ದುಮ್ಮಾನ,
ಕಾಲ ಮೀರಿದ ನ್ಯಾಯ, ಪ್ರೇಮನಿಂದಿತ ಗಾಯ
ಅಧಿಕಾರ ತಾತ್ಸಾರ ಒಗ್ಗೂಡಿ ಜರೆಯುತಿರೆ
ಬಗ್ಗಿ ಬಾಳಲು ಬೇಕೆ, ವಿನಯ ಅವಿನಯಕ್ಕೆ ;
ತಾನೆ ಕೊನೆಗೊಂಬೊಂದು ಸುಲಭ ಪಥವಿರಲಿಕ್ಕೆ ?
ಬರಿಯ ದಬ್ಬಣ ಸಾಕು, ನಿಜಕು ಅದಕೆ.
ಈ ಭಾರ ಹೊರಲೇಕೆ, ಬೆವರುತ್ತೆ, ಗೊಣಗುತ್ತೆ,
ಸಾಕು ಸಾಕಾಯ್ತೆಂಬ ದನಿಯ ತೆಗೆವುತ್ತೆ ?
ಸಾವಿನಾಚೆಗೆಯೇನು ಎಂಬೊಂದೆ ಭಯವಲ್ತೆ ?
ಅದಕೇನು ? ಕಂಡಿಲ್ಲದಾ ಸೀಮೆ, ಮರಳ್ದ ಯಾತ್ರಿಕನಿಲ್ಲ
ಅರಿಯದಿಹ ಪರಕಿಂತ ಅರಿತ ಭವಣೆಯೆ ಲೇಸು
ಎಂಬ ಸಹನೆಯ ಪಾಠವ ಸಹಿಸಿ ಇರಲೇನು ?

ಪ್ರಶ್ನೆಯೊಂದೆ – ಅದಕೆ ಉತ್ತರವೂ ಎರಡು ಬಗೆ
ದಾರಿ ಕವಲೊಡೆದಲ್ಲಿ ಎಲ್ಲೆಂದು ಹೋಗಲಿ
ಓ ನನ್ನ ಸ್ಮೃತಿಯೇ ವಿಸ್ಮೃತಿಯಾಗು ಒಮ್ಮೆ
ಕೆಟ್ಟ ಕನಸಿನ ಕಟ್ಟಡವು ಕುಸಿದು ಬೀಳಲಿ
ಮುಂಜಾನೆ ಎಚ್ಚರದಿ [illegible] ಬೀಳಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

[ಕುರ್ಚಿಯಲ್ಲಿ ಕುಳಿತುಕೊಳ್ಳುವಾಗ ಮಂದವಾದ ಪ್ರಕಾಶ, ಮತ್ತೆ ಪೂರ್ಣ ಬೆಳಕಾಗುವುದು. ಅಪ್ಪಾ ಅಲ್ಲಿಯೇ ಕುಳಿತಿರುವನು. ಕಾವೇರಿ ಒಳಗೆ ಬಂದು ನಿಂತಿದ್ದಾಳೆ. ಮಾಲತಿ ಬಾಗಿಲ ಬಳಿ ತಲೆಬಾಗಿಸಿ ನಿಂತಿದ್ದಾಳೆ. ಸುಧಾಕರ ಕಿಟಕಿಯ ಹೊರಗೆ ನೋಡುತ್ತಿರುತ್ತಾನೆ.]

ಕಾವೇರಿ : ಹೀಗಾಗುತ್ತೇಂತ ನನಗೆ ಗೊತ್ತಿತ್ತು. ನಾನು ಹೇಳಿರಲಿಲ್ಲವೇ ನಿಮಗೆ?

ಅಪ್ಪಾ : ಏನದು ಹೇಳಿದ್ದು ನೀನು ?

ಕಾವೇರಿ : ನಮ್ಮ ಮಾಲತಿ ತಪ್ಪು ತಿಳ್ಕೊಂಡಿದ್ದಾಳೇಂತ. ಹಣದ ಪಾಕೀಟು ಸಿಗ್ತು. ಪಾಪ ಅವಳಿಗೆ ಗಾಬರಿಯಾಗಿ ಹುಚ್ಚರಂತೆ ಹುಡುಕಾಡಿದಳು. ನಮ್ಮ ಪೆಟ್ಟಿಗೆಯಲ್ಲಿ ನನ್ನ ಹಾರ ಮಾರಿದ ಹಣ ಇತ್ತಲ್ಲ ಅದನ್ನು ನೋಡಿ ಬೇರೇನೋ ಅರ್ಥಮಾಡಿಕೊಂಡಿರಬೇಕು.

ಅಪ್ಪಾ : ಬೇರಾವ ಅರ್ಥ. ಅವಳು ಸಾರಿ ಹೇಳಿರಲಿಲ್ಲವೇ ಕದ್ದವನೆ ನಾನು ಕಳ್ಳನೆಂದು. ನಾವಿಬ್ಬರೂ ಈ ಮುದಿಗೊಡ್ಡುಗಳು ಬಿದ್ದಿರುವೆವು ಅವಳ ತುತ್ತು ಅನ್ನಕ್ಕೆ, ನಾಲಿಗೆ ಚಾಚಿ–ಸರಕಾರ್ ಬೇಕಿಲ್ಲ–ನನಗಿನ್ನು ಯಾರ ದಯೆ ದಾಕ್ಷಿಣ್ಯವೂ ಬೇಕಿಲ್ಲ. ಕನ್ನಡ ರಂಗಭೂಮಿಯ ನಟ ಸಾಮ್ರಾಟನೆನಿಸಿದ ಸಹಸ್ರಾರು ಪ್ರೇಕ್ಷಕರ ಆಶೀರ್ವಾದ ಗಳಿಸಿದ ಬಡವನಾದರೂ ನಿರ್ಮಲ ಅಂತಃಕರಣದ ಶ್ರೀಮಂತಿಕೆಯಲ್ಲಿ ಮೆರೆದ ಈ ರಂಗಶ್ರೀಯ ಕಿಂಕರನಿಗೆ, "ನೀನೇ ಕಳ್ಳ, ನೀನೇ ಕಳ್ಳ" ಎಂದು ನನ್ನ ಮಗಳೇ ಬೆರಳು ತೋರಿಸಿದಳಲ್ಲ ? ಯಾಕೆ ? ನಾನವಳ ತಂದೆ ಯೆಂಬ ಸಲುಗೆಯಿಂದಲ್ಲವೇ? ಚಿಕ್ಕಾಸೂ ಹಣವಿಲ್ಲ, ಮುದಿಕೊರಡು, ಹಂಗಿಗೆ ಬಂದು ಬಿದ್ದಿರುವೆನು...ನಿರ್ವೀರ್ಯನಾಗಿರುವೆನೆಂದಲ್ಲವೇ ಈ ಎಲ್ಲ ಅವಹೇಳನ.

ಮಾಲತಿ: (ಅವರ ಕಾಲಿಗೆ ಬೀಳುತ್ತ) ಕ್ಷಮಿಸಿ ಅಪ್ಪಾ. ದಯವಿಟ್ಟು ನನ್ನನ್ನು ಕ್ಷಮಿಸಿ. ನಿಮ್ಮ ಪುಟ್ಟಮರಿಯ ಅಪರಾಧವನ್ನು ಕ್ಷಮಿಸಿದ್ದೇ ನೆಂದೊಮ್ಮೆ ಹೇಳಿ ಅಪ್ಪಾ.

ಅಪ್ಪಾ : ಥೂ ನಿರ್ಲಜ್ಜ ಹೆಣ್ಣೇ–ನಡೆ, ದೂರಸರಿ. ಆ ನನ್ನ ಪುಟ್ಟ ಮರಿ ಯೊಂದಿತ್ತು, ನಾ ಕಲ್ಪಿಸಿದ ಕಾದಂಬರಿಯೊಳಗೆ ಮಾತ್ರ...ವಾಸ್ತವಿಕ ಜಗತ್ತಿನಲ್ಲಲ್ಲ, ಅದೊಂದು ಕೇವಲ ಭ್ರಮೆ. ನಾನು, ನನ್ನದು, ನನ್ನ

Sri Vidyabharathi Book Centre, Sringeri

ಮಕ್ಕಳು ಎಂದೆಲ್ಲ...ಯಾರಿಗೆ ಯಾರಿಲ್ಲ...ನನಗ್ಯಾರೂ ಇಲ್ಲ. ನನ್ನವರೆಂಬುವರು ಯಾರೂ ಉಳಿದಿಲ್ಲ. ಯಾರು ಮಗನೋ ಮತ್ಯಾರು ತಂದೆಯೋ–ಸರ್ವವೂ ಮಿಥ್ಯೆ–ಮಾಯೆ ಮಾತಾ ಭಗಿನಿ ನನ್ನವರಲ್ಲ ನಶ್ವರವಿಹುದೀ ಕಾಯ...

ಸುಧಾಕರ: ದಯಮಾಡಿ ಹಾಗೆಲ್ಲಾ ಹೇಳ್ಬೇಡಿ. ನಿಮ್ಮ ಮಗಳ ಅಪರಾಧವನ್ನು ದಯವಿಟ್ಟು ಕ್ಷಮಿಸಿ.

ಕಾವೇರಿ : ನಾನು ಹೇಳೋದನ್ನಿಷ್ಟು ಕೇಳ್ತೀರೇನು ? ಇನ್ನೆಂದೂ ಹೇಳೋದಿಲ್ಲ. ನನಗಿದನ್ನು ಸಹಿಸಲಿಕ್ಕಾಗೋದಿಲ್ಲ. ಈ ಒಂದು ರಾತ್ರಿ–ಇಲ್ಲಿ ಕಳೆಯೋಣ. ನಾಳೆ–ಖಂಡಿತ–ಇಲ್ಲಿಂದ–ಹೊರಡೋಣ. (ಸ್ವರ ಕ್ಷೀಣವಾಗುತ್ತಾ ಬರುತ್ತದೆ) ನಮ್ಮೂರಿಗೆ...ನಿಮಗಾಗಿ...ಕೇವಲ... ನಿಮ...ಗಾ...ಗಿ.

[ನೋವು ಸಹಿಸಲಿಕ್ಕಾಗದೆ ನೆಲದ ಮೇಲೆ ಬೀಳುವಳು. ಮರಣ ಹೊಂದುವಳು]

ಮಾಲತಿ: ಅಮ್ಮಾ...ಅಮ್ಮಾ...

ಅಪ್ಪಾ : (ಗಟ್ಟಿಯಾಗಿ) ಸರಕಾರ್...ಸರಕಾರ್...

[ದುರಂತ ಸೂಚಿಸುವ ಸಂಗೀತದೊಂದಿಗೆ ಪ್ರಕಾಶ ಕ್ರಮೇಣ ಕ್ಷೀಣವಾಗುತ್ತಾ ಪೂರ್ಣ ಕತ್ತಲಾಗುವುದು. ಅಂಕ ಪರದೆ ಬೀಳುವುದು]

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಕ ೩

ದೃಶ್ಯ ೧

[ಮಾಲತಿಯ ಮನೆಯ ದಿವಾನಖಾನೆ. ಮಧ್ಯಾಹ್ನದ ಸಮಯ. ಮಾಲತಿ ಸೋಫಾದ ಮೇಲೆ. ಸುಧಾಕರ್ ಟೆಲಿಫೋನಿನಲ್ಲಿ.]

ಸುಧಾಕರ: Hello, Trunk booking ? ನಾನು ದೇಶ್‌ಪಾಂಡೆ ಮಾತ್ನಾಡೋದು. ನನ್ನ ನಂಬ್ರ 4375. Hello ನೋಡಿ ಒಂದರ್ಧ ಘಂಟೆ ಮುಂಚೆ ಬೆಂಗಳೂರಿಗೆ ಒಂದು call book ಮಾಡಿದ್ದೆ. Yes-urgent call. Ticket No. z for zebra 49. ಏನೂ line out of order ಆಗಿತ್ತೇ. Please, thank you.

ಮಾಲತಿ: ಏನಂತಾಳೆ operator ?

ಸುಧಾಕರ: Line out of order ಆಗಿತ್ತಂತೆ. ಆದಷ್ಟು ಬೇಗ ಪ್ರಯತ್ನ ಮಾಡ್ತೀನೀಂತಂದ್ಳು.

ಮಾಲತಿ: ಅಗತ್ಯ ಬಿದ್ದಾಗ ಯಾವಾಗ್ಲೂ out of order (Tel. Bell)

ಸುಧಾಕರ: Hello Deshpande speaking ಯಾರು operator ರೇ. Line work ಆಗ್ತಿದ್ಯಾ? Thank God. ಏನೂ P.P. ಇಲ್ವೇ? ಹಾಗಾದ್ರೆ Mrs. Joshi ನೂ ಆದೀತು. ಬೇಗ connection ಕೊಡಿಸಿ Please–thank you.

ಮಾಲತಿ: ನೋಡೀ line ಸಿಗುವಷ್ಟ್ರಲ್ಲಿ Police station ಗಾದ್ರೂ remind ಮಾಡ್ರಲ್ಲ. ಅವರಿಗೇನಾದ್ರೂ ಸುದ್ದಿ ಸಿಕ್ಕಿದೆಯೋಂತ.

ಸುಧಾಕರ: ಸರಿ. (Telephone ತಿರುಗಿಸುತ್ತಾ) Hello Police inspector ಮೂರ್ತಿಯವರು ಇದ್ದಾರಾ ? ಓಹೋ ನಮಸ್ಕಾರ. ನೀವೇನಾ ಮಾತ್ನಾಡೋದು. ನಾನು ಸುಧಾಕರ್ ದೇಶ್‌ಪಾಂಡೆ. ಅದೇನಾಯ್ತು ಸರ್ ನಮ್ಮ ಕೆಲಸ. ಏನೂ ಇಲ್ಲ. ಹೌದು ಸರ್ ಗೊತ್ತು. ಏನು

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಲಿ ? ನಾವಿಬ್ರೂ ಬರೇ ಎರಡು ದಿನಗಳ ಮಟ್ಟಿಗೆ ಮಾತ್ರ ಪರವೂರಿಗೆ ಹೋದದ್ದು. ನಿನ್ನೆ ರಾತ್ರಿ ಇಲ್ಲಿಗೆ ಬಂದ ಮೇಲೆ ಗೊತ್ತಾಯ್ತು ಅವರಿಲ್ಲಾಂತ. ಏನು ಮಾಡ್ಲಿ ? ದಯವಿಟ್ಟು ಪ್ರಯತ್ನಮಾಡಿ ಸರ್ Thank you. (ಕುರ್ಚಿಯಲ್ಲಿ ಕುಳಿತು) ಪೋಲೀಸ್‌ನವರು ಅವರ duty ಮಾಡ್ತಿದ್ದಾರೆ. ಹತ್ತಿರದ ಎಲ್ಲಾ Police station ನಿಗೆ ತಿಳಿಸಿದ್ದಾರಂತೆ. Railway station, S. T. Bus stand ಎಲ್ಲಾ ಕಡೆ ಹುಡುಕಾಡಿ ಆಯ್ತಂತೆ. ಎಲ್ಲೂ ಪತ್ತೆ ಆಗ್ಲಿಲ್ಲ.

ಮಾಲತಿ: Train ನಲ್ಲಿ ಹೋಗಿರಲಿಕ್ಕೆ ಸಾಧ್ಯವೇ ಇಲ್ಲ. Station ಇಡೀ ವಿಚಾರಿಸಿ ಆಯ್ತು. Railway station ನಲ್ಲಿ ಎಲ್ರಿಗೂ ಅವರ ಪರಿಚಯ ಚೆನ್ನಾಗಿದೆ. (Telephone Bell)

ಸುಧಾಕರ: Hello Bangalore call ! ಸರಿ ! ಹಲೋ ಮಾಧು ತಾನೆ ! (ಮಾಲತಿಗೆ) ನೀನೇ ಮಾತಾಡಿದ್ರೆ ಒಳ್ಳೇದು.

ಮಾಲತಿ: ಬೇಡ. ನನಗಸಾಧ್ಯ ನೀವೇ ಮಾತ್ನಾಡಿ.

ಸುಧಾಕರ: Hello ಭಾವಾss ಕೆಟ್ಟ ಸಮಾಚಾರ ಹೇಳ್ಬೇಕಾಗಿದೆ. ಮಾವಯ್ಯ ನಿನ್ನೆ ಸಂಜೆಯಿಂದ ಮನೇಲಿಲ್ಲ. ಎಲ್ಲಿಗೆ ಹೋಗಿದ್ದಾರೆ ಅನ್ನೋದೇ ತಿಳೀತಾ ಇಲ್ಲ. ನಾವು ಎರಡು ದಿನ ಮನೇಲಿರಲಿಲ್ಲ. ನಿನ್ನೆ ರಾತ್ರಿ ಬಂದಾಗ ಗೊತ್ತಾಯ್ತು. ಮನೆ ಆಳು ವಿಠಲ ತಿಳಿಸಿದ. ನಿನ್ನೆ ಸಂಜೇ ತನಕ ಮನೆಯಲ್ಲೇ ಇದ್ರಂತೆ. ವಿಠಲ ಮಾರ್ಕೆಟ್ಟಿಗೆ ಹೋದಾಗಲೇ ಅವರೂ ಹೊರಟಿರಬೇಕು. ಇನ್ನೂ ಪತ್ತೆಯಾಗ್ಲಿಲ್ಲ. ಹೂಂ... ಪೋಲೀಸ್‌ನವರಿಗೂ ತಿಳಿಸಿದ್ದೀವಿ. ಆಸ್ಪತ್ರೆಯಲ್ಲೆಲ್ಲಾ ವಿಚಾರಿಸಿ ಯಾಯ್ತು. ಎಲ್ಲೂ ಇಲ್ಲ. ನಿಮ್ಮ ಕಡೆ ಬಂದಿದ್ದಾರೋಂತ ಟ್ರಂಕಾಲ್ ಹಾಕಿದೆ. ಹಾಂ...ಹಾಂ...ಬೇಡ. ನೀವು ಬರೋ ಅಗತ್ಯ ಇಲ್ಲ. ಆದ್ರೆ ಒಂದು ವೇಳೆ ಅಲ್ಲಿಗೆ ಬಂದ್ರೆ ನಮಗೆ ತಿಳಿಸಿಬಿಡಿ. ನಾವು ಪ್ರಯತ್ನ ಮಾಡ್ತಾ ಇದ್ದೀವಿ. ಸರಿ, ಸರಿ. O.K. ಅಗತ್ಯ ತಿಳಿಸ್ತೇನೆ. (Phone ಕೆಳಗಿಡುವನು)

ಮಾಲತಿ: ನೋಡೀ ನಾಳೆ ಒಳಗೆ ಏನಾದ್ರೂ ಪತ್ತೆ ಆಗದೆ ಇದ್ರೆ ನಾವೂ ಬೆಂಗಳೂರಿಗೇ ಹೋಗೋದೊಳ್ಳೇದು. (Car Horn) ಹಾಂ

Sri Vidyabharathi Book Centre, Sringeri

ಗಾಡಿ ಬಂತೂಂತ ಕಾಣಿಸುತ್ತೆ. (driver ಬರುವನು) ಏನೋ ಶಂಕರಾ ಏನಾದ್ರೂ ಗೊತ್ತಾಯ್ತೇ ?

ಶಂಕರ : ಇಲ್ಲಮ್ಮ. ಇಪ್ಪತ್ತು–ಮೂವತ್ತು ಮೈಲಿನಷ್ಟು ದೂರ ಹೋಗಿ ಬಂದೆ. ಅಲ್ಲೆಲ್ಲಾ ವಿಚಾರಿಸಿದೆ ; ಯಾರಿಗೂ ಗೊತ್ತಿಲ್ಲವಂತೆ.

ಸುಧಾಕರ: ಆಗಲಿ. ನೀನು ಹೋಗು...ನನಗನ್ನಿಸುತ್ತೆ ಅವರು ರೈಲಿನಲ್ಲೇ ಹೋಗಿರ್ಬೇಕು. ಬೆಂಗಳೂರಿಗೆ ಹೋದರೋ ಇಲ್ಲಾ ಶಿವಮೊಗ್ಗಕ್ಕೊ ಯಾರಿಗ್ಗೊತ್ತು ?

ಮಾಲತಿ: ಶಿವಮೊಗ್ಗಕ್ಕೆ ಯಾಕೆ ಹೋಗ್ಬೇಕು ?

ಸುಧಾಕರ: ಅಲ್ಲಾ ತೀರ್ಥಹಳ್ಳಿಗೆ ಹೋಗ್ಬೇಕೂಂತ ಹೇಳ್ತಾ ಇದ್ರುಲ್ಲವೇ. ಶಿವಮೊಗ್ಗಕ್ಕೆ ಹೋಗಿ ತಾನೆ ಅಲ್ಲಿಗೆ ಹೋಗ್ಬೇಕು.

ಮಾಲತಿ: ಅದೂ ಸಾಧ್ಯ (ದುಃಖದಿಂದ) ಸಾಯುವಾಗ್ಲೂ ಅಮ್ಮ...ತೀರ್ಥ ಹಳ್ಳಿ ದಾರಿ ಕಾಯುತ್ತಿರುತ್ತೇನೆ ಅಂತ ಹೇಳಿದ್ಳು.

[ಅಳುವಳು]

ಸುಧಾಕರ: ತೀರ್ಥಹಳ್ಳಿ Police station ಗೂ ತಿಳಿಸಿದ್ದಾರಂತೆ. ಅಲ್ಲಿಗೆ ಹೋದ್ರೂ ಖಂಡಿತ ನಮಗೆ ತಿಳಿಯುತ್ತೆ.

ಮಾಲತಿ: ವಿಠಲನ ಹತ್ತಿರ ಏನಾದ್ರೂ ಹೇಳಿರಬಹುದೇ. ವಿಠಲಾ.

[ವಿಠಲ ಪೆಟ್ಟಿಗೆ ಚೀಲ ಹಿಡಿದುಕೊಂಡು ಹೊರಟಿದ್ದಾನೆ]

ಏನೋ ಇದು, ಎಲ್ಲಿಗೆ ಹೊರಟಿದ್ದೀಯಾ ?

ಸುಧಾಕರ: ಹೇಳ್ಳಿಕ್ಕೆ ಮರೆತೆ ಮಾಲತಿ...ಅವನೂ ಕೆಲಸ ಬಿಡ್ತಾನಂತೆ.

ವಿಠಲ : ಬಿಡ್ತಾನೆ ಅಲ್ಲ ಬಿಟ್ಟಿದ್ದೇನೆ.

ಮಾಲತಿ: ಅಂದ್ರೆ !

ವಿಠಲ : ಅಂದ್ರೆ ಇವತ್ತಿನಿಂದ ನಾನು ನಿಮ್ಮಲ್ಲಿ ಕೆಲಸ ಮಾಡೋದಿಲ್ಲಾಂತ. ನೋಡಿ ಈ Bag ಈ ಚೀಲ, ಇದು ನನ್ನದು ಸ್ವಂತದ್ದು. ಇದ ರೊಳಗಿರೋ ವಸ್ತ್ರ ಗಿಸ್ತ್ರ ಅದೂ ನನ್ನದೇ. ಬೇಕಿದ್ರೆ ಹೋಗೋದ ಕ್ಕುಂಚೆ ಚೆನ್ನಾಗಿ ನೋಡಿಕೊಳ್ಳಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಲತಿ: ನಿನ್ನ ತಲೆ ಸರಿಯಾಗಿದೆಯೇನು ?

ವಿಠಲ : ಕ್ಷಮಿಸಿ ಚಿಕ್ಕಮ್ಮಾವ್ರೇ. ತಲೆ ಸರಿಯಾಗಿದ್ರಿಂದ್ಲೇ ಹೇಳ್ತಾ ಇದ್ದೇನೆ. ಚೆನ್ನಾಗಿ ನೋಡೀಂತ. ಆಮೇಲೆ ನಾನು ಹೊರಟು ಹೋದ್ಮೇಲೆ ನಿಮ್ಮ ವಸ್ತು ಏನಾದ್ರೂ ಕಾಣೆಯಾಯ್ತೂಂತ ಕಂಡು ಬಂದ್ರೆ ಅಪ ವಾದ ನನ್ನ ಮೇಲೆ ಬೀಳಬಾರದೂಂತ.

ಮಾಲತಿ: ಸಾಕು, ಸುಮ್ನಿರೋ. ಎಲ್ಲಿಗೆ ಹೋಗ್ಬೇಕೂಂತ ನಿಶ್ಚಯಿಸಿದ್ದೀ ?

ವಿಠಲ : ಕೆಲಸದ ಯೋಚನೆ ಇನ್ನೂ ಮಾಡ್ಲಿಲ್ಲ. ಕೆಲ್ಸ ಮಾಡೋದಿಕ್ಕೆ ಇಚ್ಛೆ ಇದ್ರೆ ಕೆಲ್ಸಕ್ಕೇನೂ ಕೊರತೆಯಿಲ್ಲ. ಆದ್ರೆ ಸದ್ಯ ಅಪ್ಪಾ ಸಾಹೇಬ್ರ ಶೋಧನೆ ಬಿಟ್ಟು ಬೇರೆ ಕೆಲಸದ ಯೋಚನೆ ಇಲ್ಲ.

ಮಾಲತಿ: ನಿನಗೆ ಯಾಕೋ ಅವರ ಚಿಂತೆ. ನಿನಗೇನು ಅವರು ಬಂಧು ಬಳ ಗಾನೋ. ಪೋಲೀಸರಿಗಾಗದ ಕೆಲ್ಸ ಇವ್ನು ಮಾಡ್ತಾನಂತೆ.

ವಿಠಲ : ನಿಮಗೆ ಅವ್ರು ಬರೇ ಅಪ್ಪಾ ಆದ್ರೂ ನನ್ನ ಪಾಲಿಗೆ ಅವರು ಗುರು ಗಳು. ನಮ್ಮ ದೇಶದ ದೊಡ್ಡ ಕಲಾವಿದರು. ನನ್ನ ಪಾಲಿನ ಕರ್ತವ್ಯ ನಾನು ಮಾಡಬೇಡ್ವೇ.

ಮಾಲತಿ: ಸಾಕೋ ಹೆಚ್ಚು ಬೊಗಳಬೇಡ. ಬಾಯಿಮುಚ್ಚಿ ನಾಯಿಯಂತೆ ಅವರ ಹಿಂದೇನೇ ನೀನೂ ಹೊರಡು.

ವಿಠಲ : ಆದ್ರಿಂದ್ಲೇ ಹೊರಡೋದು. ಮನುಷ್ಯಾಂತನ್ನಿಸಿಕೊಂಡು ಮೃಗ ದಂತೆ ವರ್ತಿಸೋದಕ್ಕಿಂತ ನಾಯಿಯಾಗಿದ್ರೂ ಮನುಷ್ಯನಂತಿರೋ ದಿಕ್ಕೆ ಪ್ರಯತ್ನಿಸೋಣಾಂತ. ಶಿವಾಜಿ ಮಹಾರಾಜನ ಚಿತೆಯ ಮೇಲೆ ಹಾರಿದ್ದು ಅವರ ಬಂಧು ಬಳಗವಲ್ಲ, ಅವರು ಸಾಕಿದ ನಾಯಿ. ಚಿಕ್ಕಮ್ಮಾವ್ರೇ! ಚೆನ್ನಾಗಿ ತಿಳ್ಕೊಳ್ಳಿ, ಅದೇ ನಿಜವಾದ ಸ್ವಾಮಿನಿಷ್ಠೆ.

ಸ್ವಾಮಿ ನಿಷ್ಠೆಯೊಳು ಮೀಸಲಾಗಿಹ ಜೀವವಿದು
ಸಿಡಿದು ಬಿದ್ದರು ಸರಿಯೆ, ಸ್ವಾಮಿಕಾರ್ಯದೊಳೀ
ದೇಹವನೆ ಸವೆಸುವೆನು.

ಬದುಕಿ ಸಾಯುವುದಕಿಂತ ನಾ ಸತ್ತು ಬದುಕುವೆನು.

ಈ ಮಾತುಗಳು ನಾಟಕದ್ದು. ನಾನು ಮಾತ್ರ ಕದ್ದದ್ದು. ಆದ್ರೆ ನಿಜವಾಗಿ ಜೀವನದಲ್ಲಿ ನಡೆದದ್ದು. ಕದ್ದವನನ್ನು ಹಿಡಿಯೋದಿಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾತ್ರ ಸಾಧ್ಯ ಪೋಲೀಸರಿಗೆ. ಆದ್ರೆ ಕಲಾವಂತರನ್ನು ಕಂಡುಹಿಡಿಯ ಬೇಕಾದ್ರೆ ಅದು ಕಲಾವಂತರಿಗೆ ಮಾತ್ರ ಸಾಧ್ಯ. ಆದ್ರಿಂದ ಬರ್ತೀನಮ್ಮಾ, (ಹೋಗುವನು. ತಕ್ಷಣ ಹಿಂದೆ ಬಂದು) ಕ್ಷಮಿಸಿ ಸರ್ ಇಷ್ಟು ವರ್ಷ ಕಾಲ ನಿಮ್ಮ ಮನೆಯಲ್ಲಿ ಕಾಲ ಕಳೆದ ನಾನು ನನ್ನ ಕೃತಜ್ಞತೆಯನ್ನರ್ಪಿಸದೆ ಹೋದದ್ದಕ್ಕೆ. ನನ್ನಿಂದೇನಾದ್ರೂ ತಪ್ಪಾಗಿದ್ರೆ ಕ್ಷಮಿಸ್ಬೇಕು ಸರ್. ನಮಸ್ಕಾರ.

[ಹೋಗುವನು. Telephone Bell]

ಸುಧಾಕರ: Hello, Inspector ಮೂರ್ತಿಯವರಾ ಏನು... Photo ಬೇಕಾಗಿತ್ತಾ ? ಅವರ Photos ಎಲ್ಲಾ ಬೆಂಗಳೂರಲ್ಲಿ ಬೇಕಾದಷ್ಟಿವೆ ಸರ್. ಇಲ್ಲಿ ಒಂದೂ ಇಲ್ಲ. ಆದ್ರೂ ಹುಡುಕಿ ಏನಾದರೂ ಇದ್ರೆ ತರ್ತೇನೆ ಸರ್. (ರಿಸೀವರ್ ಕೆಳಗಿಟ್ಟು) ಮಾಲತೀ ನಮ್ಮ Marriage Photo albumನಲ್ಲಿ ನಿನ್ನಪ್ಪ ಇದ್ದ Photo ಇರಬಹುದು. ನೋಡು, ಬೇಗ ಹುಡುಕಿ ತಾ. ನನ್ನನ್ನು ಈಗ Police station ಗೆ ಕರ್ದಿದ್ದಾರೆ.

ಮಾಲತಿ: ಅಪ್ಪನ Photo ಒಂದೂ ಮನೇಲಿಲ್ಲ. ಇದ್ರೂ ಬೆಂಗಳೂರಲ್ಲೇ ಇರ್ಬೇಕು. ಮಳೆ ಗಾಳಿ ಶುರುವಾಗಿದೆ. ಗುಡುಗು ಮಿಂಚು ಬೇರೆ. ಭಯವಾಗ್ತಾ ಇದೆ. Drive ಮಾಡುವಾಗ ಎಚ್ಚರ.

ಸುಧಾಕರ: ಹೆದರ್ಕೊಬೇಡ...ಬರ್ತೇನೆ...ಇಲ್ಲೇ ಪೋಲೀಸ್ ಸ್ಟೇಶನ್‌ಗಲ್ವೇ ಹೋಗೋದು...?

[ಗುಡುಗು ಮಿಂಚು ಮಳೆ ಧಾರಾಳ ಸುರಿಯುತ್ತಿದ್ದಂತೆ ಕತ್ತಲಾವರಿಸಿ ದೃಶ್ಯ ಕೊನೆಗೊಳ್ಳುತ್ತದೆ.]

*

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಕ ೩

ದೃಶ್ಯ ೨

[ಬೆಂಗಳೂರು ನಗರದ ಒಂದು ಹಾದಿ. ಸೂರ್ಯಾಸ್ತ ಸಮಯ. ಗುಡುಗು ಮಿಂಚು ಪ್ರಾರಂಭವಾಗಿದೆ. ಅಪ್ಪಾ ಅವರ ಪೋಷಾಕು ಹರಿದು ಹೋಗಿದೆ. ಹುಚ್ಚನಂತಾಗಿದ್ದಾನೆ. ಹಾಡುತ್ತಾ ಪ್ರವೇಶಿಸುತ್ತಾನೆ.]

ಅಪ್ಪಾ : ಬಿರುಗಾಳಿ ಬಂತಯ್ಯ ಬಿರುಗಾಳಿ ಬಂತು
ಗೋಡೆಯಾಸರೆ ಇಲ್ಲ
ಮಾಡು ಚಪ್ಪರವಿಲ್ಲ
ಮಾನವನ ದಯೆಯಿಲ್ಲ
ಬೀದಿ ಬೀದಿಲಿ ಸುತ್ತಿ
ಬೇಸತ್ತು ಬಯಸುತಿದೆ
ಬಿರುಗಾಳಿಗೊಂದು ಬೀಡು
ಕೊಡುವಿರಾ ನನಗೊಂದು ಬೀಡು

ಕಾಡು ಗುಡ್ಡದಿ ಅಲೆದು
ಕಡಲ ಮಧ್ಯದಿ ಸುತ್ತಿ
ತಿರುಗಾಡಿ ಸೊಕ್ಕಡಗಿ
ಬಲಹೀನ ಬಿರುಗಾಳಿ
ತಂಪಿನಲಿ ತಂಗಿರಲು
ಅರಸುತಿದೆ ಬೀಡು
ಕೊಡುವಿರಾ ನನಗೊಂದು ಬೀಡು

ರಾಜ ವೈಭವ ಬೇಡ
ಬಿರುದು ಬಾವಲಿ ಬೇಡ
ಹಾರ ತುರಾಯಿ ಬೇಡ
ಸಿರಿ ಸಂಪತ್ತು ಬೇಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೈ ಚಾಚಿ ಬಿದ್ದಿರಲು
ಚಿಕ್ಕ ಗುಡಿಸಲು ಸಾಕು
ಕೊಡುವಿರಾ ನನಗೊಂದು ಬೀಡು

ಮನೆಯಂಗಳದಿ ಮಾತ್ರ
ತುಳಸಿ ವೃಂದಾವನವೆ
ಶೋಭಿಸುತ್ತಿರಬೇಕು.
ಬೇಕು ನನಗೊಂದು ಬೀಡು
ಸರಕಾರ್......ಸರಕಾರ್.

[ಸರಕಾರ್ ಎಂದು ಅಳುವನು. ನಿಂತಲ್ಲೇ ಕುಳಿತುಕೊಳ್ಳುವನು. ಆ ವೇಳೆಗೆ ಒಬ್ಬಿಬ್ಬರು ದಾರಿಹೋಕರು ಅವನ ಬದಿಯಿಂದ ಹಾದು ಹೋಗುವರು. ಒಮ್ಮೊಮ್ಮೆ ಅಳುವುದನ್ನು ನಿಲ್ಲಿಸಿ ತಟಸ್ಥನಾಗುವನು. ಒಬ್ಬ ಹುಡುಗ Boot Polish ಸಾಮಗ್ರಿಗಳನ್ನು ಹಿಡಿದುಕೊಂಡು ಪ್ರವೇಶಿಸುವನು.]

ಹುಡುಗ: ತಾತಾ ಯಾಕೀ ಮಳೆಗಾಳಿ ಬರೋವೇಳೆ ಮೈಯೊಡ್ಡಿ ಕುಂತ್‌ಕಂಡಿದ್ದೀಯಾ, ದಾರಿ ತಪ್ಪಿತೇನು ?

ಅಪ್ಪಾ : ಇಲ್ಲ ಇಲ್ಲ. ದಾರಿ ತಪ್ಪಲಿಲ್ಲ. ದಾರಿ ಕಾಯ್ತಾ ಇದ್ದೇನೆ.

ಹುಡುಗ: ಯಾರ ದಾರಿ ಕಾಯ್ತೀಯಪ್ಪಾ.

ಅಪ್ಪಾ : ನನ್ನ ಹೆಂಡ್ತಿ ದಾರಿ ಕಾಯ್ತಾ ಇದ್ದೀನಿ. ಅವಳನ್ನ ನಾನು ಸರಕಾರ್‌ಂತ ಕರೆಯೋದು.

ಹುಡುಗ: ಅವ್ಳೇನು ಹಿಂದಕ್ಕುಳಿದು ಬುಟ್ಳಾ.

ಅಪ್ಪಾ : ಇಲ್ಲ. ಹಿಂದಕ್ಕುಳಿದದ್ದು ಅವಳಲ್ಲ, ನಾನು. ಯಾವಾಗ್ಲೂ ಹಿಂದಿನಿಂದಲೇ ಬರ್ತಿದ್ದವಳು ಮುಂದಕ್ಕೆ ಹೋಗಿಬಿಟ್ಳು. ಆದರೂ ಹಿಂದಕ್ಕೆ ಬಾರದಿರಲಿಕ್ಕಿಲ್ಲ. ಯಾಕೇಂದ್ರೆ ಅವಳ ತುಳಸಿ ವೃಂದಾವನ ಇನ್ನೂ ಕಟ್ಟಿಯಾಗಲಿಲ್ಲ.

ಹುಡುಗ: ಯಾವ ತುಳಸಿ ವೃಂದಾವನ ? ನಿನ್ನ ದಾರಿ ತಪ್ಪಿರಬೇಕು ತಾತಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ನಂಗೆ ದಾರೀನೇ ತೋರ್‍ತಾ ಇಲ್ಲ. ನೋಡೂ, ನಿಂಗೆಲ್ಲ ಅದು ಅರ್ಥವಾಗೋದಿಲ್ಲ. ಹೋಗ್ಲಿಬಿಡು.

ಹುಡುಗ: ನೋಡು ತಾತಾ ನೀನಿಲ್ಲಿ ಕುಂತ್‌ಕೊಂಡ್ರೆ ಯಾರ್‌ ನಿನ್ನ ಕೇಳ್ತಾರೆ. ಬಾ ನಾನು ದಾರಿ ತೋರಿಸ್ತೇನೆ. ನನ್ನ ಜತೆ ಆರಾಮ ಮಾಡ್ಕೊಂಡು ಆಮೇಲೆ ಬೇಕಾದಲ್ಲಿ ಹೋಗು.

ಅಪ್ಪಾ : ಪರವಾಗಿಲ್ಲಯ್ಯ, ನಾನಿಲ್ಲೇ ಇರ್‍ತೀನಿ. ನಿನಗೇನೂ ತೊಂದರೆ ಇಲ್ಲ ತಾನೆ !

ಹುಡುಗ: ತೊಂದರೆ ನಿನಗೇ ತಾತಾ. ನಾನ್ಹೇಳೋದನ್ನ ಸ್ವಲ್ಪ ಕೇಳು. ಗುಡುಗು ಮಿಂಚು ಶುರುವಾಗ್ತಾ ಇದೆ. ನಿನ್ನ ಹೆಂಡ್ತಿ ಬಂದಮೇಲೆ ನಿನಗೆಲ್ಲಿ ಬೇಕೋ ಅಲ್ಲಿಗೆ ನೀನು ಹೋಗ್ಬಾದು.

ಅಪ್ಪಾ : ಹೆಂಡ್ತಿ ಬಂದ್ಮೇಲೆ ? ಯಾಕೆ ಬರಬೇಕವ್ಳು ? ಸ್ವರ್ಗಸ್ಥರಾದವರು ಪುನಃ ಈ ಭೂಮಿಗೆ ಯಾಕೆ ಬರ್‍ಬೇಕು. ಅಂಥಾದ್ದೇನಿದೆ ಈ ಭೂಮೀಲಿ ಅನುಭವಿಸೋದಿಕ್ಕೆ. ಅರೆ ! ನಿನಗೊಂದು ತಮಾಷೆ ಹೇಳ್ತೀನಿ ಕೇಳು. ನಕ್ಷತ್ರಗಳೆಲ್ಲ ಒಮ್ಮೆ ಸಭೆ ಸೇರಿ ಈ ಪೃಥ್ವಿಗೊಂದು ಪ್ರಶ್ನೆ ಹಾಕಿದ್ವು. ನಿನ್ನ ಬಳಿ ಇರೋ ಅಮೂಲ್ಯ ವಸ್ತು ಯಾವ್ದೂಂತ ? ಆಗ ಪೃಥ್ವಿ ಬಹಳ ಅಭಿಮಾನದಿಂದ ಅವಳ ಸೆರಗಿನ ಹಿಂದಿನಿಂದ ಒಬ್ಬ ಮನುಷ್ಯನನ್ನು ಎತ್ತಿ ತೋರಿಸಿದಳು. ಆಗ ಸೇರಿದ ಸಭೆ ನಗಲಿಕ್ಕಾರಂಭಿಸಿತು. ಯಾತಕ್ಕೇಂದ್ರೆ ಅವಳು ತೋರಿಸಿದ ಆ ಅಮೂಲ್ಯ ವಸ್ತು ಮನುಷ್ಯನಾಗಿ ಇರಲಿಲ್ಲ. ಬರೇ ಐದೂವರೆ ಫೂಟು ಎತ್ತರದ ಪ್ರಾಣಿಯಾಗಿತ್ತು. ಮನುಷ್ಯ ಪ್ರಾಣಿಯ ಸ್ಥಿತಿಗೆ ಇಳಿದದ್ದು ಪಾಪ ಆ ಭೂಮಿತಾಯಿಗೆ ಗೊತ್ತೇ ಇರಲಿಲ್ಲ. ಇನ್ನೇನು ಉಳಿಯಿತು ಹೇಳು ಭೂದೇವಿ ಮಾನ ಕಳಕೊಂಡ ಮೇಲೆ.

ಹುಡುಗ: ಯಾಕೆ ಹೀಗೆ ಹೇಳ್ತಾ ಇದ್ದಿ ?

ಅಪ್ಪಾ : ನಿನಗೆ ಅದೆಲ್ಲಾ ತಿಳಿಯೋದಿಲ್ಲ ಬಿಡು. ನಿನ್ನ ಪಾಡಿಗೆ ನೀ ಹೋಗು. ಆದರೆ ನೀನಾಚೆ ಹೋದಾಗ...ಆ ಮಂಗನಿಗೆ ಹೇಳಿಬಿಡು ಸಾಕಿನ್ನಾ ಚೇಷ್ಟೆ ಎಂದು.

ಹುಡುಗ: ಯಾವ ಮಂಗ ? ಎಲ್ಲೈತೆ ಮಂಗ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಅದೇ ದುರ್ದೈವ. ನಿನ್ನ ಕಣ್ಣಿಗಿನ್ನೂ ಬಿದ್ದಿಲ್ಲ. ವಿಶಾಲವಾದ ಆಕಾಶದ ಮುಂದೆ ಆ ಮರ್ಕಟ ನಿಂತು ಆರ್ಭಟೆ ಹೊಡೀತಾ ಇದೆ. ಭಯಂಕರ ಚೇಷ್ಟೆ ಮಾಡ್ತಾ ಇದೆ. ಶೇಕ್ಸ್‌ಪಿಯರನೇ ನನಗೆ ಸ್ವತಃ ಹೇಳಿದ್ದಾನೆ. ಅದರ ಚೇಷ್ಟೆಯನ್ನು ನೋಡಿ ಸೈತಾನ್ ಕೂಡಾ ನಗುತ್ತಿದ್ದಾನೆ. ಅಲ್ಲದೆ ದೇವರ ಕಣ್ಣಲ್ಲೂ ನೀರು ಬರಲಿಕ್ಕೆ ಶುರುವಾಗಿದೆ. ದೇವರ ಕಣ್ಣಲ್ಲಿ ನೀರಿಳಿಯೋದೂಂದ್ರೆ ಸಾಮಾನ್ಯ ಸಂಗತಿಯಲ್ಲ. ದೇವರನ್ನು ಕಣ್ಣೀರು ಹಾಕಿಸಿದ್ರೆ ಇಡೀ ಭೂಮಂಡಲವೇ ಕೊಚ್ಚಿ ಹೋದೀತು, ಪ್ರಳಯವಾದೀತು, ತಿಳೀತೇನು ?

ಹುಡುಗ: ಈಗ ಸರೀ ತಿಳೀತು ತಾತಾ. ನೀನೀಗ ಸದ್ಯ ನನ್ನ ಜತೆ ಬಾ. ಗಾಳಿ ಮಳೆಗೆ ನೆನೆಯುತ್ತಾ ಕುಂತ್ಕೋಬೇಡಾ...ಬಾ.

ಅಪ್ಪಾ : ಯಾರು ನೀನು ? ನಿನ್ನ ಹೆಸ್ರೇನು ?

ಹುಡುಗ: ನಾನ್ಯಾರಾದ್ರೇನು. ನನ್ಹೆಸ್ರು ರಾಜಾಂತ. ಕತ್ತಲಾಯ್ತು. ಗುಡುಗು ಮಿಂಚು ಶುರುವಾಯ್ತು. ಬಾ ನನ್ನ ಜತೆ.

ಅಪ್ಪಾ : ಆಗಲಿ ರಾಜಾ. ಹ...ಹ...ಕಣ್ತೆರೆದು ನೋಡಿ

ದುಷ್ಟಜಂತುಗಳ ಸ್ವಚ್ಛಂದ ವೃತ್ತಿ
ಸಭ್ಯತೆಯ ಕೊಲ್ಲುತಿವೆ ಗಂಟಲೊತ್ತಿ
ಕಾಡುಪ್ರಾಣಿ ನಾಡಪ್ರಾಣಿ
ಬಿಲಗಳಿಂದ ಹೊರಬಿದ್ದಿವೆ
ನರಮೊಗದ ರಾಕ್ಷಸ ಹ...ಹ...ಹ...

ಬಂಧನದ ಬಿಗಿ ಮುರಿದು
ಸಂಯಮದ ಕಟ್ಟೊಡೆದು
ದೇವರನೆ ಸದೆಬಡಿದು
ಭೂಮಿಯನೆ ಕಬಳಿಸಲು
ಹುಚ್ಚೆದ್ದು ಕುಣಿಯುತಿದೆ
ನರಮೊಗದ ರಾಕ್ಷಸ ಹ...ಹ...

ನಾಲಿಗೆಯ ಸಡಿಲಿಸುತ
ಕೊಂಬನ್ನೆ ಮಸೆಯುತ್ತ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಣ್ಣೊಳಗೆ ಕಿಡಿಕಾರಿ
ಸೇಡು ತೀರಿಸಲೆಂದು
ಅಟ್ಟಹಾಸದಿ ಕುಣಿಯುತಿದೆ
ನರಮೊಗದ ರಾಕ್ಷಸ ಹ...ಹ...

ಮನೆ ಮಠವೆ ಬಿದ್ದಿರಲಿ
ನಗರವೇ ಉರಿಯಲಿ
ಹೂದೋಟ ಬಾಡಲಿ
ಬದುಕಿಸಿರಿ ಹಸುಳೆಯನು
ಬಟ್ಟ ಬಯಲಲಿ ಬಿದ್ದು
ಮಲಗಿರುವ ಹಸುಗೂಸ

ಆಗಸವ ನೋಡುತ್ತ
ರವಿಯತ್ತ ಕೈಚಾಚಿ
ಮೈಮರೆತು ಬಿದ್ದಿರುವ
ತಬ್ಬಲಿಯ ರಕ್ಷಿಸಿರಿ
ಕರುಣೆ ಎಂಬುವ ತಾಯಿ
ಎಲ್ಲಿರುವೆ ಬಾ ಒಮ್ಮೆ

ಹುಡುಗ: ಬಾ ತಾತಾ......

[ತಾತಾ ಬಾ ತಾತಾ ಬಾ ಎಂದು ಒಳಗೆ ಕರೆದುಕೊಂಡು ಹೋಗುವನು.]

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಕ ೩

ದೃಶ್ಯ ೩

[ಬೆಂಗಳೂರಿನ ಒಂದು ನಾಟ್ಯ ಮಂದಿರದ ಹೊರಗೆ ಒಂದು ರಸ್ತೆಯ ಬದಿ. ನಾಟ್ಯ ಮಂದಿರದ ಪಾರ್ಶ್ವಭಾಗವಾದ್ದರಿಂದ ಹೆಚ್ಚು ಜನಸಂಚಾರವಿಲ್ಲ. ಆದರೆ ನಾಟ್ಯ ಮಂದಿರದ ಒಳಗಿನ ದೀಪದ ಬೆಳಕಿಗೆ ಹೊರಗೆ ತೂಗು ಹಾಕಿದ ಬೋರ್ಡು ಕಾಣಿಸುತ್ತದೆ. ಸುಮಾರು ಹದಿನಾರು–ಹದಿನೇಳು ವಯಸ್ಸಿನ ಹುಡುಗನೊಬ್ಬ ಕೈಯಲ್ಲಿರುವ Boots ಗಳನ್ನ Polish ಮಾಡುತ್ತಾ ಸಿನೇಮಾದ ಹಾಡುಗಳನ್ನು ಗುಣುಗುಣಿಸುತ್ತಾ ಪ್ರವೇಶಿಸುವನು. ದಿನ್ನೆಯ ಮೇಲೆ ಯಾರೂ ಇಲ್ಲದ್ದನ್ನು ಕಂಡು ಆಶ್ಚರ್ಯದಿಂದ Side-Wing ನಲ್ಲಿ ನೋಡಿ ಏರಿದ ದನಿಯಲ್ಲಿ......]

ಹುಡುಗ: ತಾತಾ, ಯಾಕಲ್ಲಿ ಹೋದೀ. ನಿಂಗೇನು ಬೇಕಾಗೈತೆ. ಛಿ...ಛಿ... ಅದನ್ನು ತಿನ್‌ಬ್ಯಾಡಾ. ಯಾರೋ ಅರ್ಧ ತಿಂದು ಚಂದಾಕಿಲ್ಲಾಂತ ಬಿಸಾಕವ್ರೆ. ಏಯ್ ನನ್ನ ತಾತಂಗೆ ಯಾಕಯ್ಯ ತೊಂದ್ರೆ ಕೊಡ್ತೀ. ಕಾಲು ಮುರಿದ್ಹಾಕ್ಬಿಡ್ತೀನಿ ನೋಡು. ಹೋಗಯ್ಯ ! ತಾತಾ ನಾ ಬರ್‍ತೇನೆ ತಾಳು.

[ಹೋಗಿ, ಅಪ್ಪಾ ಅವರ ಕೈ ಹಿಡಿದುಕೊಂಡು ಬರುವನು. ಅಪ್ಪಾ ಮೈಲಿಗೆಯಾದ ಧೋತರ ಮತ್ತು ಶರ್ಟು ಹಾಕಿದ್ದಾರೆ. ಕೈಯ್ಯಲ್ಲೊಂದು ಕೋಲೂ ಇದೆ.]

ಇಲ್ಲೇ ಇರು ತಾತಾ ನನ್ನ ಜತೇನೇ. ಆ ತುಂಟನ ಜತೆ ಯಾಕೆ ಅತ್ತಿತ್ತ ಅಲೆಯೋದು. ಇದೆಲ್ಲ ನನಗೆ ಹಿಡಿಸಾಕಿಲ್ಲ. ನಾನು ಹೇಳಿದ ಹಾಗೆ ಕೇಳ್ಬೇಕು ನೀನು. ತಿಳಿತೇನು ?

ಅಪ್ಪಾ : ಆಗಲಿ ರಾಜಾ. ಆದ್ರೆ ಇಲ್ಲೇ ಕೂತ್ರೆ ಯಾರಾದ್ರೂ ನಮ್ಮನ್ನ ಓಡಿಸಲಿಕ್ಕಿಲ್ಲ ತಾನೆ !

ಹುಡುಗ: ತಾತಾ ಇದು foot-path ಉ. ಯಾರಪ್ಪಂದೂ ಜಾಗ ಅಲ್ಲ. ಇಲ್ಲಿ ಯಾರ ಹಕ್ಕೂ ನಡೆಯಾಕಿಲ್ಲ. ಇದು ನಮ್ಮದೇ ರಾಜ್ಯ. ಅಲ್ದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾರಾದ್ರೂ ನಿನ್ನ ಮೈಮ್ಯಾಗೆ ಕೈ ಹಾಕಿದ್ರೆ ಆಯ್ತುವರ ಗತೀಂತ ತಿಳ್ಕೋ.

ಅಪ್ಪಾ : ಹಾಗೆಲ್ಲಾ ಕೋಪಿಸ್ಕೋಬಾರ್ದು ರಾಜಾ.

ಹುಡುಗ: ಯಾಕೆ ತಾತಾ ? ಶ್ರೀಮಂತ್ರು ಏರ್‌ಕಂಡಿ ಬಂಗ್ಲೆ, ಒಳ್ಗೆ ಬ್ಲಾಕ್ ಮಾರ್ಕೆಟ್‌ಲ್ಲಿ ಬೇಕಾದಷ್ಟು ಬಿಜಿನೆಸ್ ಮಾಡ್ಕೋದು. ನಾವು ಮಾತ್ರ ಪೂಟ್‌ಪಾತ್‌ಲ್ಲಿ ಬೂಟೀಸ್ ಪಾಲೀಸ್ ಮಾಡಾಕೂ ಲೈಸನ್ಸ್ ತಗೋಬೇಕಾ. ಅವರಪ್ಪ ಸಾಯ್ಲೀಂತ ಪಾಲೀಸ್ ಸಂಪಾದ್ನೇಲೂ ಪೋಲೀಸ್‌ರಿಗೆ ಹಪ್ತಾ ಕೊಡಾಕಿಲ್ವಾ? ದುಡ್ಡೂ ತಗಾಂಡು ಬಡ್ಡೀ ಮಕ್ಳು ರುಬಾಬು ಮಾಡ್ತಾರೆ. ಒಂದಿನ ಅವರ ಕಾಲು ಮುರಿದಾ ಕ್ತೀನಿ ನೋಡು. (ಸಿಗರೇಟು ತೆಗೆದು) ತಾತಾ ತಗೋ.

ಅಪ್ಪಾ : ಏನದು.

ಹುಡುಗ: ಸಿಗರೇಟ್. ಕರಡೀ ಬ್ರಾಂಡು. ನಾನೀ ಪಾಲೀಸ್ ಮಾಡೋಗಂಟ ನಾಲಕ್ ದಂ ಹೊಡಿ. ಎರಡೇ ದಂ ಹೊಡೆದ್ರೆ ಕರಡೀ ಶಕ್ತಿ ಬರು ತ್ತಂತೆ. ಕೆಮ್ಮು ಗಿಮ್ಮು ಇಲ್ಲ ತಾನೆ.

ಅಪ್ಪಾ : ಆಗಲಿ ರಾಜಾ. ಇದ್ಯಾವುದೀ ಬಂಗ್ಲೆ ನಮ್ಮ ಹಿಂದ್ಗಡೆ ?

ಹುಡುಗ: ಅದು ಬಂಗ್ಲೆ ಅಲ್ಲ ತಾತಾ, ಟೇಟರ್ರು. ದಿನಾ ನಾಟಕ ನಡೆಯುತ್ತೆ. ಇಲ್ಲಿಗ್ ಬರೋರೆಲ್ಲಾ ಬಾಳ ಮಂದಿ ಗಾಡೀಲೇ ಬರೋದು,ಗಾಡೀಲೇ ಹೋಗೂದು. ಟಿಕೇಟು ದರಾನೂ ಹಂಗೇ ಐತೆ. ಸೀಟಿಗೆ ಹತ್ತು ಇಪ್ಪತ್ತು. ಏರ್‌ಕಂಡಿ ಟೇಟರಲ್ವಾ ! ಈ ಕಂಪ್ನಿ ನಾಟಕಾ Top ಅಂತಾರೆ ಯಾವಾಗ್ಲೂ ಜನ ಯಾವಾಗ್ಲೂ ದಿನಾ House fullಉ. ಒಳಗೇನ್ ನಡೆಯುತ್ತೇಂತ ನಾನಿನ್ನೂ ನೋಡಿಲ್ಲ. ಹ್ಯಾಂಗಾದ್ರೂ ಒಂದಿನ ನೋಡೇ ಬುಡ್ಬೇಕು. ನಾಟಕಾಂದ್ರೇನು ತಾತಾ. ನೀನೆಂ ದಾದ್ರೂ ನೋಡಿದ್ಯಾ.

ಅಪ್ಪಾ : ಅದೊಂದು ಬಿಟ್ಟು ಬೇರೇನೂ ಕಂಡಿಲ್ಲಾಂತ್ಲೇ ಜೀವನದಲ್ಲಿ ಈ ದುರ್ಗತಿ ಬಂದದ್ದು. ಅದಿರ್ಲಿ ರಾಜ, ಇವತ್ತು ಯಾವ ನಾಟಕಾ. ನೋಡಲ್ಲಿ ಬೋರ್ಡ್‌ಲ್ಲೇನು ಬರೆದದ್ದು.

ಹುಡುಗ: ತಾಳು ನೋಡ್ತೇನೆ....ಜೂ...ಲಿ...ಸಿ...ಂ...ಗರ್...ಹಟ್ ಸಾಲಾ ಏನ್ ಹೆಸರಿಟ್ಟಿದ್ದಾರೆ ನಾಟಕಕ್ಕೆ. ಒಳ್ಳೇ ಹೆಸ್ರನ್ನಾದ್ರೂ ಇಡ್ಬಾರ್ದಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಬೀದೀಲಿ ಒಂದು ನಾಯಿ ಇದೆ ತಾತಾ, ಜೂಲೀಂತ ಕರೆಯೋದು. ಅದ್ರುದ್ದೇ ಕಥೆ ಇರಬೌದೋ ಏನೋ. ಆದ್ರೆ ಈ ಸಿಂಗ ಹೇಗೆ ಗಂಟುಬಿದ್ದ ಈ ಜೂಲೀ ಜತೆ ಬಡ್ಡೀ ಮಗ.

ಅಪ್ಪಾ : ಹಾಗಲ್ಲ ರಾಜಾ. ಜೂಲಿಯಸ್ ಸೀಸರ್ ಇರ್ಬೇಕು.

ಹುಡುಗ: ವ್ಹಾರೆವ್ಹಾ. ಅದು ನಿಂಗೆ ಹೇಗೆ ಗೊತ್ತಾಯ್ತು ?

ಅಪ್ಪಾ : ಈ ನಾಟಕಾ ಚೆನ್ನಾಗಿ ಗೊತ್ತು ನನ್ಗೆ.

ಹುಡುಗ: ಹತ್ತೆರಿಕಿ. ಹಂಗಾರ್ನಾನೇ ಚೆಪ್ಪು ತಕ್ಕಡೀಂತಾಯ್ತಲ್ಲಾ. ಏನಂದೀ ನಾಟ್ಕಾದೆಸ್ರು ?

ಅಪ್ಪಾ : ಜೂಲಿಯಸ್ ಸೀಸರ್.

ಹುಡುಗ: ಹ...ತ್ತೆರಕಿ...ಜೂಲಿಯಸ್...ಸೀಜರ್... ಬಂದೋರೆಲ್ಲಾ ತಾತಾ ಯಾಕ್ಟಿಂಗ್ ಚೆನ್ನಾಗೈತೇಂತ ಹೇಳ್ತಾರಲ್ಲಾ ಈ ಯಾಕ್ಟಿಂಗ್ ಅಂದ್ರೇನು ತಾತಾ. (Bell). ಹಟ್‌ಸಾಲಾ...ಹಿಂಟ್ರೇಲ್ ಆಯ್ತು ತಾತಾ. ಹಿಂಟ್ರೇಲ್ ಮುಂಚೇನೇ ಬೂಟೀಸ್ ಮುಟ್ಟಿಸ್ತೇನೆ ಅಂದಿದ್ದೆ, ಕೊಟ್ಟು ಬರ್ತೇನೆ. ನಾ ಬರೋಗಂಟ ನೀ ಎಲ್ಲೂ ಹೋಗ್ಬೇಡಾ ತಾತಾ.

[ಹೋಗುವನು. ನಾಟಕದ ಪ್ರೇಕ್ಷಕರಿಬ್ಬರು ಈರುಳ್ಳಿ ಭಜೆ ತಿನ್ನುತ್ತಾ ಬರುವರು]

ಪ್ರೇಕ್ಷಕ ೧: Hopeless ಊ. ಈಗಿನ ನಾಟ್ಕಾನೇ ಹೊಲ್ಸು. ಅಲ್ಲಾ ಇವನೆಂಥಾ ಸೀಸರ್. Hair Cutting Saloonನಿನ ಸಿಸರ್ ಹಿಡೀಲಿಕ್ಕೂ ನಾಲಾಯಕ್ಕು. Ceaser ಪಾತ್ರ ನೋಡ್ಬೇಕೂ... ನೋಡ್ಬೇಕು ಆ ನಟ ಸಾಮ್ರಾಟ್ ಕೇಶವರಾವ್ ಜೋಶಿದ್ದು. ಆ ಹಾ ಹಾ... ಏನೊಂದು ನಿಲ್ಲುವ ಭಂಗಿ. ಆ ಒಂದು ಮಾತಿನ ಧಾಟಿ.

ಪ್ರೇಕ್ಷಕ ೨: ಯಾರು ನಟ ಸಾರ್ವಭೌಮರಾ.

ಪ್ರೇಕ್ಷಕ ೧: ಛೆ. ನೀವು ಹೇಳೋದು ನಟ ಸಾರ್ವಭೌಮ ರಾಜಕುಮಾರ್ ಸಿನೆಮಾದಲ್ಲಿ. ನಾ ಹೇಳೋದು ನಟ ಸಾಮ್ರಾಟ್ ಕೇಶವರಾವ್ ಜೋಶಿ ನಾಟಕದಲ್ಲಿ. ಓ...ಹೋ...ಹೋ...ಅವರ ಒಂದೊಂದು ಪಾತ್ರ

*

Sri Vidyabharathi Book Centre, Sringeri

CC-O. In Public Domain. Digitized by eGangotri

ನೋಡಿದ್ರೆ ಮೈ ಜುಂ ಅಂತ ಅನ್ಬೇಕು. ತ್ಚು...ತ್ಚು...ಜೂಲಿಯಸ್ ಸೀಸರ್ ಆಗಿ Stageಗೆ ಬರೋದೇ ತಡ—ಹುಲಿ ಘರ್ಜಿಸಿದಂತೆ ಧ್ವನಿ. ಬರೇ Tiger ಅಲ್ಲಾ Bengal Tiger. ಆನೆ ನಡೆಯುವ ಹಾಗೆ ಠೀವಿ. ರೋಮಾಂಚಕಾರಿ ಅಭಿನಯ. ಏಯ್ Mr. ಸುಮ್ಮನೆ ಅಲ್ಲ ಅವರಿಗೆ ಜನ ಕರ್ನಾಟಕ ನಟ ಸಾಮ್ರಾಟ್ ಅಂತ ಬಿರುದು ಕೊಟ್ಟಿದ್ದು ಗೊತ್ತಾಯ್ತಾ. ಆ ನಟ ಮಾರ್ತಾಂಡನ ಎದುರು ಈ ಇವತ್ತಿನ ಈ ಮಂಗ ಬರೇ ನಟ ಮರ್ಕಟ. ಬರೇ ಜೋಕರ್.

ಪ್ರೇಕ್ಷಕ ೨: ನೀವು ಸ್ವಲ್ಪ ಹಳೇ ಕಾಲದವರೂಂತ ಕಾಣುತ್ತೆ. ಈಗಿನ ಜನರ ನೋಡೋ ದೃಷ್ಟಿಕೋನ ಬದಲಾಗಿದೆ. ಆದ್ರಿಂದ್ಲೇ ಅದಕ್ಕೆ ಸರಿಯಾಗಿ ಈಗಿನವರ ಅಭಿನಯ. ಅಲ್ಲಾ ನಮಗ್ಯಾಕಪ್ಪಾ ಚರ್ಚೆ–ಈ ಜಗಳ. ನಾವೇನಾದ್ರೂ ಟಿಕೇಟಿಗೆ ದುಡ್ಡು ಕೊಟ್ಟಿದ್ದೇವಾ. Complimentary pass ಅಲ್ವಾ? ಅಂದ್ಹಾಗೆ ನೀವು ಕೇಶವರಾವ್ ಜೋಶಿಯವರನ್ನ ಯಾವ ನಾಟಕದಲ್ಲೆಲ್ಲಾ ನೋಡಿದ್ದೀರಿ.

ಪ್ರೇಕ್ಷಕ ೧: ನೀವೇನು ತಿಳ್ಕೊಂಡ್ರಿ? ನಾನೇನು ಬಂಡಲ್ ಹೊಡೀತೀನೀಂತ್ಲಾ? ಅಲ್ಲಪ್ಪಾ, ಎಂಥಾ ಒಂದು acting ಅಂತ್ಹೇಳ್ತೀರಾ. ಸಾಧಾರಣ ನೋಡಿ ಓ ಅಲ್ಲಿ ಕೂತ್ಕೊಂಡಿದ್ದಾನಲ್ಲಾ ಆ ಮುದುಕ––ಅವನ ಹಾಗೇ ನೋಡ್ಲಿಕ್ಕೆ. ಥೇಟು ಅವನದ್ದೇ ಮುಖ ಲಕ್ಷಣ, ಪ್ರಾಯ ಕೂಡಾ ಸಾಧಾರಣ ಅವನಷ್ಟೇ ಆಗ್ಬಹುದು.

ಪ್ರೇಕ್ಷಕ ೨: ಒಳ್ಳೇ ಹೋಲಿಕೆ ಬಿಡಿ. ಅಲ್ಲಾ ನಿಮ್ಮ ಲೆಕ್ಕದಲ್ಲಿ ಆ ನಟ ಸಾಮ್ರಾಟ್ ಈ ಬೀದಿ ಭಿಕಾರಿ ಹಾಗಿದ್ದಾಂತ ಹೇಳಿದಾಗಾಯ್ತು.

ಪ್ರೇಕ್ಷಕ ೧: ಛೆ...ಒಂದು ಮಾತಿಗೆ ಹೇಳಿದೆ ಅಷ್ಟೆ. ಅವನೆಲ್ಲಿ, ಈ ಪ್ರಾಣಿಯೆಲ್ಲಿ. ಆದ್ರೆ ನೋಡ್ಲಿಕ್ಕೆ ಮಾತ್ರ ಮಾರಾಯ್ರೇ ಥೇಟ್ ಇವನ ಹಾಗೇ. (Bell). ಬಿಡಿ ಆ ಸುದ್ದಿ...ಬೆಲ್ಲಾಯ್ತು. ಮೂರನೇ ಅಂಕ ಶುರುವಾಗೋ ಮೊದ್ಲೇ ನಾವು ನಮ್ಮ ಸೀಟಿನಲ್ಲಿರ್ಬೇಕು. ಇಲ್ಲದಿದ್ರೆ ಕೊನೆಯ ಅಂಕದಲ್ಲಿ ರುಚಿಯೇ ಇರೋದಿಲ್ಲಾಂದ್ರೆ. (ಅಪ್ಪಾ ಅವರಿಗೆ ಭಜಿ ಕೊಡುತ್ತಾ) ತಕೋಪ್ಪಾ ಈ ನೀರುಳ್ಳಿ ಭಜಿ ತಿನ್ನು.

ಅಪ್ಪಾ : ಆಗಲಿ ಸ್ವಾಮಿ. ಉಪಕಾರ ತಮ್ಮದು. ಆದೇನು ನೀವು ನನ್ನ ವಿಚಾರ ಏನೋ ಅಂತಿದ್ರಲ್ಲಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರೇಕ್ಷಕ ೧: ನಿನ್ನ ವಿಚಾರ ಅಲ್ಲ ಮಹಾರಾಯ, ನಿನಗೆ ಕೈ ತೋರಿಸಿದ್ದು ಮಾತ್ರ. ಮಾತಾಡ್ತಾ ಇದ್ದದ್ದು ಆ ನಟ ಸಾಮ್ರಾಟ್ ಕೇಶವರಾವ್ ಜೋಶಿ ವಿಷಯ.

ಅಪ್ಪಾ : ಓಹೋ ಕೇಶವರಾವ್ ಜೋಶೀನಾ ? ಬಿಡಿ ಮುಗೀತವನ ಕಥೆ.

ಪ್ರೇಕ್ಷಕ ೧: ಏನು ಸತ್ತೋಗಿ ಬಿಟ್ನಾ.

ಅಪ್ಪಾ : ಹಾಗೇಂತ್ಲೇ ತಿಳ್ಕೊಳ್ಳಿ.

ಪ್ರೇಕ್ಷಕ ೧: Paper ನಲ್ಲೆಲ್ಲೂ ನೋಡಿದ್ಹಾಗೆ ಇಲ್ವಲ್ಲಾ ಈ ಸುದ್ದಿ ?

ಅಪ್ಪಾ : Paper ನಲ್ಲಿ ಹ್ಯಾಗೆ ಬಂದೀತಾ ಸುದ್ದಿ. ಹೋಗೋಕ್ಮುಂಚೆ Press Conference ಕರೆಯೋದಿಕ್ಕೆ ಮರೆತ್ಹೋಗಿರ್ಬೇಕು. ಹೋಗಲಿ ಬಿಡಿ. ಸತ್ಮೇಲೆ ಸುದ್ದಿ ಬಂದ್ರೇನು ಬಿಟ್ರೇನು. ಸಾಯುವವರು ನೋಟೀಸ್ ಕೊಟ್ಟು ಸಾಯೋದಿಲ್ಲ ತಾನೆ ! ಒಂದು ವೇಳೆ ಆ ರೀತಿ ಸತ್ರೂ ಜನ ಏನು ತಾನೆ ಮಾಡಿಯಾರು? ಒಬ್ಬ ಸತ್ತಾಂತ ಸಭೆ ಕರೆದು ಶ್ರದ್ಧಾಂಜಲಿ ಅರ್ಪಿಸಿ ಮೃತನ ಆತ್ಮಕ್ಕೆ ಶಾಂತಿ ಕೋರಿ ಎರಡು ನಿಮಿಷ ಮೌನದಲ್ಲಿ ನಿಲ್ಲೊ ನಾಟಕ ಮಾಡ್ಬಹುದು. ಸತ್ತವನು ಶ್ರೀಮಂತನಾಗಿದ್ರೆ Paperನಲ್ಲಿ ಕಪ್ಪು ಚೌಕಟ್ಟಿನೊಳಗೆ Photo ಹಾಕಿಸಬಹುದು. ಅದೂ ಅವರ ಮಕ್ಕಳು ದುಡ್ಡು ಕೊಟ್ರೆ. ಸತ್ತವನು ವ್ಯಕ್ತಿ ಬರೇ ನಾಟಕಕಾರನಾಗಿದ್ರೆ ಅವರವರ ಪ್ರಸಿದ್ಧಿಗಾಗಿ ನಾಟಕ ಸ್ಪರ್ಧೆ ಏರ್ಪಡಿಸಬಹುದು. ಸ್ಪರ್ಧೆಗೇಂತ ನಾಟಕ ಬರ್ಲಿ, ಬಾರದೆ ಇರ್ಲಿ. ಆದ್ರೆ ಆ ಸತ್ತು ಹೋದವ ಇವರ ಕಣ್ಣಿನ ಕೃತಕ ನೀರು ನೋಡೋದಕ್ಕೆ ನಿಲ್ತಾನೇನು ? ಹೋಗಿಯೇ ಬಿಡ್ತಾನೆ. ಆಮೇಲೆ ಅವನೆಲ್ಲೋ ಇವರೆಲ್ಲೋ. ನಿಜವಾಗಿ ಹೇಳೋದಾದ್ರೆ ಈ ಜೀವಂತ ಜಗತ್ತಿನಲ್ಲಿ ಸತ್ತವರಿಗಾಗಿ ಸಂತಾಪ ಸೂಚಿಸುವ ರೀತಿ ಅರ್ಥ ಮಾಡಿಕೊಂಡ್ರೆ ಯಾರೂ ಸಾಯೋದಿಕ್ಕೇ ಸಿದ್ಧರಾಗ್ಲಿಕ್ಕಿಲ್ಲ. ಬದುಕೋದಕ್ಕಂತೂ ಬಿಡೋದೂ ಇಲ್ಲ. ಆದ್ರಿಂದ ಒಳ್ಳೇದೇ ಆಯ್ತು ಬಿಡಿ ಕೇಶವರಾವ್ ಕಣ್ಮರೆಯಾದದ್ದು.

ಪ್ರೇಕ್ಷಕ ೨: ಮುದುಕನಿಗೆ ಮುದಿಭ್ರಾಂತಿಯಾದ್ರೂ ಹೇಳೋ ಮಾತು ಅರ್ಥ ಗರ್ಭಿತವಾಗಿದೆ! ಏನಂತೀರಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರೇಕ್ಷಕ ೧: ಈ ದುರಂತ ಸುದ್ದೀನ ನಾನಿವತ್ತೇ ಕೇಳಿದ್ದು; ವಿಚಾರಿಸ್ಬೇಕು. ನಿಜವೊ ಸುಳ್ಳೋಂತ. ಬಾರಯ್ಯ ಶುರುವಾಗ್ಬಿಟ್ತಲ್ಲ ನಾಟಕ ಅಲ್ಲಿ.

ಹುಡುಗ: (ಪ್ರವೇಶಿಸಿ) ಏನು ಹೇಳ್ತಾ ಇದ್ರು ಅಸಾಮಿಗಳು ?

ಅಪ್ಪಾ : ರಾಜಾ, ಅವರ ಹತ್ರ ತಮಾಷೆಗೊಂದು ಸುಳ್ಳು ಹೇಳಿದೆ. ಅವ್ರು ತಿಳ್ಕೊಂಡ್ರು ಕೇಶವರಾವ್ ಜೋಶಿ ಸತ್ತಾಂತ.

ಹುಡುಗ: ಯಾರವ ಮಗ ಕೇಶವರಾವ್ ಜೋಶಿ ?

ಅಪ್ಪಾ : ಅವನೊಬ್ಬ ನಾಟ್ಕದಲ್ಲಿ ಪಾರ್ಟು ಮಾಡ್ಕೊಂಡಿದ್ದ ನಟ.

ಹುಡುಗ: ಈಗೆಲ್ಲಿ ಸತ್ತುಹೋದ ?

ಅಪ್ಪಾ : ಯಾರಿಗ್ಗೊತ್ತು. ಸತ್ತಿದ್ದಾನೋ ಬದುಕಿದ್ದಾನೋಂತ. ಬ್ರಹ್ಮ ಸೃಷ್ಟಿಯಲ್ಲಿ ಎಷ್ಟೋ ಜನ ಹುಟ್ತಾರೆ, ಸಾಯ್ತಾರೆ ಬಿಡು. ಆದ್ರೆ ಕೆಲವರ ಸ್ಮರಣೆಯಲ್ಲಾದ್ರೂ ಕಲಾವಿದರು ಉಳೀತಾರಲ್ಲಾ ಎಂಬ ಸಮಾಧಾನ ಸಿಕ್ತು.

ಹುಡುಗ: ತಾತಾ ನೀನೇನದು ಬಾಯಿ ಚಪ್ಪರಿಸ್ತಾ ಇರೋದು.

ಅಪ್ಪಾ : ಅದೇನೋ ಈಗ ಹೋದವರು ಕೊಟ್ಟ ಭಜಿ.

ಹುಡುಗ: ಥೂ ಬಿಸಾಕು. ಎಣ್ಣೆ ವಾಸನೆ ಬರ್ತೈತೆಂತ ನಿನ್ನ ಕೈಗೆ ಕೊಟ್ಟು ಹೋಗವ್ರೆ. ನೀನೊಬ್ಬ ಭಿಕಾರೀಂತ ತಿಳ್ಕೊಂಡವ್ರೆ. ಯಾರ್ಯಾರ ಎಂಜಲಿಗೆ ಹೀಗೆ ಕೈ ಹಾಕಬ್ಯಾಡಾಂತ ನಾ ಎಷ್ಟು ದಫಾ ಹೇಳಿಲ್ಲ. ಹಸಿವಾಯ್ತೂಂದ್ರೆ ನಾ ಕೊಡಾಕಿಲ್ವಾ ?

ಅಪ್ಪಾ : ಹಸಿವು ಅಂದ್ರೇನು ಅನ್ನೋದೇ ಮರೆತುಹೋಗಿದೆ ರಾಜಾ.

ಹುಡುಗ: ತಗೋ ನೋಡು ನಾನೇ ತಗೊಂಡುಬಂದಿನ್ನಿ ಬಿಸಿ ಬಿಸಿ ಭಜೆ; ತಿನ್ನು. ಇನ್ನು ಮೇಲೆ ನಾ ಹೇಳಿದಂಗೆ ಕೇಳ್ತಿಯಲ್ಲ ? ನೀನಿವತ್ತು ನನ್ನ ಮನೆಗೆ ಬರ್ಲೇಬೇಕು.

ಅಪ್ಪಾ ; ನಿನಗೂ ಒಂದು ಮನೆ ಇದೆಯೇ ?

ಹುಡುಗ: ಮನೇಂದ್ರೆ ಮಲಗೋ ಜಾಗ. ಮೇಲೆ ಆಕಾಶ, ಕೆಳಗೆ ಭೂಮಿ. ಆಕಾಶ ಮಹಲ್ ಅಂತ ಕರೀಬೌದು. ಆ ದೂರದಲ್ಲಿ ಕಾಣ್ತೈತಲ್ಲಾ ರೈಲ್ವೇ ಲೈನು ಅದ್ರ ಪಕ್ಕದಲ್ಲೇ. ಜಾಗ ಬೇಕಾದಷ್ಟು. ತೆ [illegible] ಬಂದ್ರೆ ಮಾತ್ರ ದೇವ್ರೇ ಗತಿ. ಬಾಕಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮಯದಲ್ಲಿ ಈ ಮುನ್ಸಿಪಾಲಿಟಿಯವರ ಕಾಟ. ಮಾಮೂಲು ಸರಿಯಾಗಿ ಮುಟ್ಟಿಸಿಬಿಟ್ರೆ ಅಲ್ಲಿ ನಾನೇ ರಾಜಾ. ಬೇರೆ ಮಂದೀನೂ ಮಸ್ತಾಗಿ ಇದ್ದಾವ್ರೆ. ಅವ್ರಿಗೆಲ್ಲಾ ಸಹಾಯಾನೂ ಮಾಡ್ಬೇಕು— ಕೆಲವರಿಗೆ ಚಾ ಕಾಫಿ. ಕೆಲವರ ಪರವಾಗಿ ಮಾರಾಮಾರಿ. ಅದೊಂದು ಪ್ರಪಂಚಾನೇ ಬೇರೆ. ಅಲ್ಲಿನ ಗೋಳು ಪರಿಹಾರ ಮಾಡೋದಿಕ್ಕೆ ಪರಮಾತ್ಮಂಗೂ ಆಗಾಕಿಲ್ಲ. ಅದನ್ನ ಅವ್ರುವ್ರೇ ಸುಧಾರಿಸಿಕೋಬೇಕು. ನಮಗೆ ಅಡಿಗೆ ಮಾಡೋ ಮಾತಾಯಿ ಒಬ್ಳಿದ್ದಾಳೆ. ಪೈಸಾ ಕೊಟ್ರೆ ಬೇಯಿಸಿ ಹಾಕ್ತಾಳೆ. ಇವತ್ತು ಅವಳಿಗೆ ಮೈ ಚೆನ್ನಾಗಿಲ್ಲ. ಅವ್ಳಿಗೂ ಇವತ್ತು ನಾವೇ ಬೇಯಿಸಿ ಹಾಕ್ಬೇಕು. ಅಲ್ದೆ ದವಾನೂ ಒಯ್ಯಬೇಕು. ಅದಕ್ಕೇ ಒಂದೆರಡು ಗಿರಾಕಿ ಜಾಸ್ತೀನೇ ಬೇಕು. ಸಿಕ್ತಾರೆ ಬಿಡು. ಕೆಲ್ಸಕ್ಕೇನು ಕಮ್ಮಿ.

ಅಪ್ಪಾ : ನಿನಗೆ ತಂದೆ ತಾಯಿ ಯಾರೂ ಇಲ್ವೇ.

ಹುಡುಗ: ಎಲ್ಲಾರೂ ಅಪ್ರೆ ತಾತಾ. ನಿಂಗೆ ನಿನ್ನ ಮಗ ದೂಡಿದ್ರೆ ನಂಗೆ ನನ್ನಪ್ಪ ದೂಡಿದ.

ಅಪ್ಪಾ : ಏನು ನಿನ್ನಂಥಾ ಮಗನ್ನ ಹೊರಗೆ ಹಾಕಿದ್ರೇ ? ಕರೆದುತಾ ಇಲ್ಲಿಗವನ್ನ ಅವರಿಗೆ ಸರಿಯಾಗಿ ಬುದ್ಧಿ ಹೇಳಿ ನಾನು ಸರಿದಾರಿಗೆ ತರ್ತೇನೆ.

ಹುಡುಗ: ಎಲ್ಲಿದ್ದಾರವ್ರಿಲ್ಲಿ ? ಇದ್ದಾರೆ ನಮ್ಮೂರಲ್ಲಿ. ಅಲ್ಲಾ ಅವ್ರಾದ್ರೂ ಏನು ಮಾಡೋಕಾಗೈತೆ, ಪಾಪ. ದುಡಿಯಾಕೆ ನಾಲ್ಕು ಕೈಯಾದ್ರೆ ತಿನ್ನೋಕೆ ಎಂಟು ಬಾಯಿ. ಅವ್ರುವ್ರು ಹೊಟ್ಟೆ ತುಂಬೋದೇ ಕಷ್ಟ. ಇದ್ರ ಮೇಲೆ ನಾ ಇಸ್ಕೂಲಿಗೆ ಹೋಗ್ಬೇಕಂತೆ. ಹೊಟ್ಟೆ ಹಸಿವಾದಾಗ ತಲೆಗೆ ಹತ್ತುತ್ತಾ ಇದ್ಯೆ. ಸಾಲೆಗೆ ಹೋಗೋದೇ ಬುಟ್‌ಬುಟ್ಟೆ. ಒದ್ದು ಹೊರಗ್ಹಾಕಿದ್ರು ನನ್ನ. ಈ ಚೀನಾದೇಸದ ಚರಿತ್ರೆ, ಜಪಾನಿ ದೇಸದ ಭೂಗೋಳ, ಅಮೇರಿಕಾದ ಇಜ್ಞಾನ ಕಲ್ತು ನಂಗೇನಾಗ್ಬೇಕೈತೆ. ನಮ್ಮಪ್ಪ ದಿನ ಇಡೀ ಕುಡಿಯೋದು, ಹೆಂಡ್ತಿ ಮಕ್ಕಳಿಗೆ ಹೊಡೆಯೋದು. ಅದಿಕ್ಕೆ ಊರೇ ಬಿಟ್ಟೆ. ಅಲ್ಲಿಂದ ಹೊರಟೇ ಬಂದೆ. ಹ್ಯಾಗಾದ್ರೂ ಒಂದೈದು ರೂಪ್ಯಾ ಆದ್ರೂ ಸಂಪಾದ್ನೆ ಆಗುತ್ತಲ್ಲಾ ಇಲ್ಲಿ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಆದ್ರೂ ಹಿಂದೆ ಹೋಗಿ ತಂದೆ ತಾಯನ್ನ ಎಂದಾದ್ರೂ ಒಮ್ಮೆ ನೋಡ್ಬೇಕೂಂತನ್ನಿಸೋದಿಲ್ವೇ ?

ಹುಡುಗ: ಆ ಇಚಾರ ಮಾಡೋಕೆಲ್ಲೈತೆ ಪುರಸೊತ್ತು. ಬೂಟೀಸ್ ಮಣ್ಣು ತೆಗೆಯೋದ್ರಲ್ಲೇ ಹೋಗುತ್ತೆ ಒತ್ತು. ತಾತಾ ನಿಮ್ಮಂಥಾ ಬುದ್ಧಿ ವಂತ್ರು ಬುದ್ಧಿ ಕೆಡೋದೇ ಇಲ್ಲಿ. ತಂದೆ, ತಾಯಿ, ಅಣ್ಣ, ತಮ್ಮ, ಭಾವ, ಮಾವಾಂತ ಒಬ್ರಿಗೊಬ್ರು ಗಂಟ್ಹಾಕಿಕೊಳ್ಳೋದು. ನೀನೀಗ ಆ ಗಂಟಲ್ಲೇ ಸಿಕ್ಕಬಿದ್ದಿದ್ದಿ. ಅದಿಕ್ಕೇನೇವೆ ಈ ಗೋಳು ತಾತಾ. ನಾ ಒಂದು ಪ್ರಶ್ನೆ ಕೇಳ್ಲಾ. ನಾವು ಬದುಕಿದ್ದಾಗ ಇಟ್ಕೊಂಡಿರೋ ಈ ನೆಂಟಸ್ತಿಕೆ ನಾವು ಸತ್ಮೇಲೆ ಇದೇ ಸಂಬಂಧ ಈ ನೆಂಟಸ್ತಿಕೆ ದೇವ್ರು ಇಟ್ಟಿರ್ರಾನಾ. ಅಂದ್ಮೇಲೆ ನನಗೆ ನೀನಿರೋವಾಗ ನನ್ನ ತಂದೆ ಯೋಚ್ನೆ ಬರ್ಲೇ ಒಲ್ದು.

ಅಪ್ಪಾ : ತುಂಬಾ ವ್ಯವಹಾರ ಜ್ಞಾನ ಇದೆ ನಿನ್ಗೆ. ನಾನೇ ಮೂರ್ಖ, ನನ ಗೊಂದೂ ತಿಳೀಲಿಲ್ಲ. ಬೆಳ್ಳಗೆ ಕಾಣೋದೆಲ್ಲ ಹಾಲೂಂತ ತಿಳ್ಕೊಂಡಿದ್ದೆ. ನನ್ನ ಮಕ್ಕಳು ಮರೀಂತ ನಂಬಿ ಸೋತೆ ರಾಜಾ.

ಹುಡುಗ: ಎಲ್ಲಾ ಸುಳ್ಳು ತಾತಾ. ಯಾರಿಗೆ ಯಾರಿಲ್ಲ. ಎಲ್ಲ ಘೋಂಗಿ ಬಜಾರ್. ಪೈಸಾ ಫೇಕ್ ಮಜಾ ದೇಖ್. ಅದಕ್ಕಲ್ಲವೇ ಬಂದದ್ದು ನಾನು ಎಲ್ರನ್ನೂ ಬಿಟ್ಟು. ಎಲ್ಲಾ ಸಂಬಂಧ ಕಡಿದು ಹಾಕಿದ್ರೇನೇ ಸರಿಯಾಗಿ ನಿದ್ದೆ ಬೀಳೋದು.

ಅಪ್ಪಾ : ಎಂತಹ ಸತ್ಯದ ಮಾತು. ಸಂಬಂಧ ಎಲ್ಲ ಕಡಿದು ಹಾಕ್ಬೇಕು. ಆದ್ರೆ ಹ್ಯಾಗೆ ಸಾಧ್ಯ ?

ಹುಡುಗ: ಅದೆಲ್ಲಾ ನಂಗೆ ತಿಳಿಯಾಕಿಲ್ಲ. ತಾತಾ ನಾ ಯಾರನ್ನೂ ನಂಬಿ ಕೊಂಡಿಲ್ಲ. ನನ್ನನ್ನು ಯಾರೂ ನಂಬಿಕೊಂಡಿರಬೇಕಾದ್ದೂ ಇಲ್ಲ.

[ಥಿಯೇಟರಿನ ದೀಪ ಆರಿ ಕತ್ತಲಾಗುತ್ತದೆ.]

ಅಪ್ಪಾ : ಅದೇನು ಮಗೂ ದೀಪ ಆರಿತು, ಕತ್ತಲಾಯಿತು.

ಹುಡುಗ: ತಾತಾ ನಾಟಕ ಮುಗೀತಾ ಬಂತು. ಮನೆಗ್ಹೋಗೋಣ. ತಾತಾ ಇನ್ನು ಮೇಲೆ ನೀನು ನಾನು ಹೇಳಿದಂತೆ ಕೇಳ್ಬೇಕು. ಎಲ್ಲೆಲ್ಲಿ ಅಡ್ಡಾಡೋಕಿಲ್ಲ. ಸಿಕ್ಕಿದ್ದೆಲ್ಲಾ ತಿನ್ನೋದಕ್ಕಿಲ್ಲ. ಬಾಯಿಗೆ ಬಂದ ದ್ದೆಲ್ಲಾ ಮಾತಾಡಕ್ಕಿಲ್ಲ. ನಮ್ಮೆಲ್ರ ಜತೆ ಆರಾಮವಾಗಿರೋದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಉಳಿದಷ್ಟು ಕಾಲ ಸಂತೋಷದಿಂದ ಕಳೆಯೋದು. ಬಾ ನನ್ನ ಕೈ ಹಿಡಿದುಕೋ.

[ವಿಠಲನ ಪ್ರವೇಶ]

ವಿಠಲ : ಅಪ್ಪಾ ಸಾಹೇಬ್.

[ಉದ್ದಂಡ ನಮಸ್ಕಾರ ಮಾಡುವನು]

ಅಪ್ಪಾ : (ಗಾಬರಿಯಲ್ಲಿ) ಯಾರಪ್ಪಾ ನೀನು. ದೃಷ್ಟಿ ಮಂದವಾಗಿದೆ. ಕಣ್ಣು ಸರಿಯಾಗಿ ಕಾಣ್ತಾ ಇಲ್ಲ.

ವಿಠಲ : ಅಪ್ಪಾ ಸಾಹೇಬ್, ಗುರುತಾಗಿಲ್ವೇ. ನಾನು ನಿಮ್ಮ ವಿಠಲ.

ಅಪ್ಪಾ : ವಿಠಲಾ ! ಅಂದ್ರೆ Hamletನ ಅಪ್ಪನ ಭೂತ.

ಹುಡುಗ: ತಾತಾ ಈತ ಮನಸ್ಯಾ, ಭೂತ ಅಲ್ಲ. ಯಾರಯ್ಯಾ ನೀನು ?

ಅಪ್ಪಾ : ಹೌದು ರಾಜಾ. ಈತ ಮನುಷ್ಯತ್ವವನ್ನು ಕಳೆದುಕೊಂಡ ಮನುಷ್ಯ ನಂತೆ ಕಾಣುವ ಭೂತವಲ್ಲ. ಭೂತದ ವೇಷ ಹಾಕ್ತಿದ್ರೂ ಮನುಷ್ಯತ್ವ ಇನ್ನೂ ಉಳಿಸಿಕೊಂಡ ಸಾಮಾನ್ಯ ಮನುಷ್ಯ. ವಿಠಲ ಯಾಕಿಲ್ಲಿ ನನ್ನ ಬೆನ್ನಟ್ಟಿ ಬರ್ತಾ ಇದ್ದಿ ಹೇಳು ?

ವಿಠಲ : ಅಪ್ಪಾ ಸಾಹೇಬ್ ದೇವರೇ ನನ್ನನ್ನು ಇಲ್ಲಿಗೆ ಕಳುಹಿಸಿರಬೇಕು. ಮಾಲತಿ ಅಮ್ಮನ ಮನೆ ಕೆಲ್ಸ ಬಿಟ್ಟು ನಿಮ್ಮನ್ನು ಹುಡುಕುತ್ತಾ ನಾನೆಷ್ಟೋ ಊರು ತಿರುಗಾಡಿದೆ. ಹಗಲು ರಾತ್ರಿ ಸುತ್ತಾಡಿದೆ. ನಿನ್ನೆ ರಾತ್ರಿ ಬೆಂಗಳೂರಿಗೂ ಬಂದೆ. ನಿಮ್ಮ ಮಗ ಮಾಧವರಾಯ ರನ್ನೂ ಕಂಡೆ. ಎಲ್ರೂ ನಿಮ್ಮನ್ನು ಹುಡುಕುತ್ತಿದ್ದಾರೆ. ಯಾರಿಗೂ ನಿಮ್ಮ ಪತ್ತೇನೇ ಸಿಗಲಿಲ್ಲ. ನಾನೀಗ ಈ ಥಿಯೇಟರಿನ ಬಳಿ ಬಸ್ಸಿ ನಲ್ಲಿ ಹೋಗ್ತಿದ್ದಾಗ ನೀವಿಲ್ಲಿ ಕುಳಿತಂತೆ ಕಂಡಿತು. ಆದ್ರೆ Bus stop ನಲ್ಲಿ ಇಳಿದು ಇಲ್ಲಿಗೆ ಬರೋವಷ್ಟ್ರಲ್ಲಿ ನೀವಿಲ್ಲಿರಲಿಲ್ಲ. ಮಾಧವರಾಯ ರಿಗೆ ತಿಳಿಸಿ ಬಿಡೋಣಾಂತ ಅವರಿಗೆ Phone ಮಾಡಿ ಪುನಃ ಬಂದಾಗ ನಿಮ್ಮನ್ನು ಕಂಡೆ. ಅವರೆಲ್ಲ ಈಗ ಇಲ್ಲಿಗೆ ಬರಬಹುದು.

ಅಪ್ಪಾ : ಅವ್ರೆಲ್ಲಾ ಅಂದ್ರೆ ಯಾರು ?

ವಿಠಲ : ಮಾಧವರಾಯರು, ಶಾರದಮ್ಮ, ಎಲ್ಲಾ ಬರ್ತೀನೀಂತಂದ್ರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ನನ್ನ ಮುನ್ನಿ ಕೂಡಾ.

ವಿಠಲ : ಅಪ್ಪಾ ಸಾಹೇಬ್ ಮುನ್ನಿಯಂತೂ ನಿಮ್ಮದೇ ಸ್ಮರಣೆಯಲ್ಲಿದೆ ಮಗು.

ಅಪ್ಪಾ : ಸರಕಾರ್ ಕೂಡಾ ಬರ್ತ್ತಾಳ್ಯೇ.

ವಿಠಲ : ಅಪ್ಪಾ ಸಾಹೇಬ್.

[ಕಣ್ಣೊರಸುವನು]

ಅಪ್ಪಾ : ವಿಠಲಾ ಕಣ್ಣೊರಸಿಕೋ. ನನಗ್ಗೊತ್ತು ನನ್ನ ಸರಕಾರ್ ಬರೋ ಹಾಗಿಲ್ಲ. ಕಾವೇರಿ ಬದುಕಿಲ್ಲ, ಬರೋದು ಸಾಧ್ಯವೇ ಇಲ್ಲ.

ಹುಡುಗ: ತಾತಾ ಈ ಸಂಬಂಧ ಎಲ್ಲಾ ಕಡಿದು ಹಾಕ್ಬೇಕೂಂತ ಹೇಳ್ತಿಲ್ವೇ. ಪುನಃ ಈ ಸಂಸಾರದ ಬಲೆಗೆ ಸಿಕ್ಕಿಕೊಳ್ತೀಯಾ. ನಿನ್ನನ್ನವ್ರು ಮನೆಗೆ ಕರೆದುಕೊಂಡು ಹೋಗ್ತಾವ್ರೆ. ಜೈಲ್‌ನಂಥಾ ಬಂಗ್ಲೆ ಒಳಗೆ ಹಾಕ್ತಾವ್ರೆ. ನಿನ್ನ ತಲೆ ಹಾಳು ಮಾಡ್ತಾವ್ರೆ. ಹೋಗ್ಬೇಡಾ ತಾತಾ ನೀನಲ್ಲಿಗೆ.

ಅಪ್ಪಾ : ಇಲ್ಲ ರಾಜಾ. ನನಗೀಗ ಯಾವ ಆಸೇನೂ ಉಳಿದಿಲ್ಲ. ಯಾರ ಆಶ್ರಯವೂ ಬೇಕಿಲ್ಲ. ನೀನಿರುವಾಗ ನನಗ್ಯಾತರ ಚಿಂತೆ. (Car Horn.)

ವಿಠಲ : ಅಪ್ಪಾ ಸಾಹೇಬ್! ಎಲ್ರೂ ಬಂದ್ರು. ಮಾಲತೀಮ್ಮ ಕೂಡಾ ಬಂದಿದ್ದಾರೆ.

ಅಪ್ಪಾ : ರಾಜಾ ನನ್ನ ಕೈ ಬಿಡಬೇಡ. ನನ್ನ ಕಾಲು ನಡುಗ್ತಾ ಇದೆ. ನನಗೇನೂ ಕಾಣಿಸ್ತಾ ಇಲ್ಲ.

[ಇಷ್ಟರಲ್ಲಿ ಮಾಧು, ಸುಧಾಕರ್, ಮಾಲತಿ, ಶಾರದ ಹಾಗೂ ಮುನ್ನಿ ಪ್ರವೇಶಿಸುತ್ತಾರೆ. ದಿನ್ನೆಯ ಮೇಲೆ ಕುಳಿತ ಅಪ್ಪಾವರನ್ನು ಕಂಡು ಅವಾಕ್ಕಾಗಿ ನೋಡುತ್ತಾ ಸ್ತಬ್ಧರಾಗಿ ನಿಲ್ಲುವರು. ಮುನ್ನಿ ಮಾತ್ರ ಓಡಿ ಬಂದು ಅಜ್ಜಾ ಎನ್ನುತ್ತಾ ಅಪ್ಪಾ ಅವರ ಕೊರಳು ಹಿಡಿದು ಅಪ್ಪಿಕೊಳ್ಳುವಳು]

ಮುನ್ನಿ : ಅಜ್ಜಾ ನೀನೆಷ್ಟು ಕೆಟ್ಟವ್ನು. ಯಾಕೆ ನಮ್ಮನ್ನೆಲ್ಲಾ ಬಿಟ್ಟು ಹೋದ್ದು.

ಅಪ್ಪಾ : ಮುನ್ನೀ ನೀನೆಲ್ಲಿ ಹೋಗಿದ್ದೆ ಮಗೂ.

ಮುನ್ನಿ : ನಾನೆಲ್ಲೂ ಹೋಗಿಲ್ಲ. ತಪ್ಪಿಸಿಕೊಂಡು ಹೋಗಿದ್ದು ನೀನೇ. ಅಜ್ಜಾ ಇನ್ನೆಲ್ಲೂ ಹೋಗ್ಬೇಡಾ ಅಜ್ಜಾ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪ್ಪಾ : ಇಲ್ಲ ಮುನ್ನೀ ಹೋಗೋಲ್ಲ. ಒಂದ್ಸೇಳೆ ಹೋದ್ರೆ ಆಮೇಲೆ ಯಾರಿಗೂ ಸಿಕ್ಕೋದಿಲ್ಲ. ಹೋಗವ್ಮಾ ನನ್ನ ಮೈ ಕೊಳಕಾಗಿದೆ. ನಿನ್ನ ಬಟ್ಟೆ ಕೊಳೆ ಆದೀತು. ಎಂಟು ದಿವಸದ ಧೂಳು ನಿನ್ನ ಮೈಗಂಟೀತು.

[ಮುನ್ನಿ ದೂರ ಹೋಗುವಳು]

ಹುಡುಗ: ತಾತಾ ಬಾ ಹೋಗೋಣ.

ಮಾಲತಿ: ಇಲ್ಲ ಅಪ್ಪಾ. ನೀವೆಲ್ಲೂ ಹೋಗಬಾರದು. ನಮ್ಮ ಜತೇನೇ ಬರ ಬೇಕು.

ಮಾಧು : ಅಪ್ಪಾ ನನ್ನನ್ನು ಕ್ಷಮಿಸಿ ಮನೆಗೆ ಬನ್ನಿ. ಹಿಂದಿನದೆಲ್ಲಾ ಮರೆತು ಬಿಡಿ. (ಅವರ ಕೈ ಹಿಡಿದು) ಬನ್ನಿ ಅಪ್ಪಾ.

ಹುಡುಗ: (ಮಧ್ಯೆ ನಿಂತು) ಸಾಧ್ಯವಿಲ್ಲ. ನನ್ನ ತಾತಾ ನನ್ನ ಮನೇಲೇ ಇರೋದು. ನೀವೆಲ್ಲಾ ಕೈಬಿಟ್ಟಾಗ ಅವರ ಕೈ ಹಿಡ್ಕೊಂಡೋನು ನಾನು. ನನ್ನ ಬಿಟ್ಟು ಎಲ್ಲೂ ಹೋಗೋದಿಲ್ಲ ಈಗ ಅವ್ರು. ನೀವೆಷ್ಟು ಪ್ರಯತ್ನ ಪಟ್ರೂ ಆಗಾಕಿಲ್ಲ. ಬಾ ತಾತಾ. (ಕೈ ಹಿಡಿದೆಳೆಯುವನು)

ಮಾಧು : ಬದ್ಮಾಶ್ ನೀನ್ಯಾರೋ ನಮಗೆ ಹೇಳೋನು ? ನಿನಗೇನು ಸಂಬಂಧ ಇದ್ರಲ್ಲಿ ? ಕೈ ಬಿಡ್ತಿಯೋ ಇಲ್ವೋ. ವಿಠಲಾ ಕಾರಿನ ಹತ್ತಿರ ಪೋಲೀಸ್ ಇನ್ಸ್‌ಪೆಕ್ಟರ್ ಇದ್ದಾರೆ. ಕರ್ಕೊಂಡು ಬಾ ಅವರನ್ನ.

[ವಿಠಲ ಹೋಗಿ ಇನ್ಸ್‌ಪೆಕ್ಟರ್ ರಂಗಸ್ವಾಮಿಯವರನ್ನು ಕರೆದು ಕೊಂಡು ಬರುವನು]

ಹುಡುಗ: ಯಾರಪ್ಪಂಗೂ ಹೆದರೋನಲ್ಲಯ್ಯಾ ನಾನು. ಇನ್ಸ್‌ಪೆಕ್ಟರ್‌ನ ಅಪ್ಪ ಬಂದ್ರೂ ತಾತನ್ನ ಬಿಟ್ಟು ಕೊಡೋಹಾಂಗಿಲ್ಲ ನಾನು.

ರಂಗಸ್ವಾಮಿ: ಏನಾಯ್ತು ಮಾಧವರಾವ್ ?

ಮಾಧು : ಈ ಪೋಲಿ ಯಾರೋ ಗೊತ್ತಿಲ್ಲ. ಅಪ್ಪಾವರನ್ನು ಕರೆದುಕೊಂಡು ಹೋಗೋದಿಕ್ಕೆ ಬಿಡೋದಿಲ್ಲ ಅಂತಿದ್ದಾನೆ—ಮುಠ್ಠಾಳ.

ರಂಗಸ್ವಾಮಿ: ಒಳ್ಳೇ ಮಾತಿನಲ್ಲಿ ಹೊರಡ್ತೀಯೋ ಇಲ್ಲಾ.

[ಶರ್ಟು ಹಿಡಿದೆಳೆಯುವನು]

Sri Vidyabharathi Book Centre, Sringeri

CC-O. In Public Domain. Digitized by eGangotri

ಹುಡುಗ: ಇವನು ನನ್ನ ತಾತಾ. ನಾ ಯಾಕೆ ಹೊರಡಬೇಕು. ಇವ್ರಿಗೇನೂ ಸಂಬಂಧ ಇಲ್ಲ. ತಾತನ್ನ ಯಾಕೆ ಇಚಾರಿಸೋಲ್ಲ.

ರಂಗಸ್ವಾಮಿ: ಹಟ್–ಹಲ್ಕಟ್ ಬಡ್ಡೀ ಮಗನೇ.
[ಹೊಡೆಯುವನು]

ಹುಡುಗ: (ಹಲ್ಲು ಮೂಗಿನಿಂದ ರಕ್ತ ಬರುವುದು) ತಾತಾ ನನ್ನ ಕೈ ಬಿಡ ಬ್ಯಾಡ. ನನ್ನಾಣೆ ಇದೆ ನೀ ಹೋದ್ರೆ.

ರಂಗಸ್ವಾಮಿ: ಇಲ್ಲಿಂದ ಹೊರಡ್ತೀಯೋ ಇಲ್ವೋ.
[ಪುನಃ ಕೈಯೆತ್ತುವನು]

ಅಪ್ಪಾ : (ರಭಸದಿಂದ ಅವನ ಕೈಹಿಡಿದು) ಖಬರ್‌ದಾರ್ ದೂರ ಸರಿಯಿರಿ. ಪೋಲೀಸ್ರನ್ನಿಟ್ಟದ್ದು ಜನರನ್ನ ರಕ್ಷಿಸೋದಕ್ಕೆ, ಶಿಕ್ಷಿಸೋದಕ್ಕಲ್ಲ. ಇನ್ಸ್‌ಪೆಕ್ಟರ್ ಸಾಹೇಬ್! ವಿಚಾರಣೆ ನಡೆಸದೆ ಕೈಯೆತ್ತೋ ಅಧಿಕಾರ ನಿಮಗಿಲ್ಲ. ಈ ರಾಜ್ಯ ನಮ್ಮದು. ನಮ್ಮ ಈ ಪ್ರಪಂಚದಲ್ಲಿ ಕಳ್ಳ ಪಾತ್ರಗಳ ವೇಷ ಹಾಕ್ತೇವೆ. ಜೀವನವಿಡೀ ನಾಟಕ ಮಾಡ್ತೇವೆ. ಆದ್ರೆ ಸತ್ಯವನ್ನೇ ಹೇಳ್ತೇವೆ. ನಿಮ್ಮ ಆ ಪ್ರಪಂಚದಲ್ಲಿ ನಿಜ ಜೀವನದಲ್ಲೇ ವೇಷ ಹಾಕ್ತೀರಿ. ಜೀವನವಿಡೀ ನಾಟಕ ಮಾಡ್ತೀರಿ. ಅದರಲ್ಲಿ ಸುಳ್ಳೇ ಹೇಳ್ತೀರಿ. ನಟ ಸಾಮ್ರಾಟ್ ನಿಮಗೆ ಆಜ್ಞೆ ಮಾಡ್ತಾ ಇದ್ದೇನೆ. ಹೊರಡಿ ಇಲ್ಲಿಂದ. ನಿಮ್ಮ ನ್ಯಾಯಕ್ಕೆ ಇಲ್ಲೇನೂ ಬೆಲೆ ಯಿಲ್ಲ. ನಿಮ್ಮ ಕಾಯಿದೆ ಕಾನೂನುಗಳು ಆ ಕಳ್ಳರ ಪ್ರಪಂಚಕ್ಕೆ. ದರೋಡೆಕೋರರ ಜಗತ್ತಿಗೆ. ನಿಮ್ಮ ಅವಶ್ಯಕತೆ ಅಲ್ಲಿದೆ. ಹೊರಟು ಹೋಗಿ.

ಸುಧಾಕರ: ನಮ್ಮ ಪರಿಸ್ಥಿತಿಯನ್ನು ತಾವು ಅರ್ಥಮಾಡಿಕೊಂಡು ಮನ್ನಿಸಬೇಕು. ನಿಮಗೆ ತುಂಬಾ ತೊಂದ್ರೆ ಕೊಟ್ಟೆವು. ತಾವಲ್ಲಿ ಕಾರಿನ ಬಳಿಯಲ್ಲೇ ನಿಲ್ಲಿ. ನಾವೇ ಕರ್‍ಕೊಂಡು ಬರ್‍ತೇವೆ ಅವರನ್ನಲ್ಲಿಗೆ.

ಅಪ್ಪಾ : ನನ್ನ ರಾಜಾನ್ನ ಹೊಡೆದ್ರಾ. ಅಲ್ಲಾ ನನ್ನ ಮಗುವನ್ನೇ ಹೊಡೆದ್ರಿ.

ಮಾಲತಿ: ಅಪ್ಪಾ ನನ್ನ ಮಾತು ಕೇಳಿ. ನನ್ನ ಮೇಲೆ ಕೋಪಿಸ್ಕೋಬೇಡಿ.

ಅಪ್ಪಾ : ರಾಗ ದ್ವೇಷದ ಒಂದಿಷ್ಟೂ ಕಲ್ಮಷ ನನ್ನ ಮನಸ್ಸಿನಲ್ಲೀಗ ಉಳಿದಿಲ್ಲ ಕಂದಾ. ಯಾರ ಮೇಲೂ ನನಗೆ ದ್ವೇಷವಿಲ್ಲ. ಹೋಗಿ, ನೀವೆಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋಗಿ. ಹಾಂ ವಸಂತ ಋತುವಿನ ಉತ್ಸಾಹ ನನ್ನ ಈ ನರನಾಡಿಗಳಲ್ಲಿ ಸಂಚರಿಸತೊಡಗಿದೆ. ಹೊಸ ನಾಟಕದ ಪರದೆ ಮೇಲೇರುವ ಸಮಯ ಬಂದಿದೆ. ಮೂರನೆಯ ಘಂಟೆ ಬಾರಿಸ್ತಾ ಇದೆ.

[ನಾಟಕಾರಂಭದ ಹಾರ್ಮೋನಿಯಂ ಸಂಗೀತ]

ಶುರುವಾಯ್ತು. ರಂಗಪೂಜೆಯ ಧೂಪಾರತಿಯ ರಂಗಭೂಮಿ ತುಂಬಿ ಸುವಾಸನೆ ಬೀರುತ್ತಲಿದೆ. ನನ್ನ ನಟಿಯಾದರೋ ನನಗಿಂತ ಮುಂಚಿತವಾಗಿಯೇ ರಂಗ ಪ್ರವೇಶಿಸಿ ದಾರಿ ಕಾಯುತ್ತಿದ್ದಾಳೆ ನನಗಾಗಿ. ನಾನಿನ್ನು ತಡಮಾಡಬಾರದು. ಆದರೊಂದೇ ಋಣ ಬಾಕಿ ಉಳಿದಿದೆ. ರಂಗಭೂಮಿ, ಅಭಿನಯ ಅಂದ್ರೇನೂಂತ ನನ್ನ ರಾಜಾ ಕೇಳಿದ್ದ. ಬಾ ರಾಜಾ, ಬಾ ಮುನ್ನೀ ನಿನಗೆ ನನ್ನ ನಾಟಕದ ಸಂಭಾಷಣೆ ಕೇಳ್ಬೇಕಾಗಿತ್ತಲ್ಲಾ ಮಗೂ ? ಬಾ. ಹತ್ತಿರ ಬಾ. (ಇಬ್ಬರನ್ನೂ ಹಿಡಿದುಕೊಂಡು) ಕಲಾವಿದನ ಬಳಿ ಕೊಡ್ಲಿಕ್ಕಿರೋದು ಬರೇ ಕಲೆ ಮಾತ್ರ. ಕಲಾವಿದನ ಕೋಶದಲ್ಲಿ ಉಳಿದದ್ದೂಂದ್ರೆ ಇದೊಂದೇ. ದಾನಶೂರ ಕರ್ಣನ ಕಲಶ ಕುಂಡಲಗಳಂತೆ. ರಾಜಾ ಕೇಳು ಕವಿವರ್ಯರನುಭವದ ಮಾತುಗಳ :

*"ನೆಲವೆಲ್ಲ ಆಟದ ಅಟ್ಟ, ಮತ್ತೆ ಎಲ್ಲಾ ಗಂಡು ಹೆಣ್ಣು
ಬರಿ ಆಟ ನಟಿಸುವರು, ಅಟ್ಟವನು ಏರುವುದು,
ಬಿಟ್ಟು ಹೊರಡುವುದು ಅವರವರಿಗುಂಟು.
ಒಬ್ಬನೇ ಆಡುವನು ಹಲವು ಪಾತ್ರ
ಏಳಂಕು ಏಳು ಮೆಟ್ಟು ಮೊಟ್ಟ ಮೊದಲಿಗೆ ಕೂಸು
ಆಮೇಲೆ ಹರೆಯ, ಮತ್ತೆ ಆ ಮಹಾ ಶೂರ...
ಮುಂದೆ ಊರಿನ ಹಿರಿಯ, ಪಾತ್ರಕ್ಕೆ ತಕ್ಕಂತೆ ಆಟ ನೋಟ...
ಎಲ್ಲಕ್ಕೂ ಕೊನೆಮೆಟ್ಟು. ಮತ್ತೆ ಮರಳಿತ್ತು ಕೂಸುತನ,
ಸರುವವೂ ಅರೆ ಮರೆವು, ಹಲ್ಲಿಲ್ಲ, ಕಣ್ಣಿಲ್ಲ ;
ರುಚಿಯಿಲ್ಲ ; ಎಲ್ಲವೂ ಬರಿ ಇಲ್ಲ."

---

* ಆ್ಯಸ್‌ಯು ಲೈಕ್ ಇಟ್ II vii 139–166 —ಅಂಬಿಕಾತನಯದತ್ತ

[ನಾಟಕದ ಈ ಸಂದರ್ಭಕ್ಕೆ ಈ ಸಾಲುಗಳು ಯುಕ್ತವೆನಿಸಿದ್ದರಿಂದ ಇವನ್ನು ಆರಿಸಿಕೊಳ್ಳಲಾಗಿದೆ]

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಲತಿ: ಅಪ್ಪಾ ಇದು ಪಬ್ಲಿಕ್ ರಸ್ತೆ. ಸಾವಿರಾರು ಜನ ಓಡಾಡುವ ದಾರಿಯಲ್ಲಿ ಈ ರೀತಿ ಮಾತಾಡಿದರೆ ನಮ್ಮನ್ನೇನು ತಿಳ್ಕೊಂಡಾರು ? ಬನ್ನಿ ಹೋಗೋಣ. ದಯ:ವಿಟ್ಟು ಹೋಗೋಣ.

ಅಪ್ಪಾ : ದೂರ ಸರಿ. ಬೇಕಿಲ್ಲ ನಿನ್ನ ದಯೆ ದಾಕ್ಷಿಣ್ಯಗಳ ದಾನ. ದಯೆ ತೋರಿಸೀಂತ ಜೂಲಿಯಸ್ ಸೀಸರ್ ಯಾರ ಕಾಲಿಗೂ ಬಿದ್ದಿಲ್ಲ. ಉಳಿದವರೆಲ್ಲ ಅವನ ಕಾಲಿಗೆ ಬಿದ್ದರೂ ಕನಿಕರ ತೋರಲೂ ಇಲ್ಲ. ಸೀಸರ್ ಪರ್ವತದಂತೆ ನಿಶ್ಚಲ. ರಾಜಾ, ನೋಡಲ್ಲಿ ! ಆಗಸದಲ್ಲಿ ಮಿನುಗುವ ಸಾವಿರಾರು ತಾರೆಗಳು ಬೆಳಗುತಿವೆ. ನೋಡಲ್ಲಿ Hamlet, ಒಥೆಲ್ಲೊ, ಸೀಸರ್ ! ಯಾರಲ್ಲಿ ? ಜೂಲಿಯಸ್ ಸೀಸರ್ ? ಹೌದು ಅಖಿಲ ಬ್ರಹ್ಮಾಂಡದಲ್ಲಿ ಜನಿಸಿದ ಕೋಟಿಗಟ್ಟಲೆ ಮಾನವರಲ್ಲಿ ಭಿನ್ನವಾಗಿ ಕಾಣಿಸುವ ಧ್ರುವತಾರೆ ಸೀಸರ್ ! ನಾನೇಕೆ ಸನ್ನನ್ನೇ ನೋಡುತ್ತಿದ್ದೇನೆ. ಹೌದು ನಾನೇ ಸೀಸರ್. ನನ್ನ ಶರೀರದ ಕಣ ಕಣಗಳಲ್ಲಿ ಈ ಎಲ್ಲ ಮಹಾಪುರುಷರು ನೆಲೆಸಿದ್ದಾರೆ. (ಹಾ...ಯ್–ಎದೆಗೆ ಯಾರೋ ಚೂರಿ ಹಾಕಿದಂತೆ ನಟಿಸುವನು) ರಾಜಾ ನೋಡಲ್ಲಿ Cassius, Casca. ಇನ್ನಿತರ ಹತ್ತಾರು ಮಂದಿ. ನೋಡಲ್ಲಿ ಕೊಲೆಗಾರರ ಝಳಪಿಸುವ ಖಡ್ಗ ಥಳಥಳಿಸುತಿದೆ. ಜೂಲಿಯಸ್ ಸೀಸರನ ಎದೆಯ ತಿವಿಯಲು ಎಲ್ಲ ಕಡೆಯಿಂದ ಮುನ್ನುಗ್ಗಿದ್ದಾರೆ. ಕತ್ತಿ ಮಸೆಯಲು ಕೈಯೆತ್ತಿದ್ದಾರೆ. (ಗಟ್ಟಿಯಾಗಿ) ಯಾರಲ್ಲಿ ? ಬ್ರೂಟಸ್ ನೀ ಕೂಡ ಇದರಲ್ಲಿ. ಅಂತಾದೊಡೆ ಸೀಸರ್ ಉರುಳಲಿ. (ಎಂದು ನೆಲಕ್ಕುರುಳುವನು. ಮಾಧು, ಮಾಲತಿ ಅಪ್ಪಾ ಅಪ್ಪಾ ಎಂದು ಗಾಬರಿಯಿಂದ ಹತ್ತಿರ ಬರುವರು. ತಾತಾ ಎಂದು ರಾಜಾ ಅವನನ್ನೆತ್ತಿ ಹಿಡಿಯುವನು) ನಿಜವಾದ ನಾಟಕಾಂದ್ರೆ ಹೀಗಿರುತ್ತೆ ರಾಜಾ. ನಿ...ಜ...ವಾ...ದ ನಾಟಕಾ...ಂದ್ರೆ...ಹೀ...ಗಿ...ರು...ತ್ತೆ. ರಾ...ಜಾ...ಮುನ್ನೀ...

[ಉರುಳುವನು. ದೀಪ ಆರುವುದು]

ಹಾರ್ಮೋನಿಯಂ ಸಂಗೀತದ ಧ್ವನಿ ಏರುವುದು. ಎಲ್ಲರೂ ಸ್ತಬ್ಧರಾಗಿದ್ದಾರೆ. ಮಾಧು, ಮಾಲತಿ ಅಳುತ್ತಿದ್ದಾರೆ.

ತೆರೆ ಬೀಳುವುದು.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಕನ್ನಡ ಕಾದಂಬರಿ ಸಾರ್ವಭೌಮರೆನಿಸಿದ
ಕೀರ್ತಿಶೇಷ ಅ. ನ ಕೃ. ಅವರ ಅನೇಕ
ಕಾದಂಬರಿಗಳು ನಮ್ಮ ಮಾಲೆಯಲ್ಲಿ ಆಕರ್ಷಕ
ಮುಖಪುಟದೊಡನೆ ಹೊರಬರಲಿವೆ!

ಮುಯ್ಯಿಗೆ ಮುಯ್ಯಿ

ಮುಡಿ ಮಲ್ಲಿಗೆ

ಭೂಮಿತಾಯಿ

ಅಭಿಮಾನ

ಕಂಕಣ ಬಲ

ಐಬಿಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು-560 009

Sri Vidyabharathi Book Centre, Sringeri